2. ರಾಯಚೂರು ಜಿಲ್ಲೆಯಲ್ಲಿ ಮಕ್ಕಳ ಚಲನಚಿತ್ರವನ್ನು ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಾನುಸಾರ 5ನೇ ಪ್ರದರ್ಶನವನ್ನಾಗಿ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 14.6.2002ರಂದು ಹೊರಡಿಸಲಾದ ಒಸಾಇ:23:ಸಿಎನ್‌ಎ:2002ನೇ ಸಂಖ್ಯೆಯ ಅಧಿಸೂಚನೆ.

3. ಬೆಂಗಳೂರು ನಗರ ಜಿಲ್ಲೆಯಲ್ಲಿ ಮಕ್ಕಳ ಚಲನಚಿತ್ರವನ್ನು ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮಾನುಸಾರ 5ನೇ ಪ್ರದರ್ಶನವನ್ನಾಗಿ ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 15.6.2002 ರಂದು ಹೊರಡಿಸಲಾದ ಒಸಾಇ:30:ಸಿಎನ್‌ಎ:2001ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

V. ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) ಅವರು: ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213(2) (ಎ) ಅನುಚ್ಛೇದದ ಮೇರೆಗೆ:

1966ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಬಂಧನೆ) ಅಧಿನಿಯಮದ ಪ್ರಕರಣ 2,10,11,14,15,39 ಮತ್ತು 65 ರಲ್ಲಿ ತಿದ್ದುಪಡಿ ಮಾಡಿ ದಿನಾಂಕ 11.4.2002ರಂದು ಹೊರಡಿಸಲಾದ ಡಿಪಿಎಎಲ್:17:ಶಾಸನ:2002ನೇ ಕ್ರಮಾಂಕದ ಅಧ್ಯಾದೇಶ ಸಂಖ್ಯೆ-4ನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

9) ನಿಯಮ 69ನೇ ಮೇರೆಗೆ

ವಿಷಯ: ಮುಂಗಾರು ಮಳೆ ವಿಫಲದಿಂದಾಗಿ ರಾಜ್ಯದಲ್ಲಿ ಬರ ಪರಿಸ್ಥಿತಿ ಉಂಟಾಗಿರುವ ಬಗ್ಗೆ ಹಾಗೂ ಬೆಳೆ ವಿಮೆ ಕುರಿತು

ಅಧ್ಯಕ್ಷರು: ಈಗ ವಿತ್ತೀಯ ಕಾರ್ಯಕ್ರಮವೆಂದಿದೆ. ಆದರೆ, ವಿರೋಧ ಪಕ್ಷದ ನಾಯಕರು, ಮಾನ್ಯ ಸಿಂಧ್ಯರವರು, ಮಾನ್ಯ ಹನುಮೇಗೌಡರವರು, ಎಲ್ಲರೂ ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಬಹಳ ಪ್ರಮುಖವಾದ ವಿಷಯವೆಂದರೆ, ಬರ ಮತ್ತು ಬೆಲೆ ವಿಮೆ. ಅದರ ಬಗ್ಗೆ ಸರ್ಕಾರದವರೇನು ಹೇಳುತ್ತಾರೆ?

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) : ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಕಡೆಯಿಂದ ವಿರೋಧ ಬರುವುದಿಲ್ಲ. ಆದ್ದರಿಂದ ನಾನು ಸ್ವಲ್ಪ ವಿಷಯವನ್ನು ಪ್ರಸ್ತಾಪ ಮಾಡುತ್ತಾನೆ.

Mr. SPEAKER: We will confert the adjournment motion into Rule 69. We will take it up under Rule 69. ತಾವು ಪ್ರಾರಂಭ ಮಾಡಿ.

ಶ್ರೀ ಕರಡಿ ಸಂಗಣ್ಣ: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ನೀವು ಮಾತನಾಡಬೇಕೆಂದಿರುವ ಅಂಬೇಡ್ಕರ್ ಪ್ರತಿಮೆಗೆ ಸಂಬಂಧಪಟ್ಟ ಬಗ್ಗೆ ತಾವು ಬರೆದ ಪತ್ರ ಇವತ್ತು ತಾನೇ ಬಂದಿದೆ ನಾನು ಅದನ್ನು ಹೋಂ ಮಿನಿಸ್ಟರ್‌ರವರಿಗೆ ಕಳುಹಿಸಿದ್ದೇನೆ. ಅವರ ವಿವರ ತರಿಸಲಿ ನೀವು ಅದರ ಬಗ್ಗೆ ನಾಳೆ ಮಾತನಾಡಿ. ಅವರ ವಿವರಣೆಯಿಲ್ಲದೆ, ನೀವು ಹೇಳಿ ಏನು ಪ್ರಯೋಜನ?

ಶ್ರೀ ಮಲ್ಲಿಕಾರ್ಜುನ ಖರ್ಗೆ: (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಅವರು ಆ ಪತ್ರವನ್ನು ನನ್ನ ಹತ್ತಿರ ಕೊಟ್ಟಿದ್ದಾರೆ. ನಾನು ತಕ್ಷಣ ಡಿಸಿಪಿಯವರಿಗೆ ಕಳುಹಿಸಿದ್ದೇನೆ. ಅವರೊಡನೆ ಮಾತು ಕೂಡ ಆಡಿದ್ದೇನೆ. ಇದರ ಬಗ್ಗೆ ನಾನು ಅವರಿಗೆ ಹೇಳಿದ್ದೇನೆ.

ಅಧ್ಯಕ್ಷರು: ಉತ್ತರ ಬಂದ ಮೇಲೆ ಅವರು ಹೇಳುತ್ತಾರೆ. ನೀವು ನಾಳೆ ವಿಷಯವನ್ನು ಪ್ರಸ್ತಾಪ ಮಾಡಬಹುದು.

+ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಬರಗಾಲದ ಪರಿಸ್ಥಿತಿ ಬಗ್ಗೆ ಮತ್ತೆ ಸರ್ಕಾರ ತೀವ್ರ ಗಮನಹರಿಸಬೇಕು, ರೈತರಿಗಾದ ತೊಂದರೆಯನ್ನು ನಿವಾರಿಸಬೇಕೆನ್ನುವ ವಿಷಯವನ್ನು ಸದನದ ಪ್ರಾರಂಭದ ದಿವಸದಲ್ಲಿಯೇ ನಾವು ನಿಲುವಳಿ ಸೂಚನೆ ಮೂಲಕ ಎತ್ತುತ್ತೇವೆಂಬ ಕಲ್ಪನೆ ನಮಗೂ ಇರಲಿಲ್ಲ. ಕಳೆದ 2 ವರ್ಷಗಳಿಂದ ಈ ರಾಜ್ಯದಲ್ಲಿ ಮಳೆಯಿಲ್ಲದೆ ಬರಗಾಲದ ಪರಿಸ್ಥಿತಿ ಉಂಟಾಗಿ, ರೈತರು ಸಂಕಷ್ಟದಲ್ಲಿದ್ದುದು, ಜಾನುವಾರುಗಳನ್ನು ಮಾರುವ ಸ್ಥಿತಿ ಬಂದಿದ್ದು, ಜಾನುವಾರುಗಳಿಗೆ ಮೇವಿಲ್ಲದೆ ಪರಿಸ್ಥಿತಿ ಉಂಟಾಗಿದ್ದನ್ನು ನಾವು ನೋಡುತ್ತಿದ್ದೇವೆ. ರೈತರು, ಕೃಷಿ ಕಾರ್ಮಿಕರು, ಬೇರೆ ರಾಜ್ಯಗಳಿಗೆ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದ್ದನ್ನು ನಾವು ನೋಡುತ್ತಿದ್ದೇವೆ. ಬಹುಶಃ ಈ ವರ್ಷ ಕೆಲವೊಂದು ಭಾಗದಲ್ಲಿ ಮೊದಲ ಹಂತದಲ್ಲಿ ಮಳೆ ಚೆನ್ನಾಗಿ ಆಯಿತು, ಈ ಸಲ ರೈತ ಸಂತುಷ್ಟನಾಗಿದ್ದಾನೆ, ಒಳ್ಳೆಯ ಬೆಳೆ ಬರುತ್ತದೆ, ಈ ರಾಜ್ಯದಲ್ಲಿ ಬರಗಾಲ ಹೋಯಿತೆಂದು ತಾವು ತಿಳಿದು ಕೊಂಡಿದ್ದೇವು. ಆದರೆ, ಕಳೆದ 8-10 ದಿವಸಗಳಲ್ಲಿ ಇಡೀ ರಾಜ್ಯದಲ್ಲಿ ಮುಂಗಾರು ಮಳೆ ಫೇಲ್ ಆಗಿ ಮತ್ತೆ ಅದೇ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುಶ ನನಗನ್ನಿಸುತ್ತದೆ, ಇನ್ನು 2-3 ದಿನಗಳಲ್ಲಿ ಬರುವ ಮಳೆ ಬರದಿದ್ದರೆ, ಕಳೆದ ವರ್ಷ, ಅದರ ಹಿಂದಿನ ವರ್ಷ ಏನು ಭೀಕರ ಬರಗಾಲವನ್ನು ಅನುಭವಿಸಿದ್ದೆವು, ಅದಕ್ಕಿಂತಲೂ ಹೆಚ್ಚಿನ ಭೀಕರ ಬರಗಾಲವನ್ನು ನಾವು ಅನುಭವಿಸಬೇಕಾಗುತ್ತದೆ. ಅದಕ್ಕೆ ಸರ್ಕಾರದ ಗಮನ ಸೆಳೆಯಬೇಕಾಗಿದೆ. ಸರ್ಕಾರ ಎಚ್ಚೆತ್ತುಕೊಳ್ಳಬೇಕಾಗಿದೆ. ಹಿಂದಿನ ಸಂದರ್ಭದಲ್ಲಿ ಬರಗಾಲ ಬಂದು, ರೈತ ಸಂಕಷ್ಟಕ್ಕೀಡಾಗಿ, ದನಕರುಗಳನ್ನು ಮಾರುವ ಪರಿಸ್ಥಿತಿ ನಿರ್ಮಾಣವಾಗಿ, ಮೇವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿ ಸರ್ಕಾರ ಆಗ ಏನೂ ಎಚ್ಚೆತ್ತುಕೊಳ್ಳಲಿಲ್ಲ. ಬರಗಾಲ ಕಾಮಗಾರಿಗಳನ್ನು ತತ್‌ಕ್ಷಣ ಕೈಗೊಳ್ಳಲಿಲ್ಲ ಮತ್ತೆ ಅದೇ ಪರಿಸ್ಥಿತಿ ನಿರ್ಮಾಣವಾಗಬಾರದೆಂಬ ದೃಷ್ಟಿಯಿಂದ ತತ್‌ಕ್ಷಣವೇ ಸರ್ಕಾರ ಇದಕ್ಕೆ ಪ್ರಿಕಾಷನ್ ಏನು ತೆಗೆದುಕೊಳ್ಳಬೇಕು, ಅದರ ಬಗ್ಗೆ ಸರ್ಕಾರವನ್ನು ಎಚ್ಚರ ಮಾಡುವ ಸಲುವಾಗಿ ನಾವು ಇವತ್ತು ಈ ನಿಲುವಳಿ ಸೂಚನೆ ಮೂಲಕ ಸರ್ಕಾರದ ಮೇಲೆ ಒತ್ತಡ ತರುವ ಕೆಲಸವನ್ನು ಮಾಡುತ್ತಿದ್ದೇವೆ. ಇವತ್ತು ಬೇರೆ ಬೇರೆ ತಾಲ್ಲೂಕುಗಳಿಂದ ಬಂದ ವರದಿಯನ್ನು ನೋಡಿದಾಗ ಮತ್ತು ನಮ್ಮ ಕೃಷಿ ಆಯುಕ್ತರಾದ ಡಾ: ಸುಬ್ರಹ್ಮಣ್ಯರವರು ನೀಡಿದ ಹೇಳಿಕೆ, ಪತ್ರಿಕೆಯಲ್ಲಿ ಬಂದ ವರದಿಗಳನ್ನು ನೋಡಿದಾಗ, ಇವತ್ತು ಇಡೀ ರಾಜ್ಯದ ಬಹುತೇಕ ತಾಲ್ಲೂಕುಗಳಲ್ಲಿ ಮತ್ತೆ ಬರದ ಛಾಯೆ ಮೂಡಿದೆ, ಆ ಬರಗಾಲದ ಪರಿಸ್ಥಿತಿ

ನಿರ್ಮಾಣವಾಗಿದೆ, ಮತ್ತೆ ರೈತರ ಮುಂದಿನ ಭವಿಷ್ಯವೇನೆಂದು ವಿಚಾರ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಳೆ ನಷ್ಟದಿಂದ ಅಥವಾ ಆತ್ಮಸ್ಥೈರ್ಯ ಕಳೆದುಕೊಂಡಿದ್ದರಿಂದ ಇರಬಹುದು ಅಥವಾ ಬರಗಾಲ ಪರಿಸ್ಥಿತಿಯಿಂದ ಕಳೆದ ಎರಡು ವರ್ಷಗಳಲ್ಲಿ ಸುಮಾರು 150ಕ್ಕಿಂಥ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದು ನಮ್ಮ ಕಣ್ಣು ಮುಂದೆ ಇದೆ. ಮತ್ತೆ ಈ ವರ್ಷದ ಬರಗಾಲದ ಪರಿಸ್ಥಿತಿಯನ್ನು ನೋಡಿದಾಗ ರೈತನ ಪರಿಸ್ಥಿತಿ ಮುಂದೆ ಏನು ಆಗಬಹುದು ಎನ್ನತಕ್ಕಂಥದ್ದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಕಂದಾಯ ಸಚಿವರು ಮತ್ತು ಮಾನ್ಯ ಕೃಷಿ ಸಚಿವರು ಇವತ್ತಿನ ಸಭೆಯಲ್ಲಿದ್ದಾರೆ. ಇವರಿಗೂ ಸಹ ಬೇರೆ ಬೇರೆ ಭಾಗಗಳ ಜಿಲ್ಲಾಧಿಕಾರಿಗಳು ವರದಿಯನ್ನು ಕಳುಹಿಸಿಕೊಟ್ಟಿರಬಹುದು. ಒಂದು ವೇಳೆ ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನು ಮತ್ತು ಇದರ ಬಗ್ಗೆ ನಿಮ್ಮ ಇಲಾಖೆಯ ಅಧಿಕಾರಿಗಳು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ವಿಷಯವನ್ನು ಈ ಸದನದ ಮುಂದೆ ಬಹಿರಂಗಪಡಿಸಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಈ ಸಂದರ್ಭದಲ್ಲಿ ನಾನು ಪ್ರಮುಖವಾಗಿ ಹೇಳುವುದೇನೆಂದರೆ, ನಮ್ಮ ರಾಜ್ಯದ ಹವಾಮಾನದ ಪರಿಸ್ಥಿತಿ ಬಗ್ಗೆ ನಾನು ವರದಿಯನ್ನು ಪಡೆದುಕೊಂಡಿದ್ದೇನೆ. ಬರ ಬರಿಹಾರ ಮತ್ತು ಉಸ್ತುವಾರಿ ಕೋಶ ನಿರ್ದೇಶಕರು ಪ್ರತಿ ವಾರ ವಾರದ ಹವಾಮಾನ ಮತ್ತು ಬೆಳೆ ಪರಿಸ್ಥಿತಿ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ. ಜೂನ್ 26 ರಿಂದ ಜುಲೈ ಒಂದರ ವರೆಗಿನ ವರದಿಯನ್ನು ನೋಡಿದಾಗ ರಾಜ್ಯದ ಈಗಿನ ಮಳೆ ಪರಿಸ್ಥಿತಿಯಿಂದ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿ ಬಹಳಷ್ಟು ಗಂಭೀರವಾದ ಪರಿಸ್ಥಿತಿ ಉಂಟಾಗುತ್ತದೆ ಎನ್ನತಕ್ಕಂಥದ್ದು ಸದರಿ ವರದಿಯಿಂದ ತಿಳಿದುಕೊಳ್ಳಬಹುದು. ಸದರಿ ವರದಿಯಲ್ಲಿ ಏನು ಹೇಳಿದ್ದಾರೆ ಎಂದರೆ, ರಾಜ್ಯದಲ್ಲಿ ಪ್ರಸ್ತುತ ವಾರ, ಅಂದರೆ, ಜೂನ್ 26ರಿಂದ ಜುಲೈ 1, ರ 2002ರ ವರೆಗೆ ಮುಂಗಾರು ಮಳೆ ಕ್ಷೀಣಗೊಂಡು ಅತ್ಯಂತ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಳೆ ಕೊರತೆ ಇರುವುದು ಕಂಡು ಬಂದಿದೆ. ಹಾಗೆಯೇ, ಪ್ರಸ್ತುತ ವಾರದಲ್ಲಿ ರಾಜ್ಯದ 167 ತಾಲ್ಲೂಕುಗಳಿಂದ ಮಳೆ ವರದಿ ಬಂದಿದ್ದು, ಆ ಪೈಕಿ ಎರಡು ತಾಲ್ಲೂಕುಗಳಾದ ಬೆಳಗಾಂ ಮತ್ತು ಸೋಮಾರ್ ಪೇಟೆಯಲ್ಲಿ ಅಧಿಕ ಮಳೆಯಾಗಿದ್ದು 8 ತಾಲ್ಲೂಕುಗಳಲ್ಲಿ ಮಾಮೂಲು ಮಳೆಯಾಗಿದೆ. ಹಾಗೆಯೇ, 12 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದ್ದು, ಇನ್ನು 101 ತಾಲ್ಲೂಕುಗಳಲ್ಲಿ ತೀವ್ರ ಮಳೆಯ ಕೊರತೆ ಇದೆ ಎಂದು ಸದರಿ ವರದಿಯಲ್ಲಿ ತಿಳಿಸಿದ್ದಾರೆ. ಉಳಿದ 44 ತಾಲ್ಲೂಕುಗಳಲ್ಲಿ ಮಳೆ ಆಗಿಲ್ಲ. ಹೀಗಾಗಿ ಕಳೆದ ಸಾಲಿನಲ್ಲಿ, 9 ತಾಲ್ಲೂಕುಗಳಲ್ಲಿ ಅಧಿಕ ಮಳೆ ಮತ್ತು 14 ತಾಲ್ಲೂಕುಗಳಲ್ಲಿ ಮಾಮೂಲು ಮಳೆ ಮತ್ತು 152 ತಾಲ್ಲೂಕುಗಳಲ್ಲಿ ಮಳೆಯ ಕೊರತೆ ಇತ್ತು. ಆದ್ದರಿಂದ ಕಳೆದ ಸಾಲಿನ ಅವಧಿಗೆ ಹೋಲಿಸಿದಾಗ ಪ್ರಸಕ್ತ ಸಾಲಿನಲ್ಲಿ ಉತ್ತಮ ಮಳೆ ಆಗಿರುವುದಿಲ್ಲ. ಕಳೆದ ಸಾಲಿಗಿಂತ ಈ ವರ್ಷ ಕಡಿಮೆ ಮಳೆಯಾಗಿದೆ. ಹೋದ ವರ್ಷ ಈಗಾಗಲೇ ಬರಗಾಲದ ಪರಿಸ್ಥಿತಿಯನ್ನು ಎದುರಿಸಿದ್ದೇವೆ. ಮತ್ತೆ ಈ ವರ್ಷ ಬರಗಾಲದ ಬವಣೆಯನ್ನು ಎದುರಿಸತಕ್ಕಂಥ ಮುನ್ಸೂಚನೆ ಕಾಣುತ್ತಿದ್ದೇವೆ. ಹವಾಮಾನದ ವರದಿಯನ್ನು ನೋಡಿದಾಗ ಬರುವ ದಿನಗಳಲ್ಲಿ ಮಳೆ ಆಗಲಾರದಂಥ ಪರಿಸ್ಥಿತಿ ಇದೆ ಎನ್ನತಕ್ಕಂಥ ಸೂಚನೆಗಳಿವೆ. ಬರ ಪರಿಹಾರ ಮತ್ತು ಉಸ್ತುವಾರಿ ಕೋಶದವರು ಒಂದು ಮ್ಯಾಪ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದನ್ನು ನೋಡಿದಾಗ ಬರಗಾಲದ ಪರಿಸ್ಥಿತಿ ಎಷ್ಟೊಂದು ಗಂಭೀರವಾಗಿದೆ ಎನ್ನತಕ್ಕಂಥದ್ದನ್ನು ನಾವು

ತಿಳಿದುಕೊಳ್ಳಬಹುದಾಗಿದೆ. ಈ ಒಂದು ಕರ್ನಾಟಕ ರಾಜ್ಯದ ಮ್ಯಾಪ್‌ನಲ್ಲಿ ಕಪ್ಪು ಬಣ್ಣದಿಂದ ತೋರಿಸಿರುವ ಪ್ರದೇಶಗಳಲ್ಲಿ ಮಳೆ ಆಗುವುದಿಲ್ಲ ಎನ್ನತಕ್ಕಂಥ ಮುನ್ಸೂಚನೆಯನ್ನು ಕೊಟ್ಟಿದ್ದಾರೆ ಹಾಗಾದರೆ ಇದರ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ? ಬರುವ ದಿನಗಳಲ್ಲಿ ಬರತಕ್ಕಂಥ ಬರಗಾಲ ಪರಿಸ್ಥಿತಿಗೆ ಒಳಗಾಗತಕ್ಕಂಥ ರೈತರಿಗೆ ಯಾವರೀತಿಯಾದ ರಕ್ಷಣೆ ಮತ್ತು ಪರಿಹಾರ ಒದಗಿಸಿಕೊಡುತ್ತೀರಿ ಎನ್ನತಕ್ಕಂಥದ್ದನ್ನು ಈ ಸದನದ ಮುಂದೆ ಬೆಳಕು ಚೆಲ್ಲಬೇಕೆಂದು ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ನಾನು ಬೆಳಿಗ್ಗೆ ಎದ್ದ ತಕ್ಷಣ ಹಿಂದೂ ದಿನ ಪತ್ರಿಕೆಯನ್ನು ನೋಡುತ್ತೇನೆ. ದಿನ ಹಿಂದೂ ದಿನ ಪತ್ರಿಕೆಯ ನಾಲ್ಕನೇ ಪುಟದಲ್ಲಿ ಭಾರತದ ಚಿತ್ರ ಕೊಟ್ಟು, ಮಾನ್ಸೂನ್ ಬರತಕ್ಕಂಥದ್ದನ್ನು ಅದರಲ್ಲಿ ತೋರಿಸುತ್ತಾರೆ. ಇವತ್ತು ಹಾಕಿರತಕ್ಕ ಚಿತ್ರದಲ್ಲಿ ಮಾನ್ಸೂನ್ ಜೋರಾಗಿ ಬರುತ್ತಿರುವುದನ್ನು ತೋರಿಸಿದ್ದಾರೆ ನೋಡಿ.

ಶ್ರೀ ಜಗದೀಶ್ ಶೆಟ್ಟರ್: ಇನ್ನು ಎರಡು-ಮೂರು ದಿನಗಳಲ್ಲಿ ಮಳೆ ಬಂದರೆ ನಾವೆಲ್ಲರೂ ಸಹ ಸಂತೋಷ ಪಡುತ್ತೇವೆ.

ಅಧ್ಯಕ್ಷರು: ಎಲ್ಲರೂ ಸಹ ದೇವರನ್ನು ಪ್ರಾರ್ಥನೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್: ಸರ್ಕಾರಕ್ಕೆ ಈಗಾಗಲೇ ನೀಡಿರತಕ್ಕಂಥ ವರದಿಯ ಪ್ರಕಾರ ಮಳೆಯ ಕೊರತೆಯನ್ನು ನಾವು ಕಾಣುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೆ, ದೇವರನ್ನು ಪ್ರಾರ್ಥನೆ ಮಾಡಿದರೆ ಮಳೆ ಬರುವುದಿಲ್ಲ. ಹಿಂದೆ ನಮ್ಮ ಮಂತ್ರಿಗಳೊಬ್ಬರು ಮಳೆ ಬರಲೆಂದು ತಿಪ್ಪಗೊಂಡನಹಳ್ಳಿ ಹತ್ತಿರ ಜಪ ಮಾಡಿಸಿದ್ದರು. ಅಂಥದ್ದನ್ನು ಈಗಲೂ ಸಹ ಮಾಡಿಸಿದರೆ ಮಳೆ ಬರಹುದು. ಅದು ಭರ್ಜರಿ ಜಪ ಇರಬಹುದು. ಅದು ಯಾವ ಜಪ ಎಂದು ನನಗೆ ಸರಿಯಾಗಿ ಗೊತ್ತಿಲ್ಲ ನಾವು ಈಗಾಗಲೇ ಮಳೆರಾಯನ ಪೂಜೆ ಮಾಡಿಸಿದ್ದೇವೆ. ಆದರೂ ಕೂಡ ಇನ್ನೂ ಮಳೆ ಆಗಿಲ್ಲ. ಆದ್ದರಿಂದ ಆ ಜಪವನ್ನು ಮಾಡಿಸಿ ಮಳೆ ಬರುತ್ತದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದನ್ನು ನೋಡಿ.

ಶ್ರೀ ಜಗದೀಶ್ ಶೆಟ್ಟರ್: ಇನ್ನೊಂದು ಪ್ರಮುಖವಾದ ವಿಷಯವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಕೃಷಿಗೆ ಹೆಚ್ಚಿನ ಒತ್ತನ್ನು ಕೊಡುತ್ತೇವೆ ಮತ್ತು ಗ್ರಾಮೀಣಾಭಿವೃದ್ಧಿ ಸಲುವಾಗಿ ಸಾಕಷ್ಟು ಪ್ರಯತ್ನ ಮಾಡುತ್ತೇವೆ. ಹಾಗೆಯೇ, ಇದರ ಬಗ್ಗೆ ಧರ್ಮ ಯುದ್ಧವನ್ನು ಮಾಡುತ್ತೇವೆಂದು ರಾಜ್ಯ ಸರ್ಕಾರ ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಸಾಕಷ್ಟು ಹೇಳಿಕೆಗಳನ್ನು ಕೊಟ್ಟಿರತಕ್ಕಂಥದನ್ನು ನಾವು ನೋಡಿದ್ದೇವೆ. ರೈತರಿಗೆ ಸಂಕಷ್ಟ ಬಂದಂಥ ಸಂದರ್ಭದಲ್ಲಿ, ರೈತ ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗದಿದ್ದರೆ, ಆವರ್ತ ನಿಧಿ ಸ್ಥಾಪನೆ ಮಾಡಿ ಅದರ ಮುಖಾಂತರ ರೈತರು ಬೆಳೆದಂಥ ಬೆಳೆಯನ್ನು ಖರೀದಿ ಮಾಡುತ್ತೇವೆ ಎನ್ನುತಕ್ಕಂಥ ಮಾತನ್ನು ಸನ್ಮಾನ್ಯ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಯವರು ಸಾಕಷ್ಟು ಸಲ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ

ಎರಡು ವರ್ಷಗಳಿಂದ ಬರಗಾಲ ಪೀಡಿತರಾಗಿರತಕ್ಕಂಥ ರೈತರು ಈ ಸಾರಿ ಬೆಳೆ ವಿಮೆಗೆ ಪ್ರೀಮಿಯಂ ಹಣವನ್ನು ತುಂಬಿದ್ದಾರೆ. ಬೆಳೆ ನಷ್ಟವಾಗಿದ್ದಕ್ಕೆ ಅಥವಾ ಎಷ್ಟು ಬೆಳೆ ಬರಬೇಕಾಗಿತ್ತೋ ಅಷ್ಟು ಬೆಳೆ ಬರದೇ ಇರತಕ್ಕಂಥ ಸಂದರ್ಭದಲ್ಲಿ ಮತ್ತು ಇನ್ನು ಹಲವಾರು ಕಾರಣಗಳ ಸಲುವಾಗಿ ಕೇಂದ್ರ ಸರ್ಕಾರ ಅನುಷ್ಠಾನಗೊಳಿಸಿರತಕ್ಕಂಥ ಬೆಳೆ ವಿಮೆ ಯೋಜನೆ ಏನಿದೆ, ಅದು ನಿಜವಾಗಿಯೂ ಕೂಡ ರೈತರಿಗೆ ಒಂದು ವರದಾನವಾಗಬೇಕಾಗಿತ್ತು. ಆದರೆ ನಮ್ಮ ರಾಜ್ಯದ ರೈತರಿಗೆ ಇದು ವರವಾಗಿ ಪರಿಣಮಿಸಿಲ್ಲ. ಈ ರೀತಿ ಏಕೆ ಆಯಿತು. ಎನ್ನತಕ್ಕಂಥ ಚಿಂತನೆಯನ್ನು ಮಾಡಬೇಕಾಗಿದೆ. ಈ ಬೆಳೆ ವಿಮೆ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಅನುಷ್ಠಾನ ಮಾಡತಕ್ಕಂಥ ಸಂದರ್ಭದಲ್ಲಿ ಲಕ್ಷಾಂತರ ಜನ ರೈತರು ಇದರ ಕಡೆ ಆಕರ್ಷಕರಾಗಿ, ಈ ಬೆಳೆ ವಿಮೆ ಸಲುವಾಗಿ ಪ್ರೀಮಿಯಂ ಹಣವನ್ನು ತುಂಬಿದರು. ಬೆಳೆ ವಿಮೆ ಯೋಜನೆಯಿಂದ ನಮಗೆ ಏನಾದರೂ ಲಾಭವಾಗುತ್ತದೆ ಎನ್ನತಕ್ಕಂಥ ವಿಚಾರ ಇಟ್ಟುಕೊಂಡು ಇದರಲ್ಲಿ ಅವರೆಲ್ಲರೂ ಕೂಡ ಇನ್ವಾಲ್‌ಮೆಂಟ್ ಆಗಿದ್ದರು. ಆದರೆ, ಯಾವ ಸಂದರ್ಭದಲ್ಲಿ ಈ ಬೆಳೆ ವಿಮೆ ಹಣ ರೈತರಿಗೆ ಸಿಗಬೇಕಾಗಿತ್ತೋ ಅದು ಅವರಿಗೆ ಸಿಕ್ಕಿಲ್ಲ. ಏಕೆ ಇದು ತಡವಾಗಿದೆ ಎನ್ನತಕ್ಕಂಥದ್ದನ್ನು ನಾವು ವಿಚಾರ ಮಾಡಬೇಕಾಗಿದೆ. ಕಳೆದ ಎರಡು ತಿಂಗಳ ಹಿಂದೆಯೇ ಇವರಿಗೆ ಈ ಹಣ ಕೊಡಬೇಕಾಗಿತ್ತು. ಆದರೆ, ಕೊಟ್ಟಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಇರತಕ್ಕಂಥ ಅಂಕಿ ಸಂಖ್ಯೆಗಳನ್ನು ಸದನದ ಮುಂದೆ ಪ್ರಸ್ತಾಪ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿರತಕ್ಕಂಥ ರೈತರು ಇದರಲ್ಲಿ ಯಾರ್‍ಯಾರು ಬ್ಯಾಂಕ್‌ಗಳಿಂದ ಸಾಲವನ್ನು ತೆಗೆದುಕೊಂಡಿರತಕ್ಕಂಥವರು ಸುಮಾರು 9 ಕೋಟಿ 87 ಲಕ್ಷ ರೂಪಾಯಿಗಳಷ್ಟು ಪ್ರೀಮಿಯಂ ಹಣವನ್ನು ತುಂಬಿದ್ದಾರೆ. ಮತ್ತು ಯಾರು ಸಾಲವನ್ನು ತೆಗೆದುಕೊಂಡಿಲ್ಲ ಅವರು ಸುಮಾರು 4 ಕೋಟಿ 40 ಲಕ್ಷ ರೂಪಾಯಿಗಳಷ್ಟು ಪ್ರೀಮಿಯಂ ಹಣವನ್ನು ತುಂಬಿದ್ದಾರೆ. ಇವತ್ತಿನ ದಿವಸ ನಮ್ಮ ರಾಜ್ಯದ ರೈತರು ಈ ಒಂದು ಬೆಳೆ ವಿಮೆಗಾಗಿ ಸುಮಾರು 14 ಕೋಟಿ ರೂಪಾಯಿಗಳಷ್ಟು ಪ್ರೀಮಿಯಂ ಹಣವನ್ನು ತುಂಬಿದ್ದಾರೆ. ಇಡೀ ರಾಜ್ಯದಲ್ಲಿ ಇಷ್ಟೊಂದು ಹಣವನ್ನು ತುಂಬಿ 3,21,657 ಜನ ರೈತರು ಸಾಲವನ್ನು ತೆಗೆದುಕೊಂಡಿದ್ದಾರೆ, ಹಾಗೆಯೇ 2 ಲಕ್ಷದ 89 ಸಾವಿರ ಜನ ರೈತರು ಸಾಲವನ್ನು ತೆಗೆದುಕೊಳ್ಳದೇ ಈ ಒಂದು ಯೋಜನೆಯಲ್ಲಿ ಇನ್ವಾಲ್‌ಮೆಂಟ್ ಆಗಿದ್ದಾರೆ. ಕನಿಷ್ಠ 5 ರಿಂದ 6 ಲಕ್ಷ ಜನ ರೈತರು ಈ ಒಂದು ಯೋಜನೆಯಲ್ಲಿ ತೊಡಗಿದ್ದಾರೆ ಎನ್ನತಕ್ಕಂಥದ್ದನ್ನು ಅಂಕಿ-ಅಂಶಗಳಿಂದ ತಿಳಿಯಬಹುದಾಗಿದೆ. ಇದರ ಬಗ್ಗೆ ಇನ್ನು ಹೆಚ್ಚು ಪ್ರಚಾರವಾಗಿ, ಇದರಲ್ಲಿ ಹೆಚ್ಚು ಜನ ತೊಡಗಬೇಕಾಗಿದೆ. ಈಗಾಗಲೇ ಸುಮಾರು 5 ರಿಂದ 6 ಲಕ್ಷ ಜನ ರೈತರು ಈ ಒಂದು ಯೋಜನೆಯಲ್ಲಿ ತೊಡಗಿದ್ದಂಥ ಸಂದರ್ಭದಲ್ಲಿಯೂ ಸಹಿತ ಅವರಿಗೆ ನಾವು ಬೆಳೆ ವಿಮೆಯ ಹಣ ಕೊಡಲಿಕ್ಕೆ ಆಗಲಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರೀತಿ ಏಕೆ ನಿರ್ಮಾಣವಾಗಿದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

1.00 ಪಿ.ಎಂ

ಬೆಳೆ ವಿಮೆ ಮುಖಾಂತರ ರೈತರು ಕ್ಲೇಮ್ ಮಾಡಿದ ಒಟ್ಟು ಹಣ 132.93 ಕೋಟಿ ರೂ.ಗಳು ಅದರಲ್ಲಿ 14 ಕೋಟಿ 28 ಲಕ್ಷ ರೂ.ಗಳನ್ನು ರೈತರು ತುಂಬಿದ್ದಾರೆ. ಹಿಂದಿನ ಸಾಲಿನಲ್ಲಿ ತುಂಬಿರುವ ಹಣ 7.22 ಕೋಟಿ ರೂ.ಗಳು, ಒಟ್ಟು 21 ಕೋಟಿ 51 ಲಕ್ಷ ರೂ.ಗಳ ಹಣವನ್ನು

ನಮ್ಮ ರೈತರು ವಿಮೆ ಮುಖಾಂತರ ತುಂಬಿದ್ದಾರೆ. ಒಟ್ಟು 132 ಕೋಟಿ ರೂಪಾಯಿಗಳಲ್ಲಿ ಮೇಲ್ಕಂಡ ಹಣವನ್ನು ವಜಾ ಮಾಡಿದಾಗ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ 111 ಕೋಟಿ 43 ಲಕ್ಷ ರೂ.ಗಳನ್ನು ನಮ್ಮ ರೈತರಿಗೆ ಇನ್ಸುರೆನ್ಸ್ ಕಂಪನಿ ಮುಖಾಂತರ ಬಿಡುಗಡೆ ಮಾಡಬೇಕಾಗುತ್ತದೆ. ಇದರಲ್ಲಿ ರಾಜ್ಯ ಸರ್ಕಾರದ ಒಂದು ಭಾಗ 55 ಕೋಟಿ 72 ಲಕ್ಷ ರೂ.ಗಳು, ಕೇಂದ್ರ ಸರ್ಕಾರದ್ದು 55 ಕೋಟಿ 72 ಲಕ್ಷ ರೂ.ಗಳು, ಈ ಹಣವನ್ನು ತುಂಬಿದಾಗ ಮಾತ್ರ ನಮ್ಮ ರೈತನಿಗೆ ಕ್ಲೇಮ್ ಹಣ ಮುಟ್ಟುವುದಕ್ಕೆ ಸಾಧ್ಯವಿದೆ. ಆದರೆ ಕಳೆದ ಒಂದು ತಿಂಗಳಲ್ಲಿ ನಾನು ಸಾಕಷ್ಟು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಪ್ರವಾಸವನ್ನು ಮಾಡಿ ಬಂದಿದ್ದೇನೆ, ರೈತ ಮುಖಂಡರನ್ನು ಭೇಟಿ ಮಾಡಿದ್ದೇನೆ, ಜನಸಾಮಾನ್ಯರನ್ನು ಭೇಟಿಯಾಗಿದ್ದೇನೆ. ಜನಸಾಮಾನ್ಯರಲ್ಲಿ ಇದರ ಬಗ್ಗೆ ವಿಚಾರ ಮಾಡಿದಾಗ ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ಬೆಳೆ ವಿಮೆಯನ್ನು ಮಾಡಿದರೂ ಕೂಡ ಆ ಹಣ ನಮಗೆ ಬಂದಿಲ್ಲ, ಆ ಹಣ ಎಲ್ಲಿದೆ, ಸರ್ಕಾರದವರು ಸುಮ್ಮನೆ ನಾಟಕವನ್ನು ಮಾಡುತ್ತಿದ್ದಾರೆ, ಮುಂದಿನ ವರ್ಷ ನಾವು ಬೆಳೆ ವಿಮೆಯನ್ನು ತುಂಬುವುದಿಲ್ಲ ಎನ್ನುವ ಬಗ್ಗೆ ಅವರು ವಿಚಾರವನ್ನು ಮಾಡುತ್ತಿದ್ದಾರೆ. ಹಾಗಾದರೆ ಇದಕ್ಕೆ ಏನು ಕಾರಣ, ಏಕೆ ಈ ಹಣ ಬಿಡುಗಡೆಯಾಗಲಿಲ್ಲ. ರಾಜ್ಯ ಸರ್ಕಾರ ಇವತ್ತು ತನ್ನ ಪಾಲಿನ ಹಣವನ್ನು ಯಾವ್ಯಾವಾಗ ಬಿಡುಗಡೆ ಮಾಡಿದೆ, ಎಷ್ಟು ಹಣವನ್ನು ಬಿಡುಗಡೆ ಮಾಡಿದೆ? ನನ್ನ ಮಾಹಿತಿಯ ಪ್ರಕಾರ ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರ ಯಾವಾಗ ಹಣವನ್ನು ಬಿಡುಗಡೆ ಮಾಡುತ್ತದೆ, ಆಗ ಕೇಂದ್ರ ಸರ್ಕಾರ ಆ ಮ್ಯಾಚಿಂಗ್ ಗ್ರ್ಯಾಂಟ್‌ನ್ನು ಕೊಡುತ್ತದೆ. ಇದರಲ್ಲಿ ಯಾವ ಹಿಂದೇಟು ಇಲ್ಲ ಹಾಗಾದರೆ ಇದು, ಎಲ್ಲಿ ತಪ್ಪಾಗಿದೆ ಎನ್ನುವುದರ ಬಗ್ಗೆ ದಯವಿಟ್ಟು ನಾವು ವಿಚಾರ ಮಾಡಬೇಕಾಗಿದೆ. ರಾಜ್ಯ ಸರ್ಕಾರ ತನ್ನ ಪಾಲಿನ 55 ಕೋಟಿ 72 ಲಕ್ಷ ರೂ.ಗಳಲ್ಲಿ ಯಾವಾಗ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಎನ್ನುವುದರ ಬಗ್ಗೆ ಸದನಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕು. ಇನ್ನು ಎಷ್ಟು ಬ್ಯಾಲೆನ್ಸ್ ಇದೆ, ಅದನ್ನು ನೀವು ಯಾವಾಗ ಕೊಡುತ್ತೀರಿ? ನೀವು ಹಣವನ್ನು ಬಿಡುಗಡೆ ಮಾಡಿದ್ದರೆ, ರೈತರಿಗೆ ಆ ಹಣ ಮುಟ್ಟಿದೆಯೋ ಇಲ್ಲವೋ ಇದರ ಬಗ್ಗೆ ಸದನಕ್ಕೆ ಮಾಹಿತಿಯನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಡವನ್ನು ತೆಗೆದುಕೊಂಡು ಬರುತ್ತಿದ್ದೇನೆ. ಒಂದು ವೇಳೆ ಹಣ ಬಿಡುಗಡೆಯಾಗದಿದ್ದರೆ, ರೈತ ಏನು ಸಂಕಷ್ಟದಲ್ಲಿ ತೊಳಲುತ್ತಿದ್ದಾನೆ, ಬಳಲುತ್ತಿದ್ದಾನೆ ಅವನ ಕಷ್ಟಕ್ಕೆ ತಾವು ಒಂದು ಆಶ್ರಯವಾಗಬಹುದಾಗಿತ್ತು. 400-500 ಕೋಟಿ ರೂಪಾಯಿಗಳ ಆವರ್ತನಿಧಿ ತೆಗೆದು ಇಡುತ್ತೇವೆಂದು ಹೇಳಿದಿರಿ, ಅದು ಎಷ್ಟು ಇಟ್ಟಿದ್ದೀರಿ ಎನ್ನುವುದರ ಬಗ್ಗೆ ತಾವು ಲೆಕ್ಕಾಚಾರವನ್ನು ಕೊಡಬೇಕಾಗುತ್ತದೆ. ಅದರ ಜೊತೆಗೆ ಬೆಳೆ ವಿಮೆ ಹಣವನ್ನು ನೀವು ಮೊದಲೇ ಇದು ಆಗುವುದಿಲ್ಲವೆಂದು ಹೇಳಬಹುದಾಗಿತ್ತು, ಬೆಳೆ ವಿಮೆ ಯೋಜನೆಯನ್ನು ಒಂದು ಸಲ ಅಡಾಪ್ಟ್ ಮಾಡಿದ ಮೇಲೆ ರೈತರಿಗೆ ಸಹಾಯ ಮಾಡುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿದೆ. ಅದನ್ನು ಏಕೆ ಮಾಡಲಿಲ್ಲ ಎನ್ನುವುದರ ಬಗ್ಗೆ ತಾವು ಸದನದ ಮುಂದೆ ಹೇಳಬೇಕು ಎಂದು ನಾನು ಈ ಸದನದಲ್ಲಿ ಇವೊತ್ತು ಒತ್ತಾಯವನ್ನು ಮಾಡುತ್ತಿದ್ದೇನೆ. ನನ್ನ ಒಂದು ಬೇಡಿಕೆ, ಬೆಳೆ ವಿಮೆ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು, ಬಿಡುಗಡೆ ಮಾಡಿದ ಹಣ ಎರಡು-ಮೂರು ದಿವಸಗಳಲ್ಲಿ ರೈತನಿಗೆ ಸಿಗುವ ವ್ಯವಸ್ಥೆಯಾಗಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ರೈತ ತೊಂದರೆಯಲ್ಲಿ ಇರುವುದರಿಂದ ಆ ತೊಂದರೆ ಇನ್ನು ಮುಂದುವರೆಯುತ್ತದೆ, ಇನ್ನು ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗುವುದು ನಡೆಯುತ್ತವೆ. ಅದಕ್ಕಾಗಿ

ಬೆಳೆ ವಿಮೆ ಹಣವನ್ನು ತಕ್ಷಣದಲ್ಲಿ ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ. ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಬರಗಾಲ ಇದೆ ಹಿಂದಿನ ಅಧಿವೇಶನದಲ್ಲಿ ಕೂಡ ಪ್ರತಿಪಕ್ಷಗಳಾದ ನಾವು ಒತ್ತಾಯವನ್ನು ಮಾಡಿದ್ದೇವೆ. ಸಾಲ ವಸೂಲಾತಿಯನ್ನು ನಿಲ್ಲಿಸಿ, ಒಂದು ಅವಧಿಗೆ ಬಡ್ಡಿ ಮನ್ನಾ ಮಾಡಿ, ರೈತರನ್ನು ಉದ್ಧಾರ ಮಾಡಿ ಎಂದು ನಾವು ಹೇಳಿದ್ದೇವೆ, ಆದರೆ ಅದಕ್ಕೆ ಸರ್ಕಾರ ಸ್ಪಂಧನೆ ಮಾಡಲಿಲ್ಲ. ಬೇರೆ ಬೇರೆ ಹಂತದಲ್ಲಿ ಅಬಕಾರಿ ದೊರೆಗಳಿಗೆ ಕರ ಸಮಾಧಾನ ಯೋಜನೆ ಮುಖಾಂತರ ನೂರಾರು ಕೋಟಿ ರೂ.ಗಳ ಬಡ್ಡಿಯನ್ನು ಮನ್ನಾ ಮಾಡುತ್ತೀರಿ. ಕೆಪಿಟಿಸಿಎಲ್.ಗೆ ಯಾರು ಮನವಿ ಮಾಡಿಕೊಂಡಿದ್ದಾರೆ, ಮಾನ್ಯ ಹಿರಿಯ ಸಚಿವರಾದ ಶ್ರೀ ಘೋರ್ಪಡೆಯವರು ಅವರ ಪಾಲುದಾರಿಕೆ ಇರುವ ಒಂದು ಕಂಪನಿಗೆ 46 ಕೋಟಿ ರೂಪಾಯಿಗಳ ಬಾಕಿ ಮನ್ನಾ ಮಾಡುತ್ತೀರಿ. ಆದರೆ ಇವತ್ತು ರೈತರಿಗೆ ಒಂದು ಅವಧಿಗೆ ನೀವು ಬಡ್ಡಿಯನ್ನು ಮನ್ನಾ ಮಾಡಿ ಎಂದು ನಾವು ಸಾಕಷ್ಟು ಒತ್ತಾಯ ತಂದಾಗ್ಯೂ ನೀವು ಬಡ್ಡಿ ಮನ್ನಾ ಮಾಡಲಿಕ್ಕೆ ಮನಸ್ಸು ಮಾಡಲಿಲ್ಲ. ರೈತರ ಬಗ್ಗೆ ಏಕೆ ಕರುಣೆ ಇಲ್ಲ ಎನ್ನುವ ಬಗ್ಗೆ ನಾನು ಕೇಳಬಯಸುತ್ತೇನೆ. ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ರೈತರಿಗೆ ಆ ಸರ್ಕಾರ ಬಡ್ಡಿಯನ್ನು ಮನ್ನಾ ಮಾಡುತ್ತದೆ, ಆದರೆ ಈ ರಾಜ್ಯದಲ್ಲಿ ಏಕೆ ರೈತರ ಬಗ್ಗೆ ಕರುಣೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಏಕೆ ಕರುಣೆ ತೋರುತ್ತಿಲ್ಲ? ದಯವಿಟ್ಟು ಇವತ್ತು ರೈತರು ಸಾಲವನ್ನು ತುಂಬುವ ಪರಿಸ್ಥಿತಿ ಇಲ್ಲ, ತಕ್ಷಣದಲ್ಲಿ ಬಡ್ಡಿಯನ್ನು ಮಾಡಬೇಕು. ಇನ್ನು ಸಾಲ ವಸೂಲಾತಿ, ಎಲ್ಲೋ ಒಂದು ಕಡೆ ಒಳ್ಳೆಯ ಮಳೆ ಬಂದಾಗ ರೈತರು ಸ್ವಲ್ಪ ಬಿತ್ತನೆಯನ್ನು ಮಾಡಿದ್ದರು, ಆಗ ಪಿಎಲ್‌ಡಿ ಬ್ಯಾಂಕ್‌ನವರು ಸಾಲ ವಸೂಲಾತಿಗೆ ಬಂದರು. ರೈತರ ಟ್ರ್ಯಾಕ್ಟರ್ ಸೀಜ್ ಮಾಡಿದರು. ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡರು. ರೈತರು ನಾಲ್ಕು ದಿವಸ ತಡೆಯಿರಿ, ಯಾವುದಾದರೂ ಪೀಕ್ ಬರುತ್ತದೆ, ಬಂದಮೇಲೆ ಸಾಲವನ್ನು ತೀರಿಸುತ್ತೇನೆ ಎಂದರು. ಅಲ್ಲಿಯವರೆಗೆ ತಡೆಯಲು ಇವರು ತಯಾರಿಲ್ಲ. ಟ್ರಾಕ್ಟರ್ ಸೀಜ್ ಮಾಡಿ ಆಸ್ತಿ-ಪಾಸ್ತಿ ಎಲ್ಲವನ್ನು ಮುಟ್ಟುಗೋಲು ಹಾಕಿಕೊಂಡರೆ ಆ ರೈತ ಎಲ್ಲಿಗೆ ಹೋಗಬೇಕು? ಇದರ ಬಗ್ಗೆ ಏಕೆ ಸರ್ಕಾರ ಚಿಂತನೆ ಮಾಡುತ್ತಿಲ್ಲ, ನಾವು ನೂರಾರು ಸಾವಿರಾರು ಕೋಟಿ ರೂಪಾಯಿಗಳನ್ನು ಎಲ್ಲಿಯೋ ಕಳೆದು ಕೊಳ್ಳುತ್ತೇವೆ. ಆದರೆ ಕೇವಲ 200-300 ಕೋಟಿ ರೂಪಾಯಿಗಳ ರೈತರ ಬಡ್ಡಿಯನ್ನು ಏಕೆ ಮನ್ನ ಮಾಡುತ್ತಿಲ್ಲ? ಅವರಿಗೆ ಸರ್ಕಾರ ಏಕೆ ಕರುಣೆ ತೋರಿಸುತ್ತಿಲ್ಲ, ಇದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು ಎನ್ನುವುದರ ಬಗ್ಗೆ ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ದಯವಿಟ್ಟು ಬಡ್ಡಿಯನ್ನು ಮನ್ನಾ ಮಾಡಬೇಕು, ಸಾಲ ವಸೂಲಾತಿಯನ್ನು ತಕ್ಷಣವೇ ನಿಲ್ಲಿಸಿ, ಯಾರು ಮಧ್ಯಮಾವಧಿ ಸಾಲವನ್ನು ಪಡೆದಿದ್ದಾರೆ ಅದನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು. ಅಲ್ಪಾವಧಿ ಸಾಲವನ್ನು ಮಧ್ಯಾಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು, ಮತ್ತು ಸಾಲ ವಸೂಲಾತಿಯನ್ನು ನಿಲ್ಲಿಸಬೇಕು ಸರ್ಕಾರ ತಕ್ಷಣ ಆದೇಶ ಹೊರಡಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇಲ್ಲದಿದ್ದರೆ ರೈತರು ಬದುಕುವುದಕ್ಕೆ ಸಾಧ್ಯವಿಲ್ಲ, ಆ ಒಂದು ವಾತಾವರಣ ನಿರ್ಮಾಣವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಕ್ಷಣದಲ್ಲಿ ಮರು ಸಾಲವನ್ನು ಕೊಡುವ ವ್ಯವಸ್ಥೆಯಾಗಬೇಕು. ಎಲ್ಲಾ ಕಡೆ ಡಿಸಿಸಿ ಬ್ಯಾಂಕ್‌ಗಳು ಇರುವಂತೆ ನಮ್ಮ ಧಾರವಾಡದಲ್ಲಿ ಕೆಸಿಸಿ ಬ್ಯಾಂಕ್ ಇದೆ, ಸಾವಿರಾರು ಕೋಟಿ ರೂಪಾಯಿಗಳ ಸಾಲ ವಸೂಲಾತಿ ಅಥವಾ ಬಾಕಿ ಇರಬಹುದು, ಕೆಸಿಸಿ ಬ್ಯಾಂಕ್‌ನಿಂದ

ರೈತರಿಗೆ ಎಷ್ಟು ಸಾಲವನ್ನು ಕೊಟ್ಟಿದ್ದೀರಿ ಎನ್ನುವುದು ಗೊತ್ತಿಲ್ಲ. ಅಲ್ಲಿರುವ ಆಡಳಿತ ಮಂಡಳಿಯವರು ತಮಗೆ ಬೇಕಾದವರಿಗೆ ಬೇಕಾಬಿಟ್ಟಿಯಾಗಿ ಸಾಲವನ್ನು ಕೊಟ್ಟಿದೆ, ಅದಕ್ಕೆ ಯಾವ ಸೆಕ್ಯುರಿಟಿ ಇಲ್ಲ. ಒಬ್ಬರಿಗೆ 5 ರಿಂದ 30 ಕೋಟಿ ರೂಪಾಯಿಗಳವರೆಗೆ ಯಾವ ಸೆಕ್ಯುರಿಟಿ ಇಲ್ಲದೆ ಸಾಲವನ್ನು ಕೊಟ್ಟರು. ಹೀಗಾಗಿ ಇವತ್ತು ಆ ಕೆಸಿಸಿ ಬ್ಯಾಂಕ್ ಮುಚ್ಚುವಂಥ ಪರಿಸ್ಥಿತಿಯಾಗಿದೆ. ಧಾರವಾಡದಲ್ಲಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ಗಳು ಇವೆ, ಅವರು ಕೆಸಿಸಿ ಬ್ಯಾಂಕಿನಲ್ಲಿ ಠೇವಣಿಯನ್ನು ಇಟ್ಟಿದ್ದಾರೆ. ಬೇರೆ ಬೇರೆ ಸೊಸೈಟಿಯವರೂ ಕೂಡ ಕೋಟ್ಯಾಂತರ ರೂಪಾಯಿಗಳ ಠೇವಣಿಯನ್ನು ಇಟ್ಟಿದ್ದಾರೆ. ಅಲ್ಲಿ ಡಿಸಿ ಯವರನ್ನು ಅಡ್ಮಿನಿಸ್ಟ್ರೇಟರ್ ಆಗಿ ನೇಮಕ ಮಾಡಿದ್ದಾರೆ. ಅಲ್ಲಿ ಯಾವ ಠೇವಣಿ ಕೂಡ ವಾಪಸ್ಸು ಇಲ್ಲ. ಹೊಸದಾಗಿ ಸಾಲವನ್ನು ಕೊಡುವ ವ್ಯವಸ್ಥೆ ಇಲ್ಲ. ಕೆಸಿಸಿ ಬ್ಯಾಂಕ್ ಸಂಪೂರ್ಣವಾಗಿ ಮುಚ್ಚಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾದರೆ ಅದರ ಬಗ್ಗೆ ನಿಮ್ಮಿಂದ ಪರಿಹಾರವೇನು? ಈಗಾಗಲೇ ಅಲ್ಲಿನ ನೌಕರರಿಗೆ ಮತ್ತು ಕಾರ್ಮಿಕರಿಗೆ ಆರು ತಿಂಗಳಿಂದ ಪಗಾರ್ ಇಲ್ಲದೇ ಅಲ್ಲಿರುವ ಇಬ್ಬರು ನೌಕರರು ಆತ್ಮಹತ್ಯೆಯನ್ನು ಮಾಡಿಕೊಂಡರು. ರೈತರು ಆತ್ಮಹತ್ಯೆ ಮಾಡಿಕೊಂಡಂತೆ ಕೆಸಿಸಿ ಬ್ಯಾಂಕಿನ ನೌಕರರು ಆತ್ಮಹತ್ಯೆ ಮಾಡಿಕೊಂಡು ಪ್ರಕರಣ ಈ ರಾಜ್ಯದಲ್ಲಿ ನಡೆದಿದೆ. ಅಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಿದ್ದಾರೆ ಹಾಗೂ ಪ್ರಭಾವಿ ಸಚಿವರಿದ್ದಾರೆ. ಯಾರೂ ಏನೂ ಮಾಡುವುದಕ್ಕಾಗಿಲ್ಲ, ಕೆಸಿಸಿ ಬ್ಯಾಂಕನ್ನು ಉಳಿಸುವುದಕ್ಕಾಗುತ್ತಿಲ್ಲ. ಹೀಗಾಗಿ ರೈತರಿಗೆ ಮಿತ್ರ ಎಂದು ಹೆಸರು ಗಳಿಸಿದ ಕೆಸಿಸಿ ಬ್ಯಾಂಕ್ ಏನಿದೆ ಅದನ್ನು ಉಳಿಸುವ ಕೆಲಸ ಇಂದು ರಾಜ್ಯಸರ್ಕಾರದಿಂದ ಆಗಬೇಕಾಗಿದೆ. ಏಕೆ ಆ ಪ್ರಯತ್ನವಾಗುತ್ತಿಲ್ಲ? ಹಿಂದೆ, ಸಹಕಾರ ಸಚಿವರಾಗಿದ್ದ ಶ್ರೀ ಡಿ.ಕೆ. ಶಿವಕುಮಾರ್‌ರವರು ಧಾರವಾಡಕ್ಕೆ ಬಂದಿದ್ದರು, ವಿಸಿಟ್ ಮಾಡಿದ್ದರು. ಎಲ್ಲಾ ಅಹವಾಲುಗಳನ್ನು ಕೇಳಿದರು, ಅದಕ್ಕೆ ಏನೂ ಪರಿಹಾರವನ್ನು ಕೊಡಲಿಲ್ಲ. ನಬಾರ್ಡ್‌ನಿಂದ ಹಣವನ್ನು ಇವತ್ತು ಮಂಜೂರು ಮಾಡಿಸುವುದಕ್ಕೆ ರಾಜ್ಯ ಸರ್ಕಾರ ಪ್ರಯತ್ನ ಮಾಡಬಹುದಾಗಿತ್ತು. ಅದಕ್ಕೆ ಸರ್ಕಾರ ಗ್ಯಾರಂಟಿಯನ್ನು ಕೊಡಬಹುದಾಗಿತ್ತು. ಆದರೆ ರಾಜ್ಯ ಸರ್ಕಾರದಿಂದ ಏನೂ ಪ್ರಯತ್ನವಾಗಿಲ್ಲ, ಹೀಗಾಗಿ ಕೆಸಿಸಿ ಬ್ಯಾಂಕ್ ಮುಚ್ಚಿಹೋಗಿ, ಅದರಿಂದ ಇಲ್ಲಿರುವ ಅರ್ಬನ್ ಬ್ಯಾಂಕ್‌ಗಳು ಮುಚ್ಚಿಹೋಗುವ ಪರಿಸ್ಥಿತಿ ಉಂಟಾಗಿ ರೈತರಿಗೆ ಯಾವ ಹೊಸ ಸಾಲಗಳು ಇಲ್ಲದ ಪರಿಸ್ಥಿತಿಯಾಗಿದೆ. ಮುಂದೆ ಅಧೋಗತಿಗೆ ಹೋಗುವ ಪರಿಸ್ಥಿತಿ ಧಾರವಾಡ ಜಿಲ್ಲೆಯಲ್ಲಿ ಆಗಿದೆ. ಇಂತಹ ಪ್ರಕರಣಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ಆಗಿರಬಹುದು. ಯಾರು ವೈಯಕ್ತಿಕವಾಗಿ ಡಿಪಾಸಿಟ್ ಇಟ್ಟಿದ್ದಾರೆ ಅವರ ಹಣ ವಾಪಸ್ಸು ಇಲ್ಲ. ಹೀಗಾಗಿ ರೈತರಿಗೆ ಬಹಳ ತೊಂದರೆ ಇದ್ದ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಈ ಕೆಸಿಸಿ ಬ್ಯಾಂಕ್ ಏಕೆ ನಿದ್ರೆ ಮಾಡುತ್ತಿದೆ ಎಂದು ನಾನು ಕೇಳಬಯಸುತ್ತೇನೆ. ಇದರಬಗ್ಗೆ ಪರಿಹಾರವನ್ನು ಹುಡುಕುವಂತಹ ಕೆಲಸವನ್ನು ಇವತ್ತಿ ದಿವಸ ರಾಜ್ಯ ಸರ್ಕಾರವು ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಕೃಷಿ ಆಯುಕ್ತರಾದಂತಹ ಡಾ.ಎಸ್. ಸುಬ್ರಹ್ಮಣ್ಯರವರ ಪತ್ರಿಕಾ ಹೇಳಿಕೆಯನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 'ರಾಜ್ಯದಲ್ಲಿ ಮುಂಗಾರು ದುರ್ಬಲಗೊಂಡು ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿಲ್ಲ, ಇದೇ ಪರಿಸ್ಥಿತಿ ಇನ್ನು 15-20 ದಿವಸಗಳ ಕಾಲ ಮುಂದುವರೆದರೆ ರೈತರು ಪರ್ಯಾಯ ಬೆಳೆಯ ಯೋಜನೆಯನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ' ಎನ್ನುವ ಮಾತನ್ನು ಡಾ. ಸುಬ್ರಹ್ಮಣ್ಯರವರು ವ್ಯಕ್ತಪಡಿಸಿದ್ದಾರೆ. ಉಳಿದ ತಾಲ್ಲೂಕುಗಳಲ್ಲಿ ಬಿತ್ತನೆಯ ಚಟುವಟಿಕೆಗಳು ಚುರುಕುಗೊಳ್ಳಬೇಕಾದರೆ ವ್ಯಾಪಕ ಮಳೆಯ ಅಗತ್ಯವಿದೆಯೆಂದು ಅವರು ಹೇಳಿದರು.

ಇವತ್ತು ಎಷ್ಟು ಬಿತ್ತನೆಯ ಕೆಲಸವಾಗಬೇಕಾಗಿತ್ತೋ ಅಷ್ಟು ಬಿತ್ತನೆ ಕೆಲಸವಾಗಲಿಲ್ಲವೆಂಬ ಬಗ್ಗೆ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಜೂನ್ 26ರ ವರದಿಯ ಪ್ರಕಾರ ರಾಜ್ಯಾದ್ಯಂತ 18,87,000 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯನ್ನು ಕೈಗೊಳ್ಳಲಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 24,74,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಕಾರ್ಯವು ನಡೆದಿತ್ತು. ಈ ವರ್ಷ 18 ಲಕ್ಷಕ್ಕೆ ಇಳಿದಿದೆ. ಈ ಬರಗಾಲದ ಪರಿಸ್ಥಿತಿ ಯಾವ ರೀತಿ ಇರಬಹುದೆಂಬ ಕಲ್ಪನೆ, ಇದರಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಜೂನ್ ತಿಂಗಳ ಅಂತ್ಯದ ವೇಳೆಗೆ ರಾಜ್ಯದಲ್ಲಿ 24,74,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯ ಕಾರ್ಯವು ಪೂರ್ಣಗೊಳ್ಳುತ್ತಿತ್ತು. ಇದನ್ನು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಸುಮಾರು 6 ಲಕ್ಷ ಹೆಕ್ಟೇರ್ ಪ್ರೇದಶದಲ್ಲಿ ಬಿತ್ತನೆಯು ಕಡಿಮೆಯಾಗಿದೆ. ಈಗಾಗಲೇ ಬಿತ್ತನೆಯಾಗಿರುವಂತಹ ಬೆಳೆಯು ಮೊಳಕೆಯ ಹಂತದಲ್ಲಿದೆ. ಮಳೆಯಾಶ್ರಿತ ಬಿತ್ತನೆ ಬೆಳೆಯ ಸ್ಥಿತಿ ಉತ್ತಮಗೊಳ್ಳಬೇಕಾದರೆ ಅತಿ ಶೀಘ್ರದಲ್ಲಿಯೇ ವ್ಯಾಪಕ ಮಳೆ ಬೀಳುವ ಅವಶ್ಯಕತೆ ಇದೆ. ಮಳೆಯು ಬೀಳದೆ ಇದ್ದರೆ, ಈಗ ಬೆಳೆದಂತಹ ಬೆಳೆ ಮತ್ತು ಬಿತ್ತನೆ ಏನು ಮಾಡಿದ್ದಾರೆ. ಆ ಬೆಳೆಯು ಸಹ ನಾಶವಾಗುತ್ತದೆ. ಹೀಗಾಗಿ ಮತ್ತೆ ಅದೇ ಪರಿಸ್ಥಿತಿಯು ನಿರ್ಮಾಣವಾಗುತ್ತದೆ. ಅದರ ಬಗ್ಗೆ ಸರ್ಕಾರ ತೀವ್ರಗತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂಬ ವಿಚಾರವನ್ನು ನಾನು ಇಲ್ಲಿ ವ್ಯಕ್ತಪಡಿಸುತ್ತಿದ್ದೇನೆ. ಶಿವಮೊಗ್ಗ ಜಿಲ್ಲೆಯಿಂದಲೂ ಸಹ "ಮತ್ತೆ ಬರಗಾಲದ ಭೀತಿಯಲ್ಲಿ ಶಿವಮೊಗ್ಗ ಜಿಲ್ಲೆ" ಎಂಬ ಒಂದು ವರದಿಯು ಬಂದಿದೆ ಈ ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಸೊರಬ ತಾಲ್ಲೂಕುಗಳಲ್ಲಿ ಕಳೆದ ಬಾರಿಗೆ ಕಂಪೇರ್ ಮಾಡಿದರೆ ಈ ವರ್ಷ ಯಾವುದೇ ಮಳೆ ಇಲ್ಲ. ಈಗ ಶಿವಮೊಗ್ಗ ಜಿಲ್ಲೆಯಲ್ಲಿಯೂ ಸಹ ಅದೇ ಪರಿಸ್ಥಿತಿ ಇದೆ. ಮಳೆಯ ಅಬ್ಬರವಿಲ್ಲ, ನದಿ ತೊರೆಗಳ ಬೋರ್ಗರೆವ ಸೊಲ್ಲಿಲ್ಲ, ಇವತ್ತು ಯಾವ ಜಲಾಶಯಗಳಿವೆ, ಆ ಜಲಾಶಯಗಳ ನೀರಿನ ಮಟ್ಟವು ಕಡಿಮೆಯಾಗಿದೆ. ಈ ಬಗ್ಗೆ ಕಳೆದ ವರ್ಷ ಮತ್ತು ಈ ವರ್ಷದ ಮಾಹಿತಿಯನ್ನು ನಾವು ಕಂಪೇರ್ ಮಾಡಿದರೆ ಆ ಒಂದು ಜಲಾಶಯದ ನೀರಿನ ಮಟ್ಟವು ಕಡಿಮೆಯಾಗಿದೆ. ಬೆಳೆನಾಶ, ರಿಯಾಯಿತಿಯ ದರದಲ್ಲಿ ಬಿತ್ತನೆಯ ಭತ್ತ, ಈ ರೀತಿಯಾಗಿ ಇಡೀ ರಾಜ್ಯದಲ್ಲಿ ಇನ್ನು 7 ಜಿಲ್ಲೆಗಳಲ್ಲಿ ನೈರುತ್ಯ ಮುಂಗಾರು ದುರ್ಬಲ, 82 ತಾಲ್ಲೂಕುಗಳಲ್ಲಿ ಕಡಿಮೆ ಮಳೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಬೇರೆ ಬೇರೆ ರಾಜ್ಯದ ಬೇರೆ ಬೇರೆ ಭಾಗಗಳ ಪರಿಸ್ಥಿತಿಯನ್ನು ಆ ವರದಿಯ ಬಗ್ಗೆ ನಾವು ತಾಳೆ ನೋಡಿದಾಗ ಎಷ್ಟೊಂದು ರಾಜ್ಯದ ಪರಿಸ್ಥಿತಿಯು ಗಂಭೀರವಾಗಿದೆ ಎಂಬುದನ್ನು ಇವತ್ತು ನಾವು ಇಲ್ಲಿ ಕಾಣಬಹುದು. ಅದೇ ರೀತಿಯಾಗಿ ಮಂಡ್ಯ ಜಿಲ್ಲೆಯಲ್ಲಿ ಎಲ್ಲಿ ನೀರಾವರಿ ಪ್ರದೇಶಗಳಿವೆ, ಆ ನೀರಾವರಿ ಪ್ರದೇಶಗಳಲ್ಲಿ ಸಹಿತ "ಈ ಸಕ್ಕರೆ ಸೀಮೆಯಲ್ಲಿ ನೀರಿನ ಬರ, ಮಂಡ್ಯದಲ್ಲಿ ಒಣಗಿ ನಿಂತ ಕಬ್ಬು" ಈ ರೀತಿಯಾಗಿ ಇವತ್ತಿನ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿದೆ. ಅಂದರೆ ಈ ರೀತಿಯ ಪರಿಸ್ಥಿತಿ ಎಲ್ಲಿ ನೀರಾವರಿ ಪ್ರದೇಶಗಳಿವೆ, ಆ ಪ್ರತಿಯೊಂದು ನೀರಾವರಿ ಪ್ರದೇಶಗಳಲ್ಲೂ ಸಹಿತ ಈ ಒಂದು ಬರದ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎನ್ನುವುದನ್ನು ಇವತ್ತು ಸದನದ ಗಮನಕ್ಕೆ ತರಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಹಿಂದೆ ಜನತಾದಳ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಈ ರೈತರಿಗೆ ಅನುಕೂಲವಾಗುವಂತಹ ಒಂದು ಆದೇಶವನ್ನು ಹೊರಡಿಸಿದ್ದರು. ಇವತ್ತು ರೈತಭಾಂದವರು ಕೃಷಿ ಸಾಲವನ್ನು ಏನು ಮಾರ್ಟ್‌ಗೇಜ್ ಮಾಡುತ್ತಾರೆ. ಆ ಕೃಷಿ ಸಾಲವನ್ನು ತೆಗೆದುಕೊಂಡಾಗ

ಯಾವ ಪ್ರಾಪರ್ಟಿಯನ್ನು ಅವರು ತೆಗೆದುಕೊಳ್ಳುತ್ತಾರೆ, ಆ ಮಾರ್ಟ್‌ಗೇಜ್‌ಗೆ ಸ್ಟಾಂಪ್ ವಿನಾಯಿತಿ ಇತ್ತು, ಸ್ಟಾಂಪ್ ಡ್ಯೂಟಿ ಇಲ್ಲ ಮತ್ತು ರಿಜಿಸ್ಟ್ರೇಷನ್ ಫೀ ಇಲ್ಲವೆಂಬ ಆದೇಶವು 5 ವರ್ಷಗಳವರೆಗೆ ಇತ್ತು. ಆ 5 ವರ್ಷದ ಅವಧಿಯೂ ಇವತ್ತು ಮುಗಿದುಹೋಗಿದೆ. ದಿನಾಂಕ: 9-6-97 ರಲ್ಲಿ ಹಿಂದೆ ಇದ್ದಂತಹ ಜನತಾದಳದ ಸರ್ಕಾರದಲ್ಲಿ ಒಂದು ಆದೇಶವನ್ನು ಹೊರಡಿಸಲಾಗಿತ್ತು. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಗಮನಹರಿಸಬೇಕು. ಆ ಆದೇಶದ ಪ್ರಕಾರ ರೈತರು ಯಾರು ಕೃಷಿ ಸಾಲವನ್ನು ತೆಗೆದುಕೊಳ್ಳುತ್ತಾರೆ ಆ ರೈತರ ಪ್ರಾಪರ್ಟಿಯನ್ನು ಮಾರ್ಟ್‌ಗೇಜ್ ಮಾಡುತ್ತಾರೆ, ಅಡವನ್ನು ಇಡುತ್ತಾರೆ, ಅದನ್ನು ರಿಜಿಸ್ಟ್ರೇಷನ್ ಮಾಡಬೇಕಾಗುತ್ತದೆ. ಅದಕ್ಕೆ ಮುದ್ರಾಂಕ ಶುಲ್ಕದಿಂದ ವಿನಾಯಿತಿಯನ್ನು 5 ವರ್ಷ ಕೊಟ್ಟಿದ್ದರು. ಅದರ ಬಗ್ಗೆ ಇನ್ನು ಏನು ಮಾಡಿಲ್ಲ. ಇದುವರೆಗೂ ನಿಮ್ಮಿಂದ ಸೂಚನೆಯು ಹೋಗಿರುವುದಿಲ್ಲ, ಮಾಡುತ್ತೇವೆಂದು ಹೇಳುತ್ತೀರೋ ಅಥವಾ ಮಾಡಿದ್ದೇವೆಂದು ಹೇಳುತ್ತೀರೋ?

ಶ್ರೀ ಅರಗ ಜ್ಞಾನೇಂದ್ರ: ಇವತ್ತು ವಿಧಾನಸಭೆಯಲ್ಲಿ ಪ್ರಸ್ತಾಪವಾಗುತ್ತದೆಂದು ಭಾವಿಸಿ ನಿನ್ನೆ ಆ ಆರ್ಡರ್ ಇಶ್ಯೂ ಮಾಡಿದ್ದೀರಿ. ಮಾನ್ಯ ಕಂದಾಯ ಸಚಿವರಿಂದ ಇನ್ನೂ ಸೂಚನೆ ಹೋಗಿಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು): ತಾವು ವಿಧಾನಸಭೆಯಲ್ಲಿ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡುತ್ತೀರೆಂದು ಮುಂಜಾಗ್ರತೆಯಿಂದ ನಾನು ನಿನ್ನೆ ದಿನ ಆರ್ಡರ್ ಇಷ್ಯೂ ಮಾಡಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: ಅದು ಹಿಂದಿನಿಂದ ಎಫೆಕ್ಟ್‌ಗೆ ಬರುತ್ತದೆಯೋ ಅಥವಾ ಈಗಿನಿಂದ ಎಫೆಕ್ಟ್‌ಗೆ ಬರುತ್ತದೆಯೋ?

Sri H.C. Srikantaiah: Retraspective effect ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಈಗ ಅದು ಡ್ಯೂ ಆಗಿ ಒಂದು ತಿಂಗಳಾಗಿತ್ತು. ಎಷ್ಟೋ ಜನ ರೈತರು ತೊಂದರೆಗೊಳಗಾಗಿ ಆ ಬಗ್ಗೆ ಒಂದು ತಿಂಗಳಲ್ಲಿ ವಿನಾಯಿತಿ ಕೊಡಿ ಎಂದು ಮನವಿ ಪತ್ರವನ್ನು ಕೊಟ್ಟಿದ್ದರು. ಜುಲೈನಿಂದ ಕೃಷಿ ಉತ್ಪನ್ನಗಳ ನೇರ ಖರೀದಿ ಎಂದು ದಿನಾಂಕ: 25-6-2002ರ ಪತ್ರಿಕಾ ಹೇಳಿಕೆಯನ್ನು ನಾನು ನೋಡಿದ್ದೇನೆ. ಈ ಬಗ್ಗೆ ಸ್ಟೇಟ್‌ಮೆಂಟನ್ನು ಆ ಸಮಯದಲ್ಲಿ ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಾದಂತಹ ಶ್ರೀ ಎಸ್. ವಿಶ್ವನಾಥ್‌ರವರು ಕೊಟ್ಟಿದ್ದರು. ಇವತ್ತು ರೈತರು ರಾಜ್ಯದಲ್ಲಿ 20 ಬೆಳೆಗಳನ್ನು ಸೆಲೆಕ್ಟ್ ಮಾಡಿ ಬೆಳೆಯುತ್ತಾರೆ. ಆ ಒಂದು ಕೃಷಿ ಉತ್ಪನ್ನಕ್ಕೆ ಸೂಕ್ತವಾದ ರೈತರಿಗೆ ಬೆಲೆ ಸಿಗುವಂತೆ ನೇರವಾಗಿ ಯಾವುದೇ ರೈತರು ಎಪಿಎಂಸಿಗೆ ಮಾರ್ಕೇಟ್ ಯಾರ್ಡ್‌ಗೆ ಯಾವುದೇ ಸಂದರ್ಭದಲ್ಲಿ ಆ ಒಂದು ಬೆಳೆಗಳನ್ನು ತೆಗೆದುಕೊಂಡು ಬರುತ್ತಾರೋ, ನೇರವಾಗಿ ಮಿನಿಮಮ್ ಸಪೋರ್ಟ್ ಪ್ರೈಸ್ ಮೇಲೆ ಖರೀದಿ ಮಾಡುತ್ತೇವೆಂಬ ಬಗ್ಗೆ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರವು ಏನು ನಿರ್ಣಯವನ್ನು ಕೈಗೊಂಡಿದೆ ಎಂಬುದರ ಬಗ್ಗೆ ಮಾನ್ಯ ಕೃಷಿ ಸಚಿವರು ಗಮನವನ್ನು ಹರಿಸಬೇಕು.

ಶ್ರೀ ಬಿ.ಎಸ್.ಪಾಟೀಲ್ ಸಾಸನೂರ್ (ಕೃಷಿ ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎಪಿಎಂಸಿಯ ಬಗ್ಗೆ ಪ್ರಸ್ತಾಪ ಮಾಡಿದರು. ಆವರ್ತ ನಿಧಿಯ ಬಗ್ಗೆಯೂ ಸಹ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಸರ್ಕಾರವು ಈಗಾಗಲೇ 100 ಕೋಟಿ ರೂಪಾಯಿಗಳನ್ನು ಆವರ್ತನಿಧಿಗಾಗಿ ನಿಗದಿಪಡಿಸಿ, 167 ಕೋಟಿ ರೂಪಾಯಿಗಳ ವ್ಯವಹಾರಗಳನ್ನು ಕೂಡ ನಾವು ಮಾಡಿದ್ದೇವೆ. ತಾವು 400 ಕೋಟಿ ರೂಪಾಯಿಗಳವರೆಗೆ ಆವರ್ತ ನಿಧಿಯನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದೀರಿ. ಆ ಒಂದು ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ, ಈಗಾಗಲೇ 100 ಕೋಟಿ ರೂಪಾಯಿಗಳಲ್ಲಿ 13 ಬೆಳೆಗಳನ್ನು ನಾವು ಈಗಾಗಲೇ ಖರೀದಿ ಮಾಡಿದ್ದೇವೆ, ಈ ಸಲ ಸರ್ಕಾರ ರಾಗಿ ಖರೀದಿಯ ಬಗ್ಗೆ ಸುಮಾರು 50 ಕೋಟಿ ರೂಪಾಯಿಗಳನ್ನು ಕೊಟ್ಟು ಖರೀದಿ ಮಾಡಿದೆ. ನಮ್ಮ ಬೆಲೆಯಲ್ಲಿ ಕುಸಿತವಾದಾಗ, ನಮ್ಮ ಕೊಬ್ಬರಿಯ ಬೆಲೆಯು 2000 ರೂಪಾಯಿಗಳಾದಾಗ ನಾವು ರೂ 3550 ರೂಪಾಯಿಗಳನ್ನು ಆವರ್ತನಿಧಿಯಿಂದ ಕೊಟ್ಟು, ಆ ಬೆಲೆಯನ್ನು ಅಂದರೆ ಮಿನಿಮಮ್ ಸಪೋರ್ಟ್ ಪ್ರೈಸ್ ಕೊಟ್ಟ ಮೇಲೆಯೇ ಅದು 3300 ರೂವರೆಗೆ ಕೊಬ್ಬರಿಯ ಧಾರಣೆಯೋ ಏರಿತು. ಶ್ರೀ ವಿಶ್ವನಾಥ್‌ರವರು ಕೊಟ್ಟ ಹೇಳಿಕೆಯ ಜೊತೆಗೆ ನಮ್ಮ ಸರ್ಕಾರ ನಮ್ಮ ಮುಖ್ಯ ಮಂತ್ರಿಗಳು ಆ ತರಹ ನಿರ್ಧಾರ ಮಾಡಿದ್ದಾರೆ. ನಮ್ಮ ಆವರ್ತ ನಿಧಿಯನ್ನು 100 ಕೋಟಿ ರೂಪಾಯಿಗಳಿಂದ 400 ಕೋಟಿ ರೂಪಾಯಿಗಳವರೆಗೆ ಹೆಚ್ಚಿಸಬೇಕು. ನಮ್ಮ ಎಲ್ಲಾ ಖರೀದಿಗಳನ್ನು ನಮ್ಮ ಕೃಷಿ ಉತ್ಪನ್ನಗಳನ್ನು ಕೂಡ ನಾವು ಎಪಿಎಂಸಿಗಳ ಮುಖಾಂತರ ನಿರಂತರವಾಗಿ ಖರೀದಿ ಮಾಡಬೇಕೆಂಬ ಒಂದು ಉದ್ದೇಶವನ್ನು ಹಮ್ಮಿಕೊಂಡಿದ್ದೇವೆ. ಇದನ್ನು ಹಂತಹಂತವಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್. ತಹಸೀಲ್ದಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಈಗ ನಾವು 100 ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ತೆಗೆದಿಟ್ಟಿದ್ದೇವೆಂದು ಮಾನ್ಯ ಸಚಿವರು ಇಲ್ಲಿ ಹೇಳಿದರು. ಆ ಆವರ್ತನಿಧಿಯನ್ನು 400 ಕೋಟಿ ರೂಪಾಯಿಗಳಿಗೆ ಇನ್‌ಕ್ರೀಸ್ ಮಾಡುವಂತಹದ್ದು ಯೋಜನೆಯಿದೆ ಎಂದು ಮಾನ್ಯ ಸಚಿವರು ಹೇಳಿದರು. ಇಲ್ಲಿ ಅಭಿವೃದ್ಧಿ ಆಯುಕ್ತರಾದ ಶ್ರೀ ವಿಶ್ವನಾಥ್‌ರವರು ಸ್ಟೇಟ್‌ಮೆಂಟ್ ಬಗ್ಗೆ ನಾನು ಹೇಳಿದೆ. ಅವರು 20 ಬೆಳೆಗಳ ಉತ್ಪನ್ನಗಳ ಬಗ್ಗೆ ಹೇಳಿದ್ದಾರೆ. 13 ಬೆಳೆಗಳನ್ನು ಮಾತ್ರ ನಾವು ಸೆಲೆಕ್ಟ್ ಮಾಡಿದ್ದೇವೆಂಬ ಮಾತನ್ನು ಮಾನ್ಯ ಸಚಿವರು ಹೇಳಿದರು. ಇವತ್ತು ಆಯುಕ್ತರ ಒಂದು ವರದಿಯಲ್ಲಿ, ಅವರ ಒಂದು ಸ್ಟೇಟ್‌ಮೆಂಟ್ ಮತ್ತು ಮಾನ್ಯ ಸಚಿವರ ಹೇಳಿಕೆಯಲ್ಲಿ ವ್ಯತ್ಯಾಸವಿದೆ. ಇದು ಇವತ್ತು ಸರ್ಕಾರದ ಗಮನಕ್ಕೆ ಬರಬೇಕು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ಈಗ ಮಾಡಿದ್ದೇವೆಂಬ ಮಾತನ್ನು ಅವರು ಹೇಳಲಿಲ್ಲ. ಆ ಸ್ಟೇಟ್‌ಮೆಂಟ್‌ನಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಸದನದಲ್ಲಿ ನೀವು ಅನೌನ್ಸ್ ಮಾಡಬಹುದಾಗಿತ್ತು. ಜುಲೈನಲ್ಲಿ ಅನೌನ್ಸ್ ಮಾಡುತ್ತೇವೆಂದು ಹೇಳಿದ್ದಿರಿ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್: ನಮ್ಮ ಆವರ್ತನಿಧಿ ಉಪಯೋಗ ಯಾವಾಗ ಬೀಳುತ್ತದೆಂದರೆ, ನಮ್ಮ ಮಾರ್ಕೆಟ್‌ನಲ್ಲಿ ರೈತರು ಬೆಳೆದ ಬೆಳೆಯ ಬೆಲೆ ಕುಸಿತವಾದಾಗ ಸರ್ಕಾರ ಮಧ್ಯೆ ಪ್ರವೇಶ ಮಾಡಿ, ಮಿನಿಮಮ್ ಸಪೋರ್ಟ್ ಪ್ರೈಸ್‌ನ್ನು ಗೊತ್ತು ಮಾಡಿ ಆಗ ಖರೀದಿ ಮಾಡುತ್ತದೆಯೇ ಹೊರತು ಬೆಲೆ ಬಹಳ ಜಾಸ್ತಿ ಇದ್ದಾಗ ನಾವು ಖರೀದಿ ಮಾಡುವ ಅವಶ್ಯಕತೆ ಇಲ್ಲ.

ಶ್ರೀಕೆ. ಎಂ. ಕೃಷ್ಣಮೂರ್ತಿ: ಮಾನ್ಯ ಮಂತ್ರಿಗಳು ಒಂದು ನಿಮಿಷ ಈಲ್ಡ್ ಆಗಬೇಕು. ರೈತರು ಬೆಳೆದ ಯಾವುದೇ ಬೆಳೆ, ತೆಂಗು, ಕಾಫಿ ಯಾವುದನ್ನೇ ತೆಗೆದುಕೊಳ್ಳಿ ಈಗ ಏನು ಮಾನ್ಯ ಸಚಿವರು ಹೇಳುತ್ತಿದ್ದಾರೆ ಅದಕ್ಕೆ ಬದಲಾಗಿ ವರ್ಷದ 365 ದಿವಸವು ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ ಖರೀದಿ ಮಾಡಬೇಕಾಗುತ್ತದೆ. ಯಾವುದೇ ಬೆಳೆಯನ್ನು ತೆಗೆದುಕೊಳ್ಳಿ, ಅದು ಗೋಧಿ, ರಾಗಿ, ತೆಂಗಿನಾಕಾಯಿ, ಅಡಿಕೆ, ಕಾಫಿ ಇರಬಹುದು, ಇವತ್ತು ಕಾಫಿಯ ಬೆಲೆ ಏನಾಗಿದೆ? ಕಾಫಿ ತೋಟದವರು ಎಲ್ಲಾ ಸುಮ್ಮನಾಗಿದ್ದಾರೆ. ಆದ್ದರಿಂದ ವರ್ಷದ 365 ದಿವಸವು ನ್ಯಾಫೆಡ್‌ನವರು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಅದನ್ನು ಮಾನ್ಯ ಸಚಿವರು ಸಭೆಯಲ್ಲಿ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನಾನು ಮಾನ್ಯ ವಿಶ್ವನಾಥ್ ಅವರ ಹೇಳಿಕೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಅವರು ಮೊದಲೇ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ರೈತರ ಬೆಳೆ ಕಟಾವು ಆದ ಮಾರನೆಯ ದಿವಸವೇ ಸಂಗ್ರಹಣಾ ಕೇಂದ್ರಗಳಿಗೆ ಉತ್ಪನ್ನಗಳನ್ನು ತರಬಹುದಾಗಿದೆ. ಇದು ಬಹಳ ಮಹತ್ವದ್ದು. ನೀವು ಖರೀದಿ ಕೇಂದ್ರ ಮಾಡುವುದು ಯಾವಾಗ? ರೈತರು ಹೋರಾಟ ಸತ್ಯಾಗ್ರಹ ಮಾಡಿದಾಗ. "ರೈತರ ಬೆಳೆ ಕಟಾವು ಆದ ಮಾರನೇ ದಿವಸವೇ ಸಂಗ್ರಹಣಾ ಕೇಂದ್ರಗಳಿಗೆ ಉತ್ಪನ್ನಗಳನ್ನು ತರಬಹುದಾಗಿದೆ" ಎಂದು ಶ್ರೀ ವಿಶ್ವನಾಥ್‌ರವರ ಸ್ಟೇಟ್‌ಮೆಂಟ್ ಇದೆ. ಮತ್ತು ಹತ್ತು ಸಾವಿರ ಕೋಟಿ ರೂಪಾಯಿ ಬೆಳೆ ಬೆಳೆಯಲಾಗುತ್ತಿದ್ದು ಅದರಲ್ಲಿ ಶೇಕಡ 10ರಷ್ಟು ಅಂದರೆ 4 ಲಕ್ಷದ 50 ಸಾವಿರ ಟನ್ ಆಹಾರ ಧಾನ್ಯವನ್ನು ಸಂಗ್ರಹ ಮಾಡಬಹುದಾಗಿದೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ಇದು ಖರೀದಿ ಅಲ್ಲ. ಸ್ಟೋರೇಜ್ ಆಫ್ ಅಗ್ರಿಕಲ್ಚರಲ್ ಪ್ರೊಡ್ಯೂಸ್. ಅದಕ್ಕೆ ಗೋಡೋನ್ ಅನ್ನು ಕಟ್ಟಲಾಗಿದೆ. ಅದನ್ನು ನಾನು ನೋಡಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್: ನಾನು ವಿಶ್ವನಾಥ್‌ರವರ ಸ್ಟೇಟ್‌ಮೆಂಟ್ ಕಾಪಿಯನ್ನು ಕಳುಹಿಸಿ ಕೊಡುತ್ತೇನೆ. ಅದರ ಬಗ್ಗೆ ತಾವು ನೋಡಿ. ಜುಲೈನಿಂದ ಎಲ್ಲಾ ಕೃಷಿ ಉತ್ಪನ್ನಗಳನ್ನು ನೇರ ಖರೀದಿ ಮಾಡುತ್ತೇವೆಂದು ಹೇಳಿದ್ದೀರಿ. ಅದು ಅನುಷ್ಠಾನವಾದರೆ ರೈತರು ಉದ್ಧಾರವಾಗುತ್ತಾರೆ. ಬಹುಶಃ ನನಗನ್ನಿಸುತ್ತದೆ, ರಾಜ್ಯ ಸರ್ಕಾರ ಇದುವರೆಗೆ ಏನು ಘೋಷಣೆಗಳನ್ನು ಮಾಡಿದೆ, ಅದೇ ರೀತಿಯಲ್ಲಿ ಇದು ಇದೆ. ಇದರಿಂದ ಏನಾಗುತ್ತದೆ? ಇದು ರೈತರಿಗೆ ಮೋಸ ಮಾಡುವಂತಹ ಘೋಷಣೆಯಾಗುತ್ತದೆ. ಶೇಕಡ 10ರಷ್ಟು ನೀವು ಖರೀದಿ ಮಾಡುತ್ತೀರಿ. ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ಕೃಷಿ ಉತ್ಪನ್ನ ಆಗುತ್ತದೆ. ಶೇಕಡ 10 ರಷ್ಟು ಅಂದರೆ ಅದನ್ನು

ಕೊಳ್ಳಲಿಕ್ಕೆ ಒಂದು ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಒಂದು ಸಾವಿರ ಕೋಟಿಯಷ್ಟು ನಿಮ್ಮ ಆವರ್ತ ನಿಧಿ ಇಲ್ಲ. ಎಲ್ಲಿ ನಿಮ್ಮ ಟರ್ನ್‌ಓವರ್? 400 ಕೋಟಿ ರೂ.ಗಳಷ್ಟು ಮಾಡುವುದು ಇರಲಿ, 100 ಕೋಟಿ ರೂ.ಗಳಷ್ಟು ಸಹ ಟರ್ನ್ ಓವರನ್ನು ಮಾಡಿಲ್ಲ. ಕೇವಲ 50 ಕೋಟಿ ರೂ.ಗಳಷ್ಟು ಮಾಡಿ ಮತ್ತೆ ಕೇಂದ್ರ ಸರ್ಕಾರ ದಿಂದ ಹಣ ಬಂದಿಲ್ಲವೆಂದು ಹೇಳುವಂಥಾದ್ದು. ಇದು ಬಿಟ್ಟರೆ, ನಿಮ್ಮಲ್ಲಿ 400 ಕೋಟಿ. ರೂ.ಗಳಷ್ಟು ಆವರ್ತನಿಧಿ ಎಲ್ಲಿದೆ? ಆ ಹಣವನ್ನು ಸೆಪರೇಟಾಗಿ ತೆಗೆದು ಇಡಿರಿ. ಆಗ ಗೊತ್ತಾಗುತ್ತದೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ನಮ್ಮ ಸರ್ಕಾರದಿಂದ ಮತ್ತು ಮಾರುಕಟ್ಟೆಯಿಂದ 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು ನಿಗದಿ ಮಾಡಿ, 167 ಕೋಟಿ ರೂಪಾಯಿ ಚಲಾವಣೆ ಮಾಡಿದ್ದೇವೆನ್ನುವ ಮಾತನ್ನು ಹೇಳಿದೆ. 400 ಕೋಟಿ ರೂ. ಆದಮೇಲೆ ಸಾವಿರ ಕೋಟಿವರೆಗೆ ಮಾಡಬಹುದು. ಅದೇನೂ ಸಮಸ್ಯೆಯಿಲ್ಲ. ಆದರೆ ಅದು ಇವತ್ತಲ್ಲ.

ಶ್ರೀ ಜಗದೀಶ್ ಶೆಟ್ಟರ್: ಹಣ ಎಲ್ಲಿದೆ ತೋರಿಸಿಕೊಡಿರಿ? ಮಾನ್ಯ ಉಪಾಧ್ಯಕ್ಷರೇ, ಏನಾಗಿದೆ ಅಂದರೆ ಎರಡೂವರೆ ವರ್ಷದಿಂದ 50 ಕೋಟಿ, 100 ಕೋಟಿ, 400 ಕೋಟಿ ಎಂದು ಇದೇ ಹೇಳುತ್ತಿದ್ದಾರೆ ಅದು ಎಲ್ಲಿದೆ ಎಂದು ವಿವರ ಕೊಡಲಿ, ಅದನ್ನು ಸದನದ ಮುಂದೆ ಬಹಿರಂಗಪಡಿಸಲಿ ಆ ಆವರ್ತನಿಧಿ ಎಲ್ಲಿದೆಯೆಂದು ನಾವು ಹುಡುಕಬೇಕಾಗಿದೆ. ನಾವು ಎರಡೂವರೆ ವರ್ಷದಿಂದ ನೋಡುತ್ತಿದ್ದೇವೆ. ಆವರ್ತನಿಧಿಯನ್ನು ತೆಗೆದು ಇಟ್ಟಿದ್ದೇವೆ. ಖರೀದಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದರೆ ಏನೂ ಇಲ್ಲ. ಅದು ರೈತರು ಎಲ್ಲಾ ಹೋರಾಟ ಮಾಡಿ ಪ್ರತಿಪಕ್ಷದವರು ಎಲ್ಲರೂ ಹೇಳಿದ ಮೇಲೆ ಎಲ್ಲೋ ಒಂದಿಷ್ಟು ಖರೀದಿ ಮಾಡುವಂಥದ್ದು; ಅದೂ ಕೇಂದ್ರ ಸರ್ಕಾರದಿಂದ ಹಣ ತಂದ ಮೇಲೆ ಅಲ್ಲಿಯವರೆಗೆ ಇವರು ಖರೀದಿ ಮಾಡುವುದಿಲ್ಲ. ಇದು ಪರಿಸ್ಥಿತಿ. ಹೀಗಾಗಿ ರಾಜ್ಯದಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ; ಒದ್ದಾಡುತ್ತಿದ್ದಾರೆ ಇದಕ್ಕೆ ತಾವು ಉತ್ತರ ಕೊಡಿ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ನಮ್ಮ ಆವರ್ತನಿಧಿಗೆ ಕೇಂದ್ರ ಸರ್ಕಾರದಿಂದ ಒಂದು ಪೈಸೆ ಕೂಡ ಬಂದಿಲ್ಲ. ನಾವು 400 ಕೋಟಿ ರೂ.ನಲ್ಲಿ 167 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದಿಂದ ಭರಿಸಿ 13 ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ 4-8 ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಕೊಬ್ಬರಿ ಬೆಲೆ ಬಿದ್ದಾಗ 135 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದವರು ಕೊಟ್ಟರು. ಮಾನ್ಯ ಸಚಿವರು ಕೇಂದ್ರ ಸರ್ಕಾರದಿಂದ ಒಂದು ಪೈಸೆ ಬಂದಿಲ್ಲವೆಂದು ಹೇಳಿದರು. ಇದು ಯಾವ ನ್ಯಾಯ? ಕೊಟ್ಟಿರುವುದನ್ನು ಕೊಟ್ಟಿದ್ದಾರೆಂದು ಹೇಳಿ, ಕೊಡದಿರುವುದನ್ನು ನೀವು ಕೊಟ್ಟಿಲ್ಲವೆಂದು ಹೇಳಿ. ನೀವು ಹಿರಿಯ ಮಂತ್ರಿಗಳಾಗಿ ಬಂದು ಕಾಸು ಕೊಟ್ಟಿಲ್ಲವೆಂದು ಈ ಮನೆಯಲ್ಲಿ ಈ ರೀತಿ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ಮಾನ್ಯ ಸದಸ್ಯರು ಬಹಳ ತಪ್ಪು ಗ್ರಹಿಕೆ ಮಾಡಿಕೊಂಡಿದ್ದಾರೆ. ನಾವು 100 ಕೋಟಿ ರೂಪಾಯಿಗಳ ಆವರ್ತ ನಿಧಿಯನ್ನು [illegible]ನೆಗೆ ಕೊ[illegible]

ನ್ಯಾಫೆಡದವರು ಮತ್ತು ಕೇಂದ್ರ ಸರ್ಕಾರದವರು ನಾವು ಕೊಟ್ಟ ಹಣವನ್ನು ಆಮೇಲೆ ರಿಯಿಂಬರ್ಸ್‌ಮೆಂಟ್ ಮಾಡುತ್ತಾರೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ: ನೀವು ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ. ನೀವು ಕೊಟ್ಟಿರುವುದು ಕೇವಲ 15 ಕೋಟಿ. ಸುಮ್ಮನೆ ಏಕೆ ಹೇಳುತ್ತೀರಿ? ಕೇವಲ 15 ಕೋಟಿ ರೂಪಾಯಿ ಮಾತ್ರ ಕೊಟ್ಟಿದ್ದೀರಿ. ಅದರ ಮೇಲೆ ನೀವು ಹಣವನ್ನು ಕೊಟ್ಟಿಲ್ಲ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು : ಮಾನ್ಯ ಸದಸ್ಯರು, ನಾವು ನೂರು ಕೋಟಿ ರೂಪಾಯಿ ಕೊಟ್ಟಿಲ್ಲವೆಂದು ದಯವಿಟ್ಟು ಊಹಮೋಹದ ಮಾತುಗಳನ್ನು ಹೇಳಬಾರದು. ಅದನ್ನು ತೋರಿಸಿಕೊಡಿ ನೀವು ಏನು ಹೇಳುತ್ತಿರೋ ಅದನ್ನು ಕೇಳಲಿಕ್ಕೆ ಸರ್ಕಾರ ಸಿದ್ಧವಿದೆ. ತಾವು ಊಹಮೋಹದ ಆಧಾರದ ಮೇಲೆ ಹೇಳಿಕೆ ಕೊಡುವುದು ಬೇಡವೆಂದು ಮಾನ್ಯ ಸದಸ್ಯರಲ್ಲಿ ಮನವಿ ಮಾಡುತ್ತೇವೆ. ನಾವು 100 ಕೋಟಿ ರೂ.ಗಳ ಆವರ್ತನಿಧಿ ಹಣವನ್ನು ಈಗಾಗಲೇ ಕೊಟ್ಟಿದ್ದೇವೆ; ಅದು ಸರ್ಕಾರದ ರೆಕಾರ್ಡ್‌ನಲ್ಲಿದೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ: ಊಹಪೋಹದ ಮಾತುಗಳನ್ನು ನೀವು ಹೇಳುತ್ತಿದ್ದೀರಿ, ನಾನು ಮಾಹಿತಿ ಸಹಿತ ಕೊಡುತ್ತಿದ್ದೇನೆ. ನೀವು ಎಷ್ಟೆಷ್ಟು ಕೊಟ್ಟಿದ್ದೀರಿ, ಎಷ್ಟೆಷ್ಟು ಪ್ರೊಕ್ಯೂರ್ ಮಾಡಿದ್ದೀರಿ ಎನ್ನುವ ಮಾಹಿತಿ ನನ್ನ ಹತ್ತಿರವಿದೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು : ನಮ್ಮ ಸರ್ಕಾರದಲ್ಲಿ ಕೂಡ ಸಾಕಷ್ಟು ಮಾಹಿತಿ ಇದೆ, ತಾವು ಬೇಕಾದರೆ ತರಿಸಿ ನೋಡಬಹುದು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನೂರು ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಮಾನ್ಯ ಸದಸ್ಯರು ಕೊಟ್ಟಿಲ್ಲವೆಂದು ಹೇಳುತ್ತಾರೆ, ಕಡತ ತೆಗೆಸಿದರೆ ಗೊತ್ತಾಗುತ್ತದೆ. ಅದರ ಬಗ್ಗೆ ಚರ್ಚೆ ಏತಕ್ಕೆ?

ಮಾನ್ಯ ಸದಸ್ಯರು : ಅವರು ಹಣ ಕೊಟ್ಟಿಲ್ಲವೆಂದು ಹೇಳುತ್ತಾರೆ, ಇವರು ಕೊಟ್ಟಿದ್ದೇವೆಂದು ಹೇಳುತ್ತಾರೆ. ಈಗ ಇದರ ಸತ್ಯಾಸತ್ಯತೆ ಗೊತ್ತಾಗಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮಂತ್ರಿಗಳು ಸದನದ ಮುಂದೆ ಪೂರ್ಣ ವಿವರಗಳನ್ನು ಕೊಡಲಿ. ಕೇಂದ್ರ ಸರ್ಕಾರ ಎಷ್ಟು ಹಣ ಕೊಟ್ಟಿದೆ, ರಾಜ್ಯ ಸರ್ಕಾರ ಎಷ್ಟು ಹಣ ಕೊಟ್ಟಿದೆ ಎನ್ನುವ ಅಂಕಿ ಅಂಶಗಳನ್ನು ಕೊಡಲಿ ಆಗ ರಾಜ್ಯ ಸರ್ಕಾರದ ಪರಿಸ್ಥಿತಿ ಗೊತ್ತಾಗುತ್ತದೆ ಸುಮ್ಮನೆ ಹಾಗೆ ತಪ್ಪು ಮಾಹಿತಿ ಹೇಳುವುದಲ್ಲ, ಸದನದ ಮುಂದೆ ವಾಸ್ತವಾಂಶ ಇಡಿ. ಮಂತ್ರಿಗಳು ಸಹಿತ ರೈತರಿಗೆ ತಪ್ಪು ಮಾಹಿತಿ ಕೊಡುವ ಕೆಲಸವನ್ನು ಇವತ್ತು ಮಾಡುತ್ತಿದ್ದಾರೆ. ರೈತರಿಗೆ ನಾವು ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆಂದು ತಪ್ಪು ಮಾಹಿತಿ ಕೊಡುವಂಥದ್ದು ಆಗುತ್ತದೆ. ಆದರೆ ರಾಜ್ಯ ಸರ್ಕಾರದ ಕಡೆಯಿಂದ ಏನೂ ಮಾಡಿಲ್ಲ, ಏನೂ ಮಾಡುವುದಕ್ಕೆ ಆಗುತ್ತಿಲ್ಲ, ರಾಜ್ಯ ಸರ್ಕಾರ ಈಗಲಾದರೂ ಎಚ್ಚರಗೊಳ್ಳಬೇಕು.

ಶ್ರೀ ಬಿ.ಎಸ್. ಪಾಟೀಲ್ ಸಾಸನರು: ಮಾನ್ಯ ವಿರೋಧ ಪಕ್ಷದ ನಾಯಕರು ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆಂದು ಹೇಳಿದ್ದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು: ತಪ್ಪು ಮಾಹಿತಿ ಆಗದಿದ್ದರೆ, ಸ್ಪೆಸಿಫಿಕ್ ಮಾಹಿತಿಯನ್ನು ಕೊಡಿ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರು: ಕೊಡಬಹುದು; ಆಗಲಿ;

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪ ಅಧ್ಯಕ್ಷರೆ ಮಾನ್ಯ ಸಚಿವರು, ರಾಜ್ಯ ಸರ್ಕಾರವನ್ನು ಮತ್ತು ಸರ್ಕಾರದ ಎಲ್ಲಾ ಮಾಹಿತಿಗಳನ್ನು ಬಹಳಷ್ಟು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ. ಅವರು ಹೊಸದಾಗಿ ಮಂತ್ರಿಗಳಾಗಿದ್ದಾರೆ. ಅವರಿಗೆ ಅಧಿಕಾರವಿದೆ. ಡಿಫೆಂಡ್ ಮಾಡಿಕೊಳ್ಳಲಿ, ಆದರೆ ಹಿಂದೆ ಆ ಇಲಾಖೆಯ ಮಂತ್ರಿಗಳಾಗಿ ಯಾರು ಇದ್ದರು ಮತ್ತು ಅಧಿಕಾರಿಗಳು ಯಾರಿದ್ದರು ಅವರುಗಳ ಕಡೆಯಿಂದ ಮಾಹಿತಿಯನ್ನು ತರಿಸಿಕೊಂಡು ಲಿಖಿತವಾಗಿ ಸದನದಲ್ಲಿ ಮಂಡನೆ ಮಾಡಲಿ. ಎಷ್ಟು ಹಣವನ್ನು ಆವರ್ತನಿಧಿಯಿಂದ ಅವರು ತೆಗೆದು ಇಟ್ಟಿದ್ದಾರೆ? ಎಷ್ಟು ಹಣವನ್ನು ಆವರ್ತನಿಧಿಯಿಂದ ರೈತರಿಗೆ ಕೊಟ್ಟಿದ್ದಾರೆ? ಕೇಂದ್ರ ಸರ್ಕಾರದಿಂದ ರೀಯಿಂಬರ್ಸ್ ಆದ ಹಣ ಎಷ್ಟು? ಆ ವಿವರವನ್ನು ಸದನದ ಮುಂದೆ ಇಡಲಿ; ಆಗ ರೈತರ ಬಗ್ಗೆ ಏನು ಕಳಕಳಿ ಇದೆ ಎನ್ನುವುದು ಗೊತ್ತಾಗುತ್ತದೆ. ನಾವು ಏನು ಕೆಲವು ವಿಚಾರಗಳನ್ನು ಹೇಳಿದ್ದೇನೆ; ಅದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಮಾನ್ಯ ಸಚಿವರು ಎಲ್ಲ ವಿಷಯಗಳಿಗೆ ಸ್ಪಷ್ಟೀಕರಣವನ್ನು ಕೊಡುತ್ತಾರೆನ್ನುವ ನಂಬಿಕೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇನ್ನು ತೆಂಗು ಬೆಳೆದ ರೈತರ ಪರಿಸ್ಥಿತಿ ಏನಾಗಿದೆ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ತೆಂಗಿಗೆ ನುಸಿರೋಗ ಬಂದು ಅದನ್ನು ಹೋಗಲಾಡಿಸುವ ಸಲುವಾಗಿ ಯಾವುದೋ ಒಂದು ಔಷಧಿಯನ್ನು ತೆಗೆದುಕೊಂಡು ಬಂದರು, ಮಾನ್ಯ ಮುಖ್ಯಮಂತ್ರಿಗಳು ಒಂದು ಕಡೆ ಕಾರ್ಯಕ್ರಮವನ್ನು ಮಾಡಿ ಅದರ ಉದ್ಘಾಟನೆಯನ್ನು ಮಾಡಿದರು. ನುಸಿರೋಗವನ್ನು ಹೋಗಲಾಡಿಸುವುದಕ್ಕೆ ತೆಂಗಿನ ಮರಗಳಿಗೆ ಇಂಜೆಕ್ಷನ್ ಮಾಡುವಂಥದ್ದು ಮತ್ತು ಔಷಧಿಯನ್ನು ಸಿಂಪರಣೆ ಮಾಡುವಲ್ಲಿ ನೂರೆಂಟು ಹಗರಣಗಳಾಗಿವೆ, ಅವ್ಯವಹಾರಗಳಾಗಿವೆ. ಅದು ಪತ್ರಿಕೆಗಳಲ್ಲಿ ಕೂಡ ಬಂತು. ಆ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿಬಂದರೂ ಆ ನುಸಿರೋಗ ಹೋಗಲಿಲ್ಲ. ಇವತ್ತು ರೈತರು ಏನು ಹೇಳುತ್ತಿದ್ದಾರೆಂದರೆ, ಈ ನುಸಿರೋಗಕ್ಕೆ ಏನು ಔಷಧಿಯನ್ನು ಸಿಂಪಡಿಸುವುದಕ್ಕೆ ಹೇಳಿದ್ದೀರಿ ಅದನ್ನು ನಮಗೆ ಕೊಡಬೇಡಿ; ಅದು ಏನು ಇಂಜಕ್ಷನ್ ಚುಚ್ಚುತ್ತೀರಿ ಅದು ನಮಗೆ ಬೇಡ; ಎಂಬ ಅಭಿಪ್ರಾಯಕ್ಕೆ ರೈತರು ಬಂದಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ನುಸಿರೋಗ ಹೋಗಲಿಲ್ಲ, ಮಂತ್ರಿಗಳಂತೂ ಹೋದರಲ್ಲಾ

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಏನಾಗಿದೆ ಎಂದರೆ, ತನಿಖೆಗೆ ಸರ್ಕಾರದ ಆದೇಶವೆಂದು ಪತ್ರಿಕೆಗಳಲ್ಲಿ ಬಂತು "ತೆಂಗಿನ ಮರಕ್ಕೆ ಮುಳುವಾದ ನುಸಿ ಔಷಧಿ, ಅದರಿಂದ ಪರಿಣಾಮ ಏನೂ ಆಗಲಿಲ್ಲ. ಇದಕ್ಕೆ ನೂರಾರು ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದರೂ ಏನೂ ಆಗಲಿಲ್ಲ. ಆ ಹಣ ಎಲ್ಲಿ ಹೋಯಿತು ಎಂಬ ಬಗ್ಗೆ ವಿಚಾರ ಮಾಡಬೇಕಾಗಿದೆ ಮತ್ತು

1.30 ಪಿ.ಎಂ

ತನಿಖೆ ಆಗಬೇಕಾಗಿದೆ. ತೆಂಗನ್ನು ಬೆಳೆದು ರೈತ ಉದ್ಧಾರವಾಗಲಿಲ್ಲ. ಆ ನುಸಿ ರೋಗ ಹೋಗಲಿಲ್ಲ. ಇವತ್ತು ಮಾನ್ಯ ಜಯಚಂದ್ರ ಅವರನ್ನು ಮಂತ್ರಿ ಮಂಡಲದಿಂದ ತೆಗೆದರು. ಏತಕ್ಕೆ ತೆಗೆದರು? ಇಲ್ಲಿಂದ ತೆಗೆದು ಡೆಲ್ಲಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಅಂದರೆ ಒಂದುಸಲ ತೆಗೆಯುವುದು, ಮತ್ತೆ ಪ್ರಮೋಷನ್ ಕೊಡುವುದು. ಈಗ ಡೆಲ್ಲಿಗೆ ಕಳುಹಿಸಿದ್ದಾರೆ ಯಾವ ಆಧಾರದ ಮೇಲೆ ಇದನ್ನು ಮಾಡಿದ್ದಾರೆ ಇದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ವಿರೋಧ ಪಕ್ಷದ ನಾಯಕರೇ, ನುಸಿ ರೋಗ ಬಂದಮೇಲೆ ತೋಟಗಾರಿಕೆಗೆ ಮೂರು ಜನ ಮಂತ್ರಿಗಳಾದರು. ಅದರ ವಾಸನೆಗೆ ಒಬ್ಬೊಬ್ಬರೇ ಬಿಟ್ಟು ಹೋಗುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್: ಹಾಗಾಗಿ ಮಾನ್ಯ ಉಪಾಸಭಾಧ್ಯಕ್ಷರೇ, ಇದರ ಬಗ್ಗೆ ಕ್ರಮ ತೆಗೆದುಕೊಂಡು ನುಸಿರೋಗದ ಚಿಕಿತ್ಸೆಗೆಂದು ಔಷಧಿಯನ್ನು ಸಿಂಪಡಿಸಿದರು, ಇದರಲ್ಲಿ ಎಷ್ಟು ಹಣ ಖರ್ಚು ಮಾಡಿದರು, ಎಷ್ಟು ತೆಂಗಿನ ಮರಗಳಿಗೆ ಈ ನುಸಿ ರೋಗ ಹೋಯಿತು ಎಂಬ ಬಗ್ಗೆ ನಮ್ಮ ಮಂತ್ರಿಗಳು ಸ್ಪಷ್ಟವಾದಂಥ ವಿವರಗಳನ್ನು ಕೂಡ ಬೇಕು ಎನ್ನುವಂಥ ಒತ್ತಾಯವನ್ನೂ ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ನಾನು ಇನ್ನೊಂದು ಪ್ರಮುಖವಾದಂಥ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವಂಥಾದ್ದು ಏನೆಂದರೆ ಡಾ: ವೀರೇಶ್ ಅವರನ್ನು ಕಮಿಟಿಗೆ ನೇಮಕ ಮಾಡಿದರು. ರೈತರ ಆತ್ಮಹತ್ಯೆ ಪ್ರಕರಣ ನಡೆದು ಸುಮಾರು 160 ಜನರು ಸತ್ತರು. ಇದರ ಬಗ್ಗೆ ಸರ್ಕಾರದಿಂದ ಅಂಕಿ ಅಂಶಗಳನ್ನು ಕೊಡುತ್ತಿಲ್ಲ. ನಮಗೆ ಪತ್ರಿಕೆಗಳ ಮುಖಾಂತರ, ಬೇರೆ ಬೇರೆ ಮೂಲಗಳಿಂದ ಬಂದಂಥ ವರದಿಗಳ ಪ್ರಕಾರ 150 ರಿಂದ 160 ರಷ್ಟು ರೈತರು ಕಳೆದ ಒಂದೂವರೆ ವರ್ಷದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಡಾಃ ವೀರೇಶ್ ಅವರು ಕೃಷಿ ತಜ್ಞರಿದ್ದಾರೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಡಾಃ ವೀರೇಶ್ ಅವರು ಎಲ್ಲೆಲ್ಲಿ ಪ್ರವಾಸ ಮಾಡಿದರು ಎಂದು ನಮಗೆ ಗೊತ್ತಿಲ್ಲ. ಎಷ್ಟು ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡರು, ಆ ಕುಟುಂಬ ವರ್ಗದ ಎಷ್ಟು ಜನರನ್ನು ಹೋಗಿ ಆ ಕಮಿಟಿಯವರು ಭೇಟಿಯಾದರೋ ಗೊತ್ತಿಲ್ಲ. ಆದರೆ ಅವರು ಒಂದು ವರದಿಯನ್ನು ಕೊಟ್ಟರು. ಡಾಃ ವೀರೇಶ ಅವರ ವರದಿ ಏನೆಂದರೆ, ಆ ರೈತ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣ ಏನೆಂದರೆ ಅವರವರ ವೈಯಕ್ತಿಕ ಕಾರಣಗಳು. ಆತ ಕುಡಿತದಿಂದ ಜೀವನ ಹಾಳುಮಾಡಿಕೊಂಡಿದ್ದಾನೆ, ಕುಡಿತದಿಂದ ತನ್ನ ದುಶ್ಚಟಗಳಿಂದ ಇವತ್ತು ರೈತರು ಆತ್ಮಹತ್ಯೆ ಮಾಡಿಕೊಂಡಿದಾದರೆ ಎನ್ನುವಂಥಾದ್ದನ್ನು ಅವರು ಪ್ರಮುಖವಾಗಿ ಪ್ರಸ್ತಾಪ ಮಾಡಿದ್ದಾರೆ. ಮತ್ತು ಆತ್ಮಹತ್ಯೆ ಮಾಡಿಕೊಂಡಂಥ ರೈತ ಕುಟುಂಬದವರಿಗೆ ಪರಿಹಾರಧನ ಕೊಡಬಾರದು ಎನ್ನುವಂಥ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಡಾಃ ವೀರೇಶ್ ಅವರ ವರದಿಯನ್ನು ನಾವು ಒಪ್ಪಿಕೊಳ್ಳಬೇಕೋ ಹೇಗೆ ಎನ್ನುವಂಥಾದ್ದನ್ನು ನಾವು ಚಿಂತನೆ ಮಾಡಬೇಕಾಗಿದೆ ಇಡೀ ರಾಜ್ಯದಾದ್ಯಂತ ಎಲ್ಲ ಕಡೆಯಿಂದಲೂ ಡಾಃ ವೀರೇಶ್ ಸಮಿತಿ ವರದಿಗೆ ವಿರೋಧ ವ್ಯಕ್ತವಾಗಿದೆ. ಎಲ್ಲೆಡೆಯೂ ಜನರು ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿಯವರೆಗೂ ಸರ್ಕಾರ ಅದು ಮುಖ್ಯಮಂತ್ರಿಗಳು ಇರಬಹುದು, ಮಂತ್ರಿಗಳು ಇರಬಹುದು, ಡಾಃ ವೀರೇಶ್ ವರದಿ ಬಗ್ಗೆ ಇದನ್ನು ನೀವು

ಒಪ್ಪಿಕೊಂಡಿದ್ದಾರೆಯೇ ಅಥವಾ ರಿಜೆಕ್ಟ್ ಮಾಡಿದ್ದಾರೆಯೇ ಅನ್ನುವಂಥದ್ದರ ಬಗ್ಗೆ ಸರ್ಕಾರದ ಕಡೆಯಿಂದ ಇವತ್ತಿನವರೆಗೂ ಏನೂ ಸ್ಪಂದನ ಇಲ್ಲ. ಈ ಕಡೆ ಮುಖ್ಯಮಂತ್ರಿಗಳು ಇರಬಹುದು, ಅವರ ನಾಯಕರು ಇರಬಹುದು, ಆತ್ಮಹತ್ಯೆ ಮಾಡಿಕೊಂಡಂಥ ರೈತರು ಯಾರಿದ್ದಾರೆ, ಅವರ ಕುಟುಂಬ ವರ್ಗದವರನ್ನು ಒಂದು ಸಾರಿಯೂ ಹೋಗಿ ಭೇಟಿಯಾಗಿಲ್ಲ, ಸಾಂತ್ವನ ಹೇಳಿಲ್ಲ. ಅದೇ ಆಂಧ್ರ ಪ್ರದೇಶಕ್ಕೆ ಅವರ ನಾಯಕರು ಹೋಗಿರಬಹುತ್ತಾರೆ. ಆಂಧ್ರ ಪ್ರೇದಶದಲ್ಲಿ ಯಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅಲ್ಲಿಗೆ ಕಾಂಗ್ರೆಸ್ಸಿನ ಹಿರಿಯ ನಾಯಕರು, ಮತ್ತು ಲೋಕಸಭೆಯ ವಿರೋಧಪಕ್ಷದ ನಾಯಕರಾದಂಥ ಶ್ರೀಮತಿ ಸೋನಿಯಾ ಗಾಂಧಿಯವರು ಹೋಗಿ ಭೇಟಿ ಕೊಟ್ಟರು. ಆದರೆ ಶ್ರೀಮತಿ ಸೋನಿಯಾ ಗಾಂಧಿಯರರು ನಮ್ಮರಾಜ್ಯಕ್ಕೆ ಬರಲಿಲ್ಲ. ಹಿಂದೆ ಜನತಾದಳ ಸರ್ಕಾರ ಇದ್ದಾಗ ಗುಲ್ಬರ್ಗಾದಲ್ಲಿ, ಬೀದರ್‌ನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ಶ್ರೀಮತಿ ಸೋನಿಯಾಗಾಂಧಿಯವರು ಅಲ್ಲಿಗೆ ಭೇಟಿ ಕೊಟ್ಟು ಹೋಗಿದ್ದರು. ಆದರೆ ಈಗ ಭೇಟಿ ಕೊಡಲಿಲ್ಲ. ಅಲ್ಲಿ ಆಂಧ್ರಪ್ರದೇಶದಲ್ಲಿ ಇವತ್ತು ರೈತರು ಯಾರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅವರಿಗೆ ಪರಿಹಾರಧನವನ್ನು ಶ್ರೀಮತಿ ಸೋನಿಯಾ ಗಾಂಧಿಯವರು ಪಕ್ಷದ ಮುಖಾಂತರವೂ ಕೊಟ್ಟುಬಂದರು. ಆದರೆ ಇಲ್ಲಿ ನಮ್ಮ ಕರ್ನಾಟಕದಲ್ಲಿ ಯಾರನ್ನೂ ಭೇಟಿಯಾಗಲಿಲ್ಲ ಮತ್ತು ರಾಜ್ಯಸರ್ಕಾರ ನೇಮಕ ಮಾಡಿದ ಡಾ॥ ವೀರೇಶ್ ಕಮಿಟಿಯವರು ಏನು ವರದಿಯನ್ನು ಕೊಟ್ಟಿದ್ದಾರೆ, ಅದರಲ್ಲಿ ಅವರು ಪರಿಹಾರಧನ ಕೊಡುವಂಥಾದ್ದು ಅವಶ್ಯಕತೆ ಇಲ್ಲ ಎನ್ನುವಂಥ ಮಾತನ್ನು ಹೇಳಿದ್ದಾರೆ. ಹಾಗಾದರೆ ರಾಜ್ಯ ಸರ್ಕಾರದ ನೀತಿ ಏನು? ಇದರ ಬಗ್ಗೆ ಅವರು ಬಗ್ಗೆ ಅವರು ಸ್ಪಷ್ಟನೆಯನ್ನು ಕೊಡಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ಎರಡೂ ಸದನಗಳಲ್ಲೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎಷ್ಟು ಜನರಿಗೆ ನೀವು ಪರಿಹಾರಧನವನ್ನು ಕೊಟ್ಟಿದ್ದೀರಿ? ಏಕೆ ಕೊಟ್ಟಿಲ್ಲ? ಯಾವಾಗ ಕೊಡುತ್ತೀರಿ? ಅಥವಾ ಕೊಡುವುದಕ್ಕೆ ಆಗುವುದಿಲ್ಲ ಎನ್ನುವಂಥಾದ್ದನ್ನಾದರೂ ಸ್ಪಷ್ಟಮಾಡಬೇಕು ಎಂದು ಹೇಳಿದ್ದೆವು. ಆದರೆ ಇದರ ಬಗ್ಗೆ ಇಲ್ಲಿಯವರೆಗೂ ರಾಜ್ಯಸರ್ಕಾರದ ಚಕಾರ ಇಲ್ಲ. ಏಕೆ ಇದರ ಬಗ್ಗೆ ಮೌನವಾಗಿದ್ದೀರಿ ಎನ್ನುವಂಥದ್ದನ್ನು ಇವತ್ತು ಸರ್ಕಾರ ಹೇಳಬೇಕಾಗುತ್ತದೆ. ಆತ್ಮಹತ್ಯೆ ಮಾಡಿಕೊಂಡಂಥ ರೈತರು ಕುಟುಂಬವರ್ಗದವರಿಗೆ ನೀವು ಪರಿಹಾರಧನವನ್ನು ಕೊಡುತ್ತೀರೋ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಮಾನ್ಯ ಕೃಷಿ ಸಚಿವರು ಇರಬಹುದು ಅಥವಾ ಮುಖ್ಯಮಂತ್ರಿಗಳು ಇರಬಹುದು, ಇದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ಇಲ್ಲದಿದ್ದರೆ ಇದು ಒಳ್ಳೆಯ ರೀತಿಯ ಸರ್ಕಾರ ಅಲ್ಲ, ರೈತರಿಗೆ ಹಿತವಾಗುವಂಥ ಸರ್ಕಾರ ಅಲ್ಲ ಎಂದು ಹೇಳುವಂಥ ನಿರ್ಣಯಕ್ಕೆ ನಾವು ಬರಬೇಕಾಗುತ್ತದೆ. ಇವತ್ತು ರಾಜ್ಯದ ಜನತೆ ಅದನ್ನೇ ನಿರೀಕ್ಷೆ ಮಾಡುತ್ತಿದ್ದಾರೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಏಕೆ ಕಳಕಳಿ ಇಲ್ಲ ಎನ್ನುವುದರ ಬಗ್ಗೆ ಈ ರಾಜ್ಯದ ಜನತೆ ಒಂದು ನಿರ್ಧಾರಕ್ಕೆ ಬರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ರಾಜ್ಯಸರ್ಕಾರದ ಸ್ಪಷ್ಟವಾದ ನೀತಿ ಏನು ಎನ್ನುವುದನ್ನು ಹೇಳಬೇಕು ಎನ್ನುವಂಥ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇದರ ಜತೆಗೆ ಅಂತರ್‌ಜಲ ಮಟ್ಟ ಇವತ್ತು ಕಡಿಮೆಯಾಗಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಬಗ್ಗೆ ಸಾಕಷ್ಟು ವಿವರಗಳು ಇವೆ. ಈ ಅಂತರ್‌ಜಲ ಮಟ್ಟವನ್ನು ಏರಿಸುವಂಥ ಕೆಲಸ ಇವತ್ತು ರಾಜ್ಯಸರ್ಕಾರದ ಕಡೆಯಿಂದ ಆಗುತ್ತಿಲ್ಲ. ವಾಟರ್ ಹಾರ್ವೆಸ್ಟ್ ಮಾಡುವಂಥಾದ್ದೂ ಆಗುತ್ತಿಲ್ಲ. ಅದಕ್ಕಾಗಿ ಇವತ್ತು ರಾಜ್ಯಸರ್ಕಾರ

ಇದರ ಬಗ್ಗೆ ಗಂಭೀರವಾದಂಥ ಕ್ರಮವನ್ನು ಕೈಗೊಳ್ಳಬೇಕೆನ್ನುವಂಥ ಒತ್ತಾಯವನ್ನು ನಾನು ಇಲ್ಲಿ ಮಾಡುತ್ತಿದ್ದೇನೆ. ಈ ರೀತಿ ಪರಿಸ್ಥಿತಿ ಇದ್ದಂಥ ಸಂದರ್ಭದಲ್ಲಿ ನಾನು ಇವತ್ತು ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ ರೈತರು ಸಂಕಷ್ಟದಲ್ಲಿದ್ದಾರೆ. ಅದಕ್ಕಾಗಿ ರಾಜ್ಯ ಸಾರ್ಕರ ಆವರ್ತನಿಧಿಯಿಂದ ಎಷ್ಟು ಹಣ ಬಿಡುಗಡೆ ಮಾಡಿದೆ? ಇವತ್ತು ಬಡ್ಡಿ ಮನ್ನಾ ಮಾಡುವುದಕ್ಕೆ ನಿಮ್ಮ ಕ್ರಮ ಏನು ಮತ್ತು ಅವರ ಸಾಲದ ಅವಧಿಯನ್ನು ವಿಸ್ತರಣೆ ಮಾಡುವುದಕ್ಕೆ ನಿಮ್ಮ ಕ್ರಮ ಏನು? ಮತ್ತು ಈ ಬೆಳೆವಿಮೆ ಹಣವನ್ನು ಇದುವರೆಗೂ ಏಕೆ ಬಿಡುಗಡೆ ಮಾಡಿಲ್ಲ ಎನ್ನುವುದರ ಬಗ್ಗೆ ವಿವರ - ಇವಿಷ್ಟನ್ನು ನಾನು ಕೇಳಿದ್ದೇನೆ. ಆದರೆ ರೈತರಿಗೆ ಇವತ್ತು ಬಡ್ಡಿ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ, ಏನೂ ಹಣ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದವರು, ಈಗಾಗಲೇ ನಾನು ಪ್ರಸ್ತಾಪ ಮಾಡಿದ ಹಾಗೆ ಅಬ್ಕಾರಿ ದೊರೆಗಳಿಗೆ ಬಡ್ಡಿ ಮನ್ನಾ ಮಾಡುವಂಥಾದ್ದು ಮಾಡಿ ಬೇರೆ ಬೇರೆ ರೀತಿಯಿಂದ ಹಣ ಸೋರಿಹೋಗುತ್ತಿದೆ. ಅಬ್ಕಾರಿ ಇಲಾಖೆಯಲ್ಲಿ 1450 ಕೋಟಿ ರೂಪಾಯಿ ಸೋರಿಹೋಗುತ್ತಿದೆ. ಇದನ್ನು ತಡೆಹಿಡಿಯುವಂಥ ಕೆಲಸ ಆಗುತ್ತಿಲ್ಲ. ಕೆ.ಪಿ.ಟಿ.ಸಿ.ಎಲ್ ನಲ್ಲಿ ಡಿಸ್ಟ್ರಿಬ್ಯೂಶನ್‌ನಲ್ಲಿ 38 ಪರ್ಸೆಂಟ್ ಸೋರಿ ಹೋಗುತ್ತಿದೆ. ಅಲ್ಲಿ ಸಾವಿರಾರು ಕೋಟಿ ರೂಪಾಯಿ ಸೋರಿಹೋಗುತ್ತಿದ್ದರೂ ಕೂಡ ನಿಮಗೆ ಅದನ್ನು ನಿಯಂತ್ರಣ ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತು ರಾಜ್ಯದ ರೈತರು ಸಂಕಷ್ಟದಲ್ಲಿರುವಂಥ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳ ಬಗ್ಗೆ ಏನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ ಎಂದರೆ, ಇತ್ತೀಚೆಗೆ ಮುಖ್ಯಮಂತ್ರಿಗಳು ಸಂಪುಟವನ್ನು ಪುನರ್‌ರಚನೆ ಮಾಡಿದರು. ಮುಖ್ಯಮಂತ್ರಿಗಳು ಪ್ರಾರಂಭದಲ್ಲಿ ತಮ್ಮ ಅಧಿಕಾರವನ್ನು ತೆಗೆದು ಕೊಳ್ಳುವಂಥ ಸಂದರ್ಭದಲ್ಲಿ ಅವರ ಸಚಿವರ ಸಂಪುಟದಲ್ಲಿ ಕೇವಲ 44 ಜನ ಇದ್ದರು. ಈಗ 48 ಜನ ಮಂತ್ರಿಗಳು ಇದ್ದಾರೆ. ಮಂತ್ರಿಮಂಡಲದಲ್ಲಿ ಇಷ್ಟು ಜನರು ರಲ್ಲದೆ 20 ಜನಕ್ಕಿಂತ ಹೆಚ್ಚು ಶಾಸಕರು ಮತ್ತು ಉಳಿದ ಪ್ರಮುಖರು ಸೇರಿದಂತೆ 24 ಜನರಿಗೆ ಮಂತ್ರಿಗಳ ಸ್ಥಾನಮಾನದ ಒಂದು ಸ್ಥಾನವನ್ನು ಕೊಟ್ಟಿದ್ದಾರೆ. ಇವತ್ತು ಮಂಡಳಿ ಇರಬಹುದು, ಕಾರ್ಪೋರೇಷನ್ ಇರಬಹುದು, ಅವರನ್ನು ಅಧ್ಯಕ್ಷರನ್ನಾಗಿ ನೇಮಕಮಾಡಿ, ಈ 24 ಜನರಿಗೆ ಮಂತ್ರಿಗಳ ಸ್ಥಾನಮಾನವನ್ನು ಕೊಟ್ಟಿದ್ದನ್ನು ನೋಡಿದರೆ ಇದು ಕೇವಲ 48 ಸಚಿವರುಗಳು ಮಂತ್ರಿಮಂಡಲ ಅಲ್ಲ, ಇದು 72 ಜನರ ಮಂತ್ರಿಮಂಡಲವೆಂದು ನಾವು ಹೇಳಬೇಕಾಗುತ್ತದೆ. ಹಾಗಾದರೆ ರಾಜಕೀಯ ವ್ಯವಸ್ಥೆಯಲ್ಲಿ ನಾವು ನೋಡುತ್ತೇವೆ. ಎಲ್ಲಿ ಒಂದು ಸಮ್ಮಿಶ್ರ ಸರ್ಕಾರ ಇದೆಯೋ ಅಲ್ಲಿ ಆ ಸರ್ಕಾರವನ್ನು ಹೇಗಾದರೂ ನಡೆಸಿಕೊಂಡು ಹೋಗಬೇಕು ಎಂದು ಮುಖ್ಯಮಂತ್ರಿಗಳಿಗೆ ಒಂದು ಒತ್ತಡ ಇರುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಿ ಹೀಗೆ ಮಾಡುತ್ತಾರೆ. ಆದರೆ ಇದು ಒಂದೇ ಪಕ್ಷದ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಇಷ್ಟೊಂದು ಜನರಿಗೆ ಈ ಸ್ಥಾನಮಾನ ಕೊಡುವಂಥ ಅವಶ್ಯಕತೆ ಏನಿತ್ತು? ಏಕೆ ಇದನ್ನು ನಾನು ಹೇಳುತ್ತಿದ್ದೇನೆ. ಎಂದರೆ, ಇವತ್ತು 48 ಜನ ಮಂತ್ರಿಗಳ ಜಂಬೋಜೆಟ್ ಇದೆ. ಇದರ ಜೊತೆಗೆ 24 ಜನರಿಗೆ ಮಂತ್ರಿಗಳ ಸ್ಥಾನಮಾನ ಕೊಟ್ಟಿದ್ದಾರೆ. ಒಟ್ಟು 72 ಜನ ಎಂದರೆ ಇವತ್ತು ರಾಜ್ಯಸರ್ಕಾರದ ಮೇಲೆ ಹೆಚ್ಚಿನ ಒಂದು ಬರ್ಡನ್ ಬೀಳುತ್ತಿದೆ. ಒಬ್ಬ ಮಂತ್ರಿಯ ಸ್ಥಾನಮಾನ ಎಂದರೆ ಏನಿಲ್ಲವೆಂದರೂ ಕನಿಷ್ಟ ಒಂದು ತಿಂಗಳಿಗೆ 2 ಲಕ್ಷ ರೂಪಾಯಿ ಆದರೂ ಬೊಕ್ಕಸಕ್ಕೆ ಭಾರ ಬೀಳುತ್ತದೆ. ಅದು ಐದು ಲಕ್ಷ ಆಗಬಹುದು, ಹತ್ತು ಲಕ್ಷವೂ ಆಗಬಹುದು. ಮಿನಿಮಮ್ ಎರಡು ಲಕ್ಷ ರೂಪಾಯಿ ಆದರೂ ಇವತ್ತು ರಾಜ್ಯಸರ್ಕಾರದ ಮೇಲೆ ಬರ್ಡನ್ ಬೀಳುವಂಥಾದ್ದು ಇದೆ. ಇವತ್ತು ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿ ಏನಿದೆ? ಕಂಟ್ರಾಕ್ಟರ್‌ಗಳು

ಬೀದಿಗೆ ಬಿದ್ದಿದ್ದಾರೆ, ಈಗಾಗಲೇ ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯಲ್ಲಿ ಮುನ್ನೂರು ಕೋಟಿ ರೂಪಾಯಿಗಳಷ್ಟು ಬಿಲ್ ಬಾಕಿ ಇದೆ. ನೀರಾವರಿ ಇಲಾಖೆಯಲ್ಲಿ ಏಳುನೂರು ಕೋಟಿ ರೂಪಾಯಿ ಬಿಲ್ ಹಾಕಿ ಇದೆ. ಕಳೆದ ಏಳೆಂಟು ತಿಂಗಳಿಂದ ಬಿಲ್‌ಗಳ ಪೇಮೆಂಟ್ ಆಗಿಲ್ಲ ಮತ್ತು ಬೇರೆ ಬೇರೆ ಇಲಾಖೆಗಳಲ್ಲಿ ಚೆಕ್‌ಗಳು ಮರಳಿ ಬರುತ್ತಾ ಇವೆ. ಟ್ರೆಜರಿಯಲ್ಲಿ ಚೆಕ್ಕುಗಳು ಹೆಲ್ಡ್‌ಅಪ್ ಆಗಿವೆ. ಆ ಪೇಮೆಂಟ್ ಕೂಡ ಇವತ್ತು ಆಗುತ್ತಿಲ್ಲ. ಹಾಗದಾರೆ ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿ ಇಷ್ಟೊಂದು ಶೋಚನೀಯವಾಗಿರುವಾಗ ಮಾನ್ಯ ಮುಖ್ಯಮಂತ್ರಿಗಳು ಒಂದುಕಡೆ ವ್ಯಕ್ತಪಡಿಸಿದ್ದಾರೆ. ನಮ್ಮ ರಾಜ್ಯಸರ್ಕಾರದ ಆರ್ಥಿಕ ಸ್ಥಿತಿ ಸರಿಯಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದರು. ಮತ್ತು ಅಭಿವೃದ್ಧಿ ಆಯುಕ್ತರಾಗಿದ್ದಂಥ, ಶ್ರೀ ವಿಶ್ವನಾಥ್ ಅವರು ನಿವೃತ್ತರಾಗಿ ಹೋಗುವಂಥ ಸಂದರ್ಭದಲ್ಲಿ ಒಂದು ಸ್ಟೇಟ್‌ಮೆಂಟನ್ನು ಅವರು ಮಾಡಿದ್ದರು. ನಮ್ಮ ರಾಜ್ಯಸರ್ಕಾರದ ಆರ್ಥಿಕ ಸ್ಥಿತಿ ಸರಿಯಿಲ್ಲ ಎನ್ನುವಂಥ ಮಾತನ್ನು ಅವರು ಹೇಳಿದರು. ಹಾಗಾದರೆ ಈ ರೀತಿಯಾದ ಆರ್ಥಿಕ ಪರಿಸ್ಥಿತಿ ಇರುವಂಥ ಸಂದರ್ಭದಲ್ಲಿ ಇಷ್ಟೊಂದು ಜನರನ್ನು ಮಂತ್ರಿಮಂಡಲದಲ್ಲಿ ತೆಗೆದುಕೊಳ್ಳುವಂಥಾದ್ದು ಮತ್ತು ಇಷ್ಟೊಂದು ಜನರಿಗೆ ಮಂತ್ರಿಗಳ ಸ್ಥಾನಮಾನ ಕೊಡುವಂಥ ಅವಶ್ಯಕತೆ ಇದೆಯೇ ಹೇಗೆ ಎಂದು ನಾವು ವಿಚಾರ ಮಾಡಬೇಕಾಗಿದೆ. ಏಕೆಂದರೆ ಮೊನ್ನೆ ಎನ್.ಜಿ.ಇ.ಎಫ್.ನ್ನು ಮುಚ್ಚಬೇಕೆಂದು ಏಕೆಂದರೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡರು. ಕಳೆದ ಒಂದೆರಡು ವರ್ಷದಿಂದ ಅದು ನಷ್ಟದಲ್ಲಿದೆ ಎನ್ನುವಂಥ ಮಾತನ್ನು ಹೇಳಿದ್ದೀರಿ. ಹಾಗಿದ್ದರೆ ಇಂಥ ನಷ್ಟದಲ್ಲಿದ್ದಂಥ ಎನ್.ಜಿ.ಇ.ಎಫ್.ಗೆ ನೀವು ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಅವರಿಗೆ ಕಾಂಟೆಸ್ಸಾ ಕಾರನ್ನು ಕೊಡುವಂಥ ಅವಶ್ಯಕತೆ ಇತ್ತೇ ಹೇಗೆ? ಇದನ್ನೆಲ್ಲಾ ಇವತ್ತು ನಾವು ವಿಚಾರ ಮಾಡಬೇಕಾಗಿದೆ. ಏಕೆಂದರೆ ಇಲ್ಲಿ ಇರುವ ಒತ್ತಡ ಯಾವುದು? ಇವತ್ತು ಕಾವೇರಿ ನದಿನೀರು ಇಶ್ಯು ಹೊರಬರುತ್ತಿದೆ. ಕಾವೇರಿ ನದಿ ನೀರನ್ನು ಬಿಡಬೇಕೆಂದು ಕೇಳಿ ತಮಿಳುನಾಡಿನವರು ಕೇಳುತ್ತಿದ್ದಾರೆ. ಮಾನ್ಯ ಪ್ರಧಾನಮಂತ್ರಿಯವರು ಮೂರು ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಹೇಳಿದಾಗ ನೀವು ಇದರ ಬಗ್ಗೆ ಎಕ್ಸ್‌ಪ್ಲೇನ್ ಮಾಡಿ ಹೇಳಿದ್ದೀರಿ. ಆದರೆ ಇದಕ್ಕೆ ತೆಗೆದುಕೊಂಡ ವೇಳೆ ಎಷ್ಟು? ಇವತ್ತು ನಮ್ಮ ಭಾರಿ ನೀರಾವರಿ ಸಚಿವರಾದಂಥ ಮಾನ್ಯ ಹೆಚ್.ಕೆ. ಪಾಟೀಲರು ಮೊನ್ನೆ ದೆಲ್ಲಿಗೆ ಹೋಗಿದ್ದರು. ಕಾವೇರಿ ನದಿನೀರಿನ ಸಲುವಾಗಿ ಏನಾದರೂ ಪ್ರಧಾನಮಂತ್ರಿಗಳಿಗೆ ಅಥವಾ ಸಂಬಂಧಪಟ್ಟ ಸಚಿವರಿಗೆ ಸ್ಪಷ್ಟೀಕರಣ ಮಾಡುವುದಕ್ಕೆ ಹೋಗಿದ್ದಾರೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರು ಹೋಗಿದ್ದು ಬೇರೆ ಕೆಲಸಕ್ಕೆ. ಹಾಗಾದರೆ ಯಾವ ರೀತಿ? ಸಂಪುಟ ಪುನರ್‌ರಚನೆ ಬಗ್ಗೆ ಒಬ್ಬ ಮಂತ್ರಿಗಳೇ ತಮ್ಮ ಒಂದು ಭಿನ್ನಮತವನ್ನು ವ್ಯಕ್ತಪಡಿಸಿದಂತಹ ಸಂದರ್ಭದಲ್ಲಿ ಅವರು ವಿಧಾನ ಪರಿಷತ್ತಿನಲ್ಲಿ ಸಭಾನಾಯಕರಾಗಿ ಕೆಲಸ ಮಾಡುವುದಕ್ಕೆ ಎಷ್ಟು ನೈತಿಕ ಹಕ್ಕು ಇದೆ ಎನ್ನುವಂಥಾದ್ದನ್ನು ಸಹ ನಾವು ಇವತ್ತು ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ನಾವು ಅಕ್ಯಾಡೆಮಿಕ್ ಆಗಿ ವಿಚಾರ ಮಾಡಬೇಕಾಗುತ್ತದೆ. ಸಂಪುಟ ಪುನರ್ ರಚನೆ ಬಗ್ಗೆಯೇ ಪ್ರಶ್ನೆ ಮಾಡುಂವಂತಹ ಒಬ್ಬ ಮಂತ್ರಿಗಳೇ ಆ ಸಂಪುಟದಲ್ಲಿದ್ದರೆ ಅವರು ಆ ಸಂಪುಟದಲ್ಲಿ ಮಂತ್ರಿಗಳಾಗಿ ಮುಂದುವರಿಯುವುದಕ್ಕೆ ಹಕ್ಕು ಇದೆಯೇ ಹೇಗೆ ಅಥವಾ ವಿಧಾನ ಪರಿಷತ್ತಿನ ಸಭಾನಾಯಕರಾಗಿ ಕೆಲಸ ಮಾಡುವುದಕ್ಕೆ ಅವರಿಗೆ ಹಕ್ಕು ಇದೆಯೇ ಎನ್ನುವಂತಹ ಸೂಕ್ಷ್ಮವಾದ ಪ್ರಶ್ನೆಯನ್ನು ನಾವು ಎತ್ತಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಹೀಗಾಗಿ ಈ ಒಂದು

ಚಟುವಟಿಕೆ ಬರಗಾಲದ ಪರಿಸ್ಥಿತಿ ಒಂದು ಕಡೆ, ರಾಜ್ಯದಲ್ಲಿ ಆರ್ಥಿಕ ಸಂಕಷ್ಟ ಇವುಗಳೆಲ್ಲವನ್ನು ನೋಡಿದಾಗ ರಾಜ್ಯ ಸರ್ಕಾರ ಈ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಂಡು ನಮ್ಮ ರೈತರ ಸಂಕಷ್ಟಗಳ ಪರಿಹಾರದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರಗಳನ್ನು ವಿಚಾರ ಮಾಡುವಂತಾದ್ದು ಇದೆ. ಮತ್ತು ನಾನು ಈಗಾಗಲೇ ಹಲವಾರು ಬೇಡಿಕೆಗಳನ್ನು ಇಟ್ಟಿದ್ದೇನೆ ಆ ಬೇಡಿಕೆಗಳ ಬಗ್ಗೆ ಸರ್ಕಾರ ತಕ್ಷಣವೇ ಸ್ಪಂದನ ಕೊಡುವಂತಹ ಕೆಲಸ ಆಗಬೇಕು. ಈ ಬಗ್ಗೆ ನಾವು ತೀವ್ರವಾದ ಗಮನವನ್ನು ಹರಿಸದಿದ್ದರೆ, ಈ ಒಂದು ಬೆಳೆ ವಿಮೆಯ ಹಣವನ್ನು ತಕ್ಷಣವೇ ಬಿಡುಗಡೆ ಮಾಡದಿದ್ದರೆ ರೈತ ತುಂಬಾ ಸಂಕಷ್ಟದಲ್ಲಿ ಬೀಳುತ್ತಾನೆ. ಮತ್ತು ಅದರಿಂದ ನಮ್ಮ ರಾಜ್ಯದಲ್ಲಿ ಬಹಳಷ್ಟು ಅರಾಜಕತೆ ಮೂಡುವುದಕ್ಕೆ ಸಾಧ್ಯತೆ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕಂದಾಯ ಸಚಿವರು, ನಮ್ಮ ಕೃಷಿ ಸಚಿವರು, ಇಡೀ ರಾಜ್ಯದ ಎಲ್ಲಾ ಅಧಿಕಾರಿಗಳು ಇದರ ಬಗ್ಗೆ ತೀವ್ರವಾದ ಗಮನವನ್ನು ಹರಿಸಬೇಕೆನ್ನುವ ಮಾತನ್ನು ಹೇಳಿ ಅನೇಕ ವಿಷಯಗಳನ್ನು ನಾನು ರಾಜ್ಯ ಸರ್ಕಾರದ ಗಮನಕ್ಕೆ ತಂದಿದ್ದೇನೆ, ಈ ಬಗ್ಗೆ ಅವರು ಏನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವ ಸ್ಪಷ್ಟೀಕರಣ ಮಾಡಬೇಕೆನ್ನುವ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಭೈರೇಗೌಡರೇ ತಾವು ಮಾತನಾಡಿ.

ಶ್ರೀ ಕೆ.ಎಚ್.ಹನುಮೇಗೌಡ: ಮಾನ್ಯ ಉಪಾಧ್ಯಕ್ಷರೆ ಊಟಕ್ಕೆ ಬಿಡುವುದಿಲ್ಲವೇ?

ಉಪಾಧ್ಯಕ್ಷರು: ಎರಡು ಗಂಟೆಗೆ........

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಅವಸರ ಏನು ಇದೆ? ನಾವು ಇನ್ನೂ ಒಂದು ತಿಂಗಳು ಕೂರುತ್ತೇವೆ. ಮಧ್ಯಾಹ್ನ ಊಟ ಬಿಟ್ಟು ಚರ್ಚೆ ಮಾಡುವಂತಹ ಅವಸರ ಏನು ಇದೆ? ನಿಧಾನದಲ್ಲಿ ಕುಳಿತು ಚರ್ಚೆ ಮಾಡೋಣ. ಈಗ ಊಟಕ್ಕೆ ಒಂದು ಗಂಟೆ ಮುಂದೂಡಿ. ಆಮೇಲೆ ಸೇರೋಣ.

ಉಪಾಧ್ಯಕ್ಷರು: ಈಗ ಸದನವನ್ನು 3-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು 1-42 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತು 3-00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3--10 ಗಂಟೆಗೆ ಪುನಃ ಸಮಾವೇಶಗೊಂಡಿತು)

(ಸನ್ಮಾನ್ಯ ಉಪಾಧ್ಯಕ್ಷರಾದ (ಶ್ರೀ ಮನೋಹರ್ ಹೆಚ್. ತಹಶೀಲ್ದಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ವಿಷಯ: ಮುಂಗಾರು ಮಳೆ ವಿಫಲದಿಂದಾಗಿ ರಾಜ್ಯದಲ್ಲಿ ಬರ ಪರಿಸ್ಥಿತಿ ಉಂಟಾಗಿರುವ ಬಗ್ಗೆ ಹಾಗೂ ಬೆಳೆ ವಿಮೆ ಕುರಿತು (ಮುಂದು)

ಶ್ರೀ ಸಿ. ಭೈರೇಗೌಡ (ವೇಮಗಲ್): ಸನ್ಮಾನ್ಯ ಉಪಾಧ್ಯಕ್ಷರೇ, ಈ ದಿವಸ ನಾವು ನಮ್ಮ ಪಕ್ಷದ ವತಿಯಿಂದ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಆ ನಿಲುವಳಿ ಸೂಚನೆಯಲ್ಲಿ

ರಾಜ್ಯದಲ್ಲಿನ ಮಳೆಯ ಅಭಾವದಿಂದ ಉಂಟಾದ ಪರಿಸ್ಥಿತಿಯನ್ನು ಉಲ್ಲೇಖಿಸಿದ್ದೇವೆ. ರಾಜ್ಯದಲ್ಲಿ ಮುಂಗಾರು ಮಳೆಯ ಪ್ರಾರಂಭದಲ್ಲಿ ಆಶಾದಾಯಕವಾಗಿದ್ದರೂ ಕೂಡ ಕಳೆದ ಹತ್ತು ಹದಿನೈದು ದಿನಗಳಿಂದ ಮಳೆಯು ಬಾರದೆ ಮಳೆಯ ಅಭಾವದ ಪರಿಸ್ಥಿತಿಯುಂಟಾಗಿರುವುದು ರೈತಾಪಿವರ್ಗದಲ್ಲಿ, ರಾಜ್ಯದ ಜನರಲ್ಲಿ ಭೀತಿಯನ್ನುಂಟು ಮಾಡಿದೆ. ಇಂಥ ಪರಿಸ್ಥಿತಿಯು ಉದ್ಭವವಾದಾಗ ರಾಜ್ಯ ಸರ್ಕಾರದವರು ಯಾವ ಯಾವ ಸಿದ್ಧತೆಗಳನ್ನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ಅದರ ಜೊತೆಗೆ ಮಳೆಯು ಕೆಲವು ಕಡೆ ಹಿಂದೇಟು ಹಾಕುತ್ತಿರತಕ್ಕಂಥ ಪರಿಸ್ಥಿತಿಯಲ್ಲಿ ಸಹಜವಾದ ಭೀತಿಯು ಜನರನ್ನು ಆವರಿಸಿದೆ. ಕಳೆದ ವರ್ಷ ಕೂಡ ಇದೇ ಪರಿಸ್ಥಿತಿಯು ಉಂಟಾಗಿತ್ತು; ಆಗ ರಾಜ್ಯದ ರೈತರು ಇಟ್ಟಂಥ ಬೆಳೆಗಳು ಅನೇಕ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ನಷ್ಟವಾಗಿದೆ. ಆದರೆ ಅದೃಷ್ಟವಶಾತ್ ವಿಮಾ ಯೋಜನೆಯು ಜಾರಿಯಲ್ಲಿದ್ದು ಅದನ್ನು ನಂಬಿ ಆಗಿರತಕ್ಕಂಥ ನಷ್ಟದಲ್ಲಿ ಸ್ವಲ್ಪವನ್ನಾದರೂ ಸರಿದೂಗಿಸಬಹುದು ಎಂದು ರೈತರುಗಳು ನಂಬಿದ್ದರು. ಅಂಥ ವಿಮಾ ಹಣವನ್ನು ಸಂಬಂಧಪಟ್ಟ ರೈತರಿಗೆ ಸಕಾಲದಲ್ಲಿ ನೀಡತಕ್ಕಂಥಾದ್ದರಲ್ಲಿಯೂ ಕೂಡ ಸಂಪೂರ್ಣವಾಗಿ ವಿಫಲತೆಯು ಉಂಟಾಗಿದೆ. ನಾವು ಕೊಟ್ಟಂಥ ಸೂಚನೆಯ ಜೊತೆಗೆ ಇನ್ನೊಂದು ಪ್ರಮುಖ ಅಂಶವೇನೆಂದರೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಈ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ಕೇಳಿದ್ದೇವೆ. ನಿಮಯ - 69 ರ ಪ್ರಕಾರ ತಾವು ಚರ್ಚೆಗೆ ಅವಕಾಶವನ್ನು ಕೂಡ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅನಂತ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಇಂಥ ಒಂದು ಅಭಾವ ಪರಿಸ್ಥಿತಿಯು ನಮ್ಮ ರಾಜ್ಯಕ್ಕೆ ಈ ವರ್ಷದಲ್ಲಿ ಮಾತ್ರ ಬಂದಿದೆ. ಎಂದು ಹೇಳಲಾಗುತ್ತಿಲ್ಲ. ಸರ್ವೇ ಸಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಒಂದು ಭಾಗದಲ್ಲಿ ಮಳೆಯು ಆದರೆ ಇನ್ನೊಂದು ಭಾಗದಲ್ಲಿ ಮಳೆಯಾಗುವುದಿಲ್ಲ. ಕೆಲವೊಮ್ಮೆ ಜಿಲ್ಲೆಯ ಒಂದು ಭಾಗದಲ್ಲಿ ಮಳೆಯಾದರೆ ಮತ್ತೊಂದು ಭಾಗದಲ್ಲಿ ಮಳೆ ಆಗುವುದಿಲ್ಲ. ಹೀಗಾಗಿ ಒಂದು ಕಡೆಯ ರೈತರಲ್ಲಿ ಸಂತೃಪ್ತಿಯ ಭಾವನೆಯು ಇದ್ದರೆ ಮಳೆಯಿಲ್ಲದ ಪ್ರದೇಶದ ರೈತರುಗಳ ಮನಸ್ಸಿನಲ್ಲಿ ಭೀತಿಯು ಆವರಿಸುವಂತಾಗಿರುತ್ತದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಗಳು ಕೂಡ ಪಕ್ಕ ಪಕ್ಕದಲ್ಲೇ ಆಗುತ್ತಿರತಕ್ಕದ್ದನ್ನು ನೋಡುತ್ತೇವೆ. ಇಂಥ ಪರಿಸ್ಥಿತಿಯು ಹೊಸದಾಗಿ ಉಂಟಾಗಿರತಕ್ಕಂಥಾದ್ದಲ್ಲ. ಸ್ವಾಭಾವಿಕವಾಗಿ ಪ್ರತಿವರ್ಷ ಕೂಡ ಒಂದಲ್ಲ ಒಂದು ಕಡೆಯಲ್ಲಿ ಇಂಥ ಪರಿಸ್ಥಿತಿಯೂ ಇರುತ್ತದೆ. ಆದ್ದರಿಂದ ಸರ್ಕಾರದವರು ಸತತವಾಗಿ ಎಚ್ಚರಿಕೆಯ ಹೆಜ್ಜೆಯನ್ನು ಇಡಬೇಕಾಗುತ್ತದೆ. ದುರಾದೃಷ್ಟವಶಾತ್ ಆ ಪರಿಸ್ಥಿತಿಯನ್ನು ನಾವು ಕಾಡುತ್ತಾ ಇಲ್ಲ. ಮುಂದೆ ಬರಬಹುದಾದ ಅಭಾವವನ್ನು ಎದುರಿಸತಕ್ಕ ಸಿದ್ಧತೆ ಏನು ನಡೆಯ ಬೇಕೋ ಆ ಸಿದ್ಧತೆಗಳನ್ನು ನಾವು ಸರ್ಕಾರದ ಕಡೆಯಿಂದ ಇವತ್ತಿನ ದಿವಸ ಕಾಣುತ್ತಾ ಇಲ್ಲ ಎಂದು ಹೇಳುವುದಕ್ಕೆ ಬಯಸುತ್ತೇನೆ. ಪ್ರಮುಖವಾಗಿ ಒಂದು ಕಡೆಯಲ್ಲಿ ದನಕರುಗಳಿಗೆ ಮೇವನ್ನು ಒದಗಿಸತಕ್ಕ ಸಿದ್ಧತೆಗಳು ನಡೆಯ ಬೇಕಾಗುತ್ತದೆ. ಒಂದು ವೇಳೆ ಮಳೆಯು ಸಕಾಲದಲ್ಲಿ ಬಾರದಿದ್ದಲ್ಲಿ ದನಕರುಗಳ ಪಾಲನೆ ಪೋಷಣೆಯ ಕುರಿತು ಏನು ಮಾಡಬೇಕಂಬ ಕುರಿತು ಸರಕಾರದವರು ಆಲೋಚನೆಯನ್ನು ಮಾಡಿದ ಹಾಗೆ ಕಾಣುತ್ತಿಲ್ಲ. ಇನ್ನೊಂದು ಕಡೆಯಲ್ಲಿ ರಾಜ್ಯದ ಅನೇಕ ಕಡೆಗಳಲ್ಲಿ ಅದು ನಗರ ಪ್ರದೇಶವಾಗಿರಬಹುದು, ಗ್ರಾಮಾಂತರ ಪ್ರದೇಶವೇ ಆಗಿರಬಹುದು. ಅಲ್ಲಿ ಕುಡಿಯುವ ನೀರಿನ ಅಭಾವ ಉಂಟಾದಲ್ಲಿ ಅದಕ್ಕೆ ಯಾವ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ

ಎಂಬ ಬಗ್ಗೆಯೂ ಖಚಿತ ಮಾಹಿತಿಗಳು ಸಿಗುತ್ತಿಲ್ಲ. ಮಳೆಯ ಅಭಾವವು ಕುಡಿಯುವ ನೀರಿಗೆ ತೊಂದರೆಯನ್ನು ಉಂಟು ಮಾಡಬಹುದು. ಮೈಸೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ಆಗುತ್ತಿರುವ ಕೃಷ್ಣರಾಜ ಸಾಗರದಲ್ಲಿ ನೀರಿಲ್ಲ, ಕಾವೇರಿಯಲ್ಲಿ ನೀರು ಕಡಿಮೆಯಾದಾಗ ಬೆಂಗಳೂರು ನಗರಪ್ರದೇಶಕ್ಕೆ ಕುಡಿಯುವ ನೀರನ್ನು ಒದಗಿಸುವ ಸಮಸ್ಯೆಯುಂಟಾಗಬಹುದು. ತಿಪ್ಪಗೊಂಡನಹಳ್ಳಿ ಜಲಾಶಯಧಲ್ಲಿ ಕೂಡ ನೀರಿನ ಮಟ್ಟವು ಕಡಿಮೆಯಾಗುತ್ತಿದೆ. ಅದೇ ರೀತಿಯಲ್ಲಿ ಹುಬ್ಬಳ್ಳಿ - ಧಾರವಾಡ ನಗರಗಳಿಗೆ ನೀರು ಒದಗಿಸುವ ಮಲಪ್ರಭಾ ಜಲಾಶಯದಲ್ಲಿ ಇವತ್ತಿನ ದಿವಸ ಮಟ್ಟವು ಬಹಳ ಕಡಿಮೆಯಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಅಂತರ್ಜಲಮಟ್ಟವು 500 ರಿಂದ 1000 ಅಡಿಗಳಷ್ಟು ಆಳಕ್ಕೆ ಇಳಿದಿದೆ. ಇದು ಸರ್ವೇ ಸಾಮಾನ್ಯವಾದ ವಿಚಾರವಾಗಿದೆ. ಕೊಳವೆ ಬಾವಿಗಳನ್ನು ತೋಡುವಾಗ ಸಾವಿರ ಅಡಿಗಳ ಆಳಕ್ಕೆ ಹೋದರೂ ಕೂಡ ನೀರು ಲಭ್ಯವಾಗದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ ಜಾನುವಾರುಗಳಿಗೆ ಒಂದುಕಡೆ ತೊಂದರೆಯುಂಟಾದರೆ ಜನರಿಗೂ ಕೂಡ ಅಭಾವ ಪರಿಸ್ಥಿತಿಯ ಕರಾಳಛಾಯೆ ಕಂಡು ಬರುತ್ತಿದೆ. ಇದಕ್ಕೆಲ್ಲ ಏನು ಸಿದ್ಧತೆ ಮಾಡಿದ್ದೀರಿ? ಕನಿಷ್ಟಪಕ್ಷ ಜನರಿಗೆ ಆಹಾರಧಾನ್ಯಗಳನ್ನು ಕೊಡತಕ್ಕಂಥ ಸುಸ್ಥಿತಿಯು ನಮ್ಮಲ್ಲಿರಬಹುದು. ಇವತ್ತಿನ ದಿವಸ ನಮ್ಮ ದೇಶದಲ್ಲಿ 50 ದಶಲಕ್ಷಗಳಷ್ಟು ಆಹಾರಧಾನ್ಯಗಳ ದಾಸ್ತಾನು ಇದೆ ಎಂದು ತಿಳಿದು ಬರುತ್ತದೆ.

ನಿಮ್ಮಲ್ಲಿರದೇ ಇದ್ದರೆ ಬೇರೆ ಕಡೆಯಿಂದ ತಂದು ಜನಗಳಿಗೆ ಆಹಾರ ಕೊಡಬಹುದು. ಆದರೆ ದನಕರುಗಳಿಗೆ ಮೇವು ಮತ್ತು ನೀರು? ದನಗಳಿಗೆ ನೀರನ್ನು ಬೇರೆ ಕಡೆಯಿಂದ ತರಲು ಆಗುವುದಿಲ್ಲ. ನದಿಗಳಿಂದ ನೀರು ಬರಬೇಕು, ಇಲ್ಲ ಅಂತರ್ಜಲವನ್ನು ನಾವು ಬಳಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಇಂದು ಸಿದ್ಧತೆ ನಡೆದಿಲ್ಲವೆಂದು ಹೇಳಲು ಇಷ್ಟಪಡುತ್ತೇನೆ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಏನಾಗಿದೆ? ಬೇಡಿಕೆಗಳ ಮೇಲಿನ ಚರ್ಚೆ ಸಂದರ್ಭದಲ್ಲಿ ವಿವರವಾಗಿ ನಾವು ಹೇಳುವವರಿದ್ದೇವೆ. ಎಲ್ಲಾ ಜಿಲ್ಲೆಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆಗೆ ಕೆಲಸ ಆಗಿದೆ, ಕೆಲವು ಹಳ್ಳಿಗಳಲ್ಲಿ ಅಲ್ಪಸಲ್ಪ ನೀರೂ ದೊರೆಯುತ್ತಿದೆ. ಆದರೆ ಒಂದೂವರೆ ವರ್ಷದಿಂದ ಕೆಲಸ ಮಾಡಿದ ಕಂಟ್ರಾಕ್ಟರ್‌ಗಳಿಗೆ ಬಿಲ್ ಪಾವತಿ ಆಗಿಲ್ಲ. ಕೋಲಾರ ಜಿಲ್ಲೆಯ ಒಂದು ಉದಾಹರಣೆ ಕೊಡುವುದಾದರೆ, ಸುಮಾರು 10 ಕೋಟಿ ರೂಪಾಯಿಗಳ ಬಿಲ್ಸ್ ಪೆಂಡಿಂಗ್ ಇದೆ. ಈ ಒಂದು ಬಾಬ್ತಿನಲ್ಲಿ ಎರಡು ಮೂರು ವರ್ಷಗಳಿಂದ ಹಣ ಕೊಡದೆ ಉಳಿಸಿಕೊಂಡು ಬಂದಿರುವುದು ನಡೆದಿದೆ. ಇದರಿಂದ ಈಗೇನಾಗಿದೆ ಅಂದರೆ ಕುಡಿಯುವ ನೀರಿಗೆ ಬೋರ್‌ವೆಲ್ ತೋಡಲು ಯಾವ ಖಾಸಗಿಯವರೂ ಮುಂದೆ ಬರುತ್ತಿಲ್ಲ. ಪೈಪ್ ಲೈನ್ ಹಾಕಲು, ಪಂಪ್ ಹಾಕಲು ಯಾವ ಗುತ್ತಿಗೆದಾರನೂ ಮುಂದೆ ಬರುತ್ತಿಲ್ಲ. ಹೊಸದಾಗಿ ತಾಲ್ಲೂಕಿಗೆ ಒಂದೂ ಎರಡೋ ಯೋಜನೆಗಳು ಮಂಜೂರಾಗಿರುವುವು ಕೂಡ ಕಾರ್ಯಗತವಾಗುತ್ತಿಲ್ಲ. ಅವು ಹಾಗೇ ಕಾಗದದ ಮೇಲಿವೆ, ಯಾಕೆಂದರೆ ಅವರಿಗೆ ಬಾಕಿ ಹಣ ಬರಬೇಕು. ಇವತ್ತು ತಕ್ಷಣದಲ್ಲಿ ಭೀಕರ ಪರಿಸ್ಥಿತಿ ಎದುರಾಗುವ ಕಾರಣ, ಆ ಪರಿಸ್ಥಿತಿ ಬಾರದೆ ಇರಲಿ ಎಂಬುದು ನಮ್ಮೆಲ್ಲರ ಆಶಯ. ಇನ್ನು ಮುಂದಿನ ಭೀಕರ ಪರಿಸ್ಥಿತಿಗೆ ನಾವು ಹೋಗುವುದು ಬೇಡ. ನಮ್ಮ ರಾಜ್ಯ ಬರದ ಪರಿಸ್ಥಿತಿಗೆ ತುತ್ತಾಗತಕ್ಕದ್ದನ್ನು ಯಾರೂ ಇಚ್ಛಿಸುವುದಿಲ್ಲ. ಆದರೆ ಅದು ನಮ್ಮ ಕೈಯಲಿಲ್ಲ. ಪ್ರಕೃತಿ ತನ್ನಷ್ಟಕ್ಕೆ ತಾನು ನಡೆಯುತ್ತದೆ, ನಮ್ಮ ಮಾತನ್ನು ಕೇಳುವುದಿಲ್ಲ. ಅದರ ರೀತಿ

ನೀತಿಗಳ ಆಧಾರದ ಮೇಲೆ ತನ್ನ ಪಾಡಿಗೆ ತಾನು ನಡೆದುಕೊಂಡು ಹೋಗುತ್ತದೆ. ಅದು ನಮ್ಮ ನಿಯಂತ್ರಣದಲ್ಲಿ ಇಲ್ಲ. ಆದರೆ ಒಂದು ವೇಳೆ ನಾವು ಪ್ರಕೃತಿಯ ಅವಕೃಪೆಗೆ ಒಳಗಾದರೆ ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಬೇಕಾದದ್ದು ಅತಿ ವಶ್ಯಕವಿದೆ. ಆದರೆ ಜನಜಾನುವಾರುಗಳಿಗೆ ಕುಡಿಯುವ ನೀರು ಒದಗಿಸುವುದರಲ್ಲಿ ಇವತ್ತಿನವರೆಗೂ ಸಿದ್ಧತೆ ನಡೆದಿಲ್ಲ. ಹಿಂದೆ ನಡೆದ ಕೆಲಸ ಕಾರ್ಯಗಳಿಗೂ ಹಣ ಬಿಡುಗಡೆಯಾಗದಿರುವ ಕಾರಣದಿಂದ ಮುಂದೆ ಕೆಲಸವಾಗುತ್ತದೆ ಎಂಬ ನಂಬಿಕೆ ನಮಗಂತೂ ಇಲ್ಲ. ಇನ್ನೊಂದೇನೆಂದರೆ, ರೈತರೇನೋ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡಿರಬಹುದು. ಆದರೆ ಕೃಷಿ ಕೂಲಿಕಾರರ ಗತಿ ಏನಾಗಬೇಕು? ಅವರೆಲ್ಲಿ ಹೋಗಬೇಕು? ಯಾಕೆಂದರೆ, ಮುಂಗಾರು ಮಳೆ ಬಿದ್ದರೆ ಹೊಲಗದ್ದೆ - ತೋಟಗಳಲ್ಲಿ ಅವರಿಗೆ ಕೆಲಸ ಸಿಗುತ್ತದೆ. ಆದರೆ ಮಳೆ ವಿಫಲವಾದರೆ ಹೊಲ-ಗದ್ದೆಗಳಲ್ಲಿ ಕೆಲಸವಿಲ್ಲ; ತೋಟದಲ್ಲಿ ಮೊದಲೇ ಕೆಲಸವಿಲ್ಲ ಹಾಗಾದರೆ ವ್ಯವಸಾಯ ಕೂಲಿಗಾರರು ಎಲ್ಲಿ ಹೋಗಬೇಕು? ಅವರಿಗೆ ಕೆಲಸ ದೊರಕುವುದಕ್ಕೆ ಇಂದು ಅವಕಾಶವಿಲ್ಲ. ಸರ್ಕಾರದಲ್ಲಿ ಅನೇಕ ಇಲಾಖೆಗಳಿವೆ. ಅದರಲ್ಲಿ ನೀರಾವರಿ ಇಲಾಖೆ ಇರಬಹುದು. ಲೋಕೋಪಯೋಗಿ ಇಲಾಖೆ ಇರಬಹುದು, ಜಿಲ್ಲಾ ಪಂಚಾಯಿತಿಯ ತಾಂತ್ರಿಕ ವಿಭಾಗಗಳಿರಬಹುದು - ಇಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಯಾಕೆಂದರೆ ಇವೆಲ್ಲ ಇಲಾಖೆಗಳಲ್ಲಿನ ಬಾಕಿ ಬಿಲ್ ಸೇರಿಸಿದರೆ ಸುಮಾರು 1200 ಕೋಟಿ ರೂ. ಆಗುತ್ತದೆ. ಇಂತಹ ಪರಿಸ್ಥಿತಿ ರಾಜ್ಯದಲ್ಲಿ ಯಾವತ್ತೂ ಉಂಟಾಗಿರಲಿಲ್ಲ. ಹಿಂದೆ ಯಾವ್ಯಾವ ಸರ್ಕಾರದಲ್ಲಿ ಎಷ್ಟು ಬಿಲ್ಸ್ ಹಾಕಿ ಇತ್ತು. ಈ ಸರ್ಕಾರದಲ್ಲಿ ಎಷ್ಟಿದೆ? ಇದಕ್ಕೆಲ್ಲ ನೀವು ಲೆಕ್ಕ ಕೊಡಬೇಕಾಗುತ್ತಿದೆ. ಇದರ ದೆಸೆಯಿಂದ ಯಾವ ಗುತ್ತಿಗೆದಾರನೂ ಕೆಲಸ ಮಾಡುವುದಕ್ಕೆ ಇಂದು ಮುಂದೆ ಬರುತ್ತಿಲ್ಲ. ಕೆಲಸ ಕಾರ್ಯಗಳೆಲ್ಲಾ ಸ್ಥಗಿತಗೊಂಡಿವೆ. ಟೆಂಡರ್ ಕರೆದು ಆಗಿದೆ. ಕಂಟ್ರಾಕ್ಟರ್‌ಗೆ ವರ್ಕ್ ಆರ್ಡರ್ ಕೊಟ್ಟಿದ್ದಾರೆ. ಆದರೆ ಆತ ಕೆಲಸ ಮಾಡಲು ತಯಾರಿಲ್ಲ. ಕಾರಣ, ಬಾಕಿ ಇರುವ ಅವನ ಹಿಂದಿನ ಕೆಲಸದ ಬಿಲ್‌ಗಳು. ಕೃಷಿ ಕಾರ್ಮಿಕರಿಗೆ ಹೊಲಗದ್ದೆಗಳಲ್ಲಿ ಕೆಲಸ ಸಿಗದೇ ಇದ್ದಿದ್ದರೆ ಬೇರೆ ಕಡೆಯಾದರೂ ಕೆಲಸ ಮಾಡಿ ಅವರ ಜೀವನ ಸಾಗಿಸಬೇಕಾಗುತ್ತದೆ, ಸರಿದೂಗಿಸಬೇಕಾಗುತ್ತದೆ. ಅದಕ್ಕೂ ಅವಕಾಶವಿಲ್ಲ. ಇಂತಹ ಪರಿಸ್ಥಿತಿ ಈ ರಾಜ್ಯದಲ್ಲಿ ಯಾವತ್ತೂ ಆಗಿರಲಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಸರ್ಕಾರವೇನೋ ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ಇದಕ್ಕೆಲ್ಲ ಉತ್ತರ ಕೊಡುತ್ತೇವೆ ಎಂದು ಹೇಳಬಹುದು. ಆದರೆ ಬೇಡಿಕೆಗಳು ತಿಂಗಳ ಕೊನೆಯವರೆಗೂ ನಡೆಯುತ್ತವೆ, ಅಲ್ಲಿಯವರೆಗೂ ಮಳೆಬಾರದೆ ಇದೇ ಪರಿಸ್ಥಿತಿ ಮುಂದುವರಿದರೆ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ಆದ್ದರಿಂದ ಎಷ್ಟು ಹಣ ಬಾಕಿ ಇದೆ ಎಂದು ನೀವು ಲೆಕ್ಕ ಕೊಡಬೇಕಾಗುತ್ತದೆ. ಎಲ್ಲ ಇಲಾಖೆಗಳೂ ಸೇರಿ, ನೀರಾವರಿ ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯ್ತಿ ಅಲ್ಲದೇ ತಾಲ್ಲೂಕು ಮತ್ತು ಗ್ರಾಮಪಂಚಾಯ್ತಿಗಳಿಗೂ ಹಣ ಬಿಡುಗಡೆಯಾಗದೆ ಇರತಕ್ಕ ಪರಿಸ್ಥಿತಿ ಇದೆ. ಆದ್ದರಿಂದ ಕೃಷಿ ಕಾರ್ಮಿಕರ ಕೈಗಳಿಗೆ ಇವತ್ತು ಕೆಲಸ ಒದಗಿಸಬೇಕಾದ ಅವಶ್ಯಕತೆ ಇದೆ, ಆದರೆ ಆ ಕೆಲಸ ಇವತ್ತು ಆಗುತ್ತಿಲ್ಲ. ಅದಕ್ಕೆ ಇವತ್ತಿನಿಂದಲೇ ಸಿದ್ಧತೆ ನಡೆಸಿಕೊಳ್ಳಬೇಕಾಗಿದೆ. ಇದು ಮುಂದುವರೆಯುವುದು ಬೇಡ, ನಾವಿನ್ನೂ ಪ್ರಾರಂಭಿಕ ಹಂತದಲ್ಲಿದ್ದೇವೆ, ಈಗಾಗಲೇ ನೀವು ಕರೆಕ್ಟೀವ್ ಸ್ಟೇಪ್ಸನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಇದನ್ನು ಪ್ರಸ್ತಾವ ಮಾಡುತ್ತಿದ್ದೇನೆ.

ಅದರ ಜೊತೆಗೆ ಬೆಳೆ ವಿಮೆ. ಹಿಂದೆಯೆಲ್ಲಾ ಯಾವ ರೈತರು ಸಾಲ ಎತ್ತುವರೋ ಅವರಿಗೆ ಮಾತ್ರ ವಿಮೆ ಸೌಲಭ್ಯ ಇರುತ್ತಿತ್ತು, ತಾಲ್ಲೂಕೆಂಬ ಒಂದು ಘಟಕವಿದ್ದುದು ಮಾರ್ಪಾಟಾಗಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ 2000 ಇಸವಿಯಿಂದ ಜಾರಿಗೆ ಬಂದುದ್ದನ್ನು ನಾವು ಸ್ವಾಗತ ಮಾಡುತ್ತೇವೆ. ಇದು ಮೊದಲಿದ್ದುದಕ್ಕಿಂತ ಉತ್ತಮವಾದ ಯೋಜನೆ. ರಾಜ್ಯ ಮತ್ತು ಕೇಂದ್ರಗಳ ಜಂಟಿ ಸಹಯೋಗದಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ರಾಜ್ಯ ಸರ್ಕಾರಗಳು ಶೇಕಡ 50 ರಷ್ಟು ಭರಿಸಬೇಕಾಗುತ್ತದೆ, ಕೇಂದ್ರ ಸರ್ಕಾರ ಶೇಕಡ 50ರಷ್ಟು ಭರಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಎಷ್ಟು ವಿಮಾದಾರರು ಇದ್ದಾರೆ ಅವರಿಗೆ ಬರಬೇಕಾದ್ದು ಎಷ್ಟು ಎಂದು ತಿಳಿಸುವ ಅಂಕಿಅಂಶಗಳನ್ನು ಹೇಳಬೇಕಾದ ಅವಶ್ಯಕತೆ ಇದೆ: 16-3-02 ರಲ್ಲಿ 15.46 ಕೋಟಿ ರೂಪಾಯಿ ಬಿಡುಗಡೆಯಾಗುತ್ತದೆ, ಆಮೇಲೆ 1-7-02 ರಲ್ಲಿ ಅಂದರೆ ಮೊದಲನೆ ಸಾರಿ 9.27 ಕೋಟಿ ನಂತರ 15.46 ಕೋಟಿ ರೂ. ನಂತರ 5.5 ಸೇರಿ 30.23 ಕೋಟಿ ರೂ. ನಷ್ಟು ಹಣ ಇದುವರೆಗೂ ಬಿಡುಗಡೆಯಾಗಿರುವುದು, ಅದರ ಜೊತೆಗೆ 133 ಕೋಟಿ ರೂ. ಹಣ ರೈತರಿಗೆ ಬಿಡುಗಡೆಯಾಗಬೇಕಾಗಿರುವುದರಲ್ಲಿ, ಇಲ್ಲಿ ಇವತ್ತು ಚರ್ಚೆಗೆ ಬರುತ್ತದೆಂದು ಗಮನಿಸಿ, ನಿನ್ನೆ ದಿವಸ ಸ್ವಲ್ಪಮಟ್ಟಿಗೆ ಹಣ ಬಿಡುಗಡೆ ಮಾಡಿರುವುದನ್ನು ನೋಡುತ್ತಿದ್ದೇವೆ.

ಮುಖ್ಯಮಂತ್ರಿಗಳ ಗಮನಕ್ಕೆ ಒಂದು ಮಾತನ್ನು ತರುತ್ತೇನೆ. ತಾವು ಧಾರವಾಡದಲ್ಲಿ ಕೃಷಿ ಸಮಿತಿ ಎಂದು ಮಾಡಿದಿರಿ. ನೀವು ಮುಖ್ಯಮಂತ್ರಿಯಾದ ತಕ್ಷಣ ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಬಯೋಡಾಟ್‌ಕಾಂ ಎಕ್ಸಿಬಿಷನ್ ಆಯಿತು - ಇದೇ ಒಂದು ರೀತಿಯ ಪ್ರಚಾರ ನಡೆಯುತ್ತದೆ ಎಂದು ಹೇಳಿ ಮುಖ್ಯಮಂತ್ರಿಗಳು ಫಾರ್‌ವಿ ಚೇಂಜ್ ಎಂದು ಏನು ಮಾಡಿದರು ಅದರೆ ಧಾರವಾಡದಲ್ಲಿ ಒಂದು ಕೃಷಿ ಸಮಿಟ್‌ನ್ನು ಮಾಡಿದರು. ಅಲ್ಲಿಗೆ ಕೃಷಿತಜ್ಞರನ್ನು, ಡಾಃ ಸ್ವಾಮಿನಾಥನ್‌ರನ್ನೆಲ್ಲಾ ಕರೆದು ಅವರ ಸಲಹೆ ಪಡೆದುದನ್ನು ನಾನು ಸ್ವಾಗತ ಮಾಡುತ್ತೇನೆ. ಕೃಷಿ ಸಮಿಟ್ ಮಾಡಿದ್ದನ್ನು ನಾನು ಸ್ವಾಗತ ಮಾಡುತ್ತೇನೆ ಅದು ಉತ್ತಮವಾದ ಕೆಲಸ. ಆದರ ಫಲವೇನೆಂಬುದನ್ನು ಇವತ್ತು ಯೋಚಿಸಬೇಕಾಗಿದೆ: ತಾವು ಅದಕ್ಕೆ ಧಾರವಾಡ ಡಿಕ್ಲರೇಷನ್ ಎಂದು ಹೆಸರು ಕೊಟ್ಟು ಆ ಧಾರವಾಡ ಡಿಕ್ಲರೇಷನ್‌ನಲ್ಲಿ 100 ಕೋಟಿ ರೂ ಹಣವನ್ನು ನಾವು ರೈತರಿಗೆ ಬೆಳೆ ವಿಮೆಗಾಗಿ ಮೀಸಲಿಟ್ಟಿದ್ದೇವೆ. ಈ ರೀತಿ ಹಿಂದೆ ಯಾವ ಸರ್ಕಾರ ಮಾಡಿತ್ತು ಎಂದು ದೊಡ್ಡ ಘೋಷಣೆ ಮಾಡಿದಿರಿ. ಸ್ವಾಮಿ, ಇವತ್ತು ತಾವು ಲೆಕ್ಕ ಕೊಡಬೇಕಾಗುತ್ತದೆ. ನಿನ್ನೆಯವರೆಗೂ ಕೂಡ, ಕಳೆದ ಸಾಲಿನಲ್ಲಿ ಬೇಸಿಗೆ ಕಾಲದಲ್ಲಿ ಮತ್ತು ಮಳೆಗಾಲದಲ್ಲಿ ಮುಂಗಾರಿನಲ್ಲಿ ಕೊಡಬೇಕಾಗಿರುವ ಈ ಬೆಳೆ ವಿಮೆ ಹಣ ಇವತ್ತಿಗೂ ಕೂಡ ಬಾಕಿ ಇದೆ. ನಿಮ್ಮ ನೂರು ಕೋಟಿ ರೂಪಾಯಿಗಳು ಎಲ್ಲಿ ಹೋಯಿತು ಎನ್ನುವುದರ ಬಗ್ಗೆ ನೀವು ಲೆಕ್ಕ ಕೊಡಬೇಕಾಗುತ್ತದೆ. ನಾನು ಬೇರೆಯದನ್ನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ರೈತರ ಪರಿಸ್ಥಿತಿ ಏನಾಗಿದೆ, ಡಾ।। ವೀರೇಶ್ ವರದಿಯಲ್ಲಿ ಏನು ಹೇಳಿದ್ದಾರೆ, ಅದನ್ನು ಯಾರು ಡ್ರಾಫ್ಟ್ ಮಾಡಿದ್ದು? ಅದು ವಿಶ್ವ ಬ್ಯಾಂಕೇ ಅಥವಾ ಬೇರೆ ಬೇರೆ ಏಜೆನ್ಸಿಗಳ ಕೈಯಲ್ಲಿ ಅದನ್ನು ಡ್ರಾಫ್ಟ್ ಮಾಡಿ ನಿಮಗೆ ಕೊಟ್ಟಿದ್ದಾರೆಯೇ ಅದರ ಬಗ್ಗೆ ಎಲ್ಲಾ ಬೇರೆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಆದರೆ ಪ್ರಸ್ತುತ ಪರಿಸ್ಥಿತಿಗೆ ಹೇಳುವುದಾದರೆ, ಇವತ್ತು 3 ಕೋಟಿ ರೂಪಾಯಿಗಳ ಬಗ್ಗೆ ತಾವು ಪ್ರಸ್ತಾಪಿಸಿ ಅದನ್ನು ರೈತರಿಗೆ ಕೊಟ್ಟಿದ್ದೇವೆ ಎನ್ನುವ ಮಾತನ್ನು ಹೇಳಿದಿರಿ. ಇಲ್ಲಿಯವರೆಗೂ ಕೂಡ ರೈತರಿಗೆ

ಆ ಹಣ ಮುಟ್ಟಿಲ್ಲ. 2001- 02 ರಲ್ಲಿ 133 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿರುವುದರಲ್ಲಿ ಫರ್ಸ್ಟ್ ಇನ್‌ಸ್ಟಾಲ್‌ಮೆಂಟ್ 20 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಮತ್ತೆ ಇವತ್ತು 57 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆನ್ನುವ ಬಗ್ಗೆ ಸಿದ್ಧತೆ ನಡೆಯುತ್ತಿದೆ ಎನ್ನುವುದು ತಿಳಿದುಬಂದಿದೆ. ಮತ್ತೆ 55 ಕೋಟಿ ರೂಪಾಯಿಗಳು ಇನ್ನು ಕೂಡ ಬಿಡುಗಡೆಯಾಗಬೇಕಾಗಿರತಕ್ಕದ್ದು ಇದೆ. 133 ಕೋಟಿ ರೂಪಾಯಿಗಳಲ್ಲಿ ಪ್ರಾರಂಭದಲ್ಲಿ ಬಿಡುಗಡೆಯಾಗಿರುವುದು 20 ಕೋಟಿ ರೂಪಾಯಿ. ಇವತ್ತು ಬಿಡುಗಡೆ ಮಾಡಬೇಕೆಂದು ಹೇಳಿ ಹೊರಟಿರುವುದು 57 ಕೋಟಿ ರೂಪಾಯಿ, ಇನ್ನು 55 ಕೋಟಿ ರೂಪಾಯಿಗಳಷ್ಟು ಹಣ ರೈತರಿಗೆ ಬಿಡುಗಡೆಯಾಗಬೇಕಾಗಿರತಕ್ಕಂಥದ್ದು ಇದೆ. ಧಾರವಾಡ ಡಿಕ್ಲರೇಷನ್ ಎಷ್ಟರಮಟ್ಟಿಗೆ ಜಾರಿಯಾಗಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ನೀವುಗಳು ಪ್ರಚಾರ ಗಿಟ್ಟಿಸಿಕೊಂಡಿರಿ. ಆದರೆ ಪ್ರಚಾರ ಗಿಟ್ಟಿಸಿಕೊಳ್ಳುವುದರ ಜೊತೆಗೆ ಕಾರ್ಯಕ್ರಮ ಕಾರ್ಯಗತವಾಗಬೇಕೆಂದು ನೀವೇನು ಹೇಳಿದ್ದೀರೋ ಅದು ಕಾರ್ಯಗತವಾಗಬೇಕಾಗಿರತಕ್ಕಂಥದ್ದು ಬಹಳ ಮುಖ್ಯ. ಆದರೆ ಇವೆಲ್ಲವೂ ಸಹ ಏನಾಗುತ್ತಿದೆ ಎಂದರೆ ಜನರನ್ನು ಒಂದು ಪ್ರಚಾರದ ಗುಂಗಿನಲ್ಲಿ ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯುತ್ತಿದೆಯೇ ವಿನಹಾ ವಾಸ್ತವವಾಗಿ ಹೇಳಿದ್ದನ್ನು ಕಾರ್ಯಗತ ಮಾಡತಕ್ಕಂಥದ್ದು ಇವತ್ತು ಆಗುತ್ತಿಲ್ಲ. ಇವತ್ತು ಬಿಡುಗಡೆಯಾಗಿರತಕ್ಕ ಹಣ ಹೋದಮೇಲೂ ಸಹ 55 ಕೋಟಿ ರೂಪಾಯಿಗಳು ಇನ್ನೂ ಕೂಡ ಇವತ್ತು ಬಾಕಿ ಉಳಿಸಿರತಕ್ಕಂಥದ್ದು ರಾಜ್ಯದ ರೈತರಲ್ಲಿ ಇವತ್ತು ಕಳವಳವನ್ನುಂಟು ಮಾಡಿದೆ. ಇದು ರೈತರಿಗೆ ಯಾವತ್ತೋ ಬರಬೇಕಾಗಿರತಕ್ಕಂಥದ್ದು. ಕಳೆದ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಮೂರು ಅವಧಿಯಲ್ಲೂ ಕೂಡ ಬೆಳೆ ಮಾಡಿ ನಷ್ಟವನ್ನು ಅನುಭವಿಸಿದ್ದಾರೆ. ನಷ್ಟವನ್ನು ಅನುಭವಿಸಿರುವ ರೈತರಿಗೆ 55 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕಾಗಿರತಕ್ಕಂಥದ್ದು ಇದೆ. ಇದಕ್ಕೆ ಒಟ್ಟಾರೆ ಇದರ ಛಾಯೆ ಅಥವಾ ಪ್ರತಿಫಲ ಎಂದರೆ ಇವತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿ ಶೋಚನೀಯವಾಗಿದೆ. ಅದರ ಬಗ್ಗೆಯೂ ಸಹ ತಾವು ಹೇಳಬೇಕಾಗುತ್ತದೆ. ತಾವು ಉತ್ತರ ಕೊಡುವಾಗ ಹೇಳುತ್ತೇನೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಆದರೆ ಇದು ಪರಿಸ್ಥಿತಿ ಭೀಕರವಾಗಿರುವ ಕಾರಣದಿಂದ, ನಿಮ್ಮ ಹಣಕಾಸಿನ ಪರಿಸ್ಥಿತಿ ಏನಾಗಿದೆ ಎನ್ನತಕ್ಕಂಥದ್ದನ್ನು ಸಹ ಇವತ್ತು ಹೇಳಬೇಕಾಗುತ್ತದೆ. 1500 ಕೋಟಿ ರೂಪಾಯಿಯಷ್ಟು ಹಣ ಕೇವಲ ಲೋಕೋಪಯೋಗಿ, ನೀರಾವರಿ, ಸಣ್ಣನೀರಾವರಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಕೊಡಬೇಕಾಗಿರತಕ್ಕಂಥದ್ದು. ಅದರ ಜೊತೆಗೆ ರೈತರಿಗೆ ಕೊಡಬೇಕಾಗಿರುವುದು 55 ಕೋಟಿ ರೂಪಾಯಿಗಳು ಹೀಗೆ. ಪ್ರತಿಯೊಂದನ್ನೂ ಕೂಡ ಲೆಕ್ಕ ಹಾಕುತ್ತಾ ಹೋದರೆ ಸುಮಾರು ಐದರಿಂದ ಆರು ಸಾವಿರ ಕೋಟಿ ರೂಪಾಯಿಗಳಾದರೂ ಇವತ್ತು ಮೈನಸ್ ಸೈಡ್‌ನಲ್ಲಿ ಇದೆಯೆಂದು ನನ್ನ ಒಂದು ಅಂದಾಜು. ಅದು ಸರಿ ಇಲ್ಲದೆಯೂ ಇರಬಹುದು. ನಿಮ್ಮ ಹಣಕಾಸಿನ ಪರಿಸ್ಥಿತಿ 5 ಸಾವಿರ ದಿಂದ 6 ಸಾವಿರ ಕೋಟಿ ರೂಪಾಯಿಗಳಷ್ಟು ಮೈನಸ್‌ನಲ್ಲಿ ಇದೆ. ಈ ರೀತಿ ಮೈನಸ್ ಇರುವ ಪರಿಸ್ಥಿತಿಯಲ್ಲಿ ನೀವು ಒಂದು ಕಡೆ ಬರವನ್ನು ಎದುರಿಸುವ ಪರಿಸ್ಥಿತಿ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇಷ್ಟೊಂದು ಪರಿಸ್ಥಿತಿ ಭೀಕರವಾದರೂ ಸಹ ಇವತ್ತು ಏನೂ ನಡೆಯಲಿಲ್ಲ ಎನ್ನುವ ರೀತಿಯಲ್ಲಿ ತಮ್ಮ ಒಂದು ನಿರ್ಲಿಪ್ತತೆಯನ್ನು ತೋರಿಸತಕ್ಕ ಒಂದು ಪರಿಸ್ಥಿತಿ ಏನು ಉಂಟಾಗಿದೆ, ಇದು ಸರ್ವಥಾ ಸರಿಯಲ್ಲ. ಇದನ್ನು ನೀವು ಉತ್ತರ ಕೊಡತಕ್ಕ ಸಂದರ್ಭದಲ್ಲಿ ನಿಜವಾದ ಪರಿಸ್ಥಿತಿ ಏನು ಎಂದು ಹೇಳಬೇಕಾಗುತ್ತದೆ. ಎಷ್ಟು ಜನರಿಗೆ, ಜನಜಾನುವಾರುಗಳಿಗೆ

ಕುಡಿಯುವ ನೀರಿನ ಬಗ್ಗೆ ಮತ್ತು ಮೇವಿನ ಬಗ್ಗೆ ಏನು ಮಾಡುತ್ತೀರಿ. ಎಷ್ಟು ಜನ ವ್ಯವಸಾಯ ಕೂಲಿಗಾರರಿಗೆ ಕೆಲಸ ಕೊಡುವ ಬಗ್ಗೆ ಏನು ಮಾಡಿದ್ದೀರಿ ಎನ್ನುವ ವಿವರಗಳನ್ನೂ ಸಹ ಕೊಡಬೇಕಾಗುತ್ತದೆ. ಆದ್ದರಿಂದ ಇವತ್ತು ಇದರ ಬಗ್ಗೆ ಚರ್ಚೆ ಆವಶ್ಯಕತೆ ಇದೆ ಎನ್ನುವುದನ್ನು ಗಮನಿಸಿ ನಾನು ಈ ಚರ್ಚೆಗೆ ಸೀಮಿತವಾದಂಥ ಪ್ರಶ್ನೆಗಳನ್ನು ನಾವೇನು ಎತ್ತಿದ್ದೇವೆ, ಆ ಪ್ರಶ್ನೆಗಳಿಗೆ ಮಾತ್ರ ಇವತ್ತಿನ ದಿವಸ ಸೀಮಿತವಾಗಿ ನನ್ನ ವಿಚಾರಗಳನ್ನು ಈ ಸದನದ ಮುಂದೆ ಇಟ್ಟಿದ್ದೇನೆ. ಮತ್ತು ಇದನ್ನು ಸರ್ಕಾರ ತೀವ್ರವಾಗಿ ಗಮನಿಸಬೇಕು. ಮತ್ತು ಈ ರೈತರಿಗೆ ಬಿಡುಗಡೆಯಾಗಬೇಕಾಗಿರುವ ಹಣ, ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿರತಕ್ಕಂಥದ್ದನ್ನು ತತ್‌ಕ್ಷಣ ಜಾರಿಗೊಳಿಸುವುದಕ್ಕೆ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅಭಿವೃದ್ಧಿ ಕಾರ್ಯಗಳು ನಿಲ್ಲುವುದರ ಜೊತೆಗೆ ಹಾಹಾಕಾರವೂ ಕೂಡ ರಾಜ್ಯದಲ್ಲಿ ಪ್ರಾರಂಭವಾಗುತ್ತದೆ ಎನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳಿ ಇವತ್ತು ತಾವು ಇಷ್ಟೊಂದು ಅವಕಾಶವನ್ನು ನನಗೆ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ): ಮಾನ್ಯ ಉಪಾಧ್ಯಕ್ಷರೆ, ರಾಜ್ಯಕ್ಕೆ ಬಂದಿರುವ ಭೀಕರ ಕ್ಷಾಮದ ಬಗ್ಗೆ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ನಾನು ಇಚ್ಛೆಪಡುತ್ತೇನೆ. ಹಿಂದೆಯೂ ಕೂಡ ರಾಜ್ಯದಲ್ಲಿ ಅನೇಕ ಸಾರಿ ಬರಗಾಲ ಬಂದಿತ್ತು. ಮೂರನೇ ಒಂದು ಭಾಗ, ನಾಲ್ಕನೇ ಒಂದು ಭಾಗ ಕ್ಷಾಮ ಬರುವುದು, ಉಳಿದ ಭಾಗದಲ್ಲಿ ಬೆಳೆ ಆಗುವುದು. ಹೇಗೋ ಅನುಸರಿಸಿಕೊಂಡು ಹೋಗುತ್ತಿದ್ದರು. ಆದರೆ ಈ ಸಾರಿ ಬಂದಿರತಕ್ಕ ಬರ ಇಡೀ ರಾಜ್ಯಕ್ಕೆ ವ್ಯಾಪಿಸಿದೆ. ಸುಮಾರು 15-20 ತಾಲ್ಲೂಕುಗಳಲ್ಲಿ ಸಾಧಾರಣ ಮಳೆಯಾಗಿದೆ ಎಂದು ಕೇಳಿದ್ದೇನೆ. ಅಲ್ಲಿ ಬಿಟ್ಟರೆ ಇನ್ನು ಬಹುಭಾಗ 100ಕ್ಕೆ 85-90 ಭಾಗ ಪ್ರದೇಶದಲ್ಲಿ ಈ ಬರಗಾಲ ಬಂದಿದೆ. ಕೆಲವು ಮಲೆನಾಡು ಭಾಗದ ಸೆಮಿ ಮಲೆನಾಡು ಪ್ರದೇಶಗಳಾದ ಮೈಸೂರು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಧಾರವಾಡ ಹೀಗೆ ಆ ಪ್ರದೇಶದಲ್ಲಿ ಮುಂಗಾರು ಎರಡು ಹದ ಮಳೆ ಬಂತು ಎನ್ನುವ ಹಾಗೆ ಕಾಣುತ್ತದೆ. ಆ ಮಳೆ ಬಂದಿದ್ದರಿಂದ ರೈತರು ಪ್ರತಿವರ್ಷದಂತೆ ಈ ವರ್ಷವೂ ಮಳೆ ಬರಬಹುದು ಎನ್ನುವ ಅಭಿಪ್ರಾಯದಲ್ಲಿ ಬ್ಯಾಂಕಿನಲ್ಲಿ ಹೆಂಗಸರು - ಮಕ್ಕಳ ಒಡವೆಗಳನ್ನು ತೆಗೆದುಕೊಂಡು ಹೋಗಿ ಅಡವು ಇಟ್ಟಿದ್ದಾರೆ. ಸಹಕಾರ ಸಂಘಗಳಿಂದ ಸಾಲವನ್ನು ಪಡೆದಿದ್ದಾರೆ. ನಾನಾ ರೀತಿ ಸಾಲವನ್ನು ಪಡೆದು ತನ್ನ ಹತ್ತಿರ ಏನೇನು ಇತ್ತೊ ಅದನ್ನೆಲ್ಲಾ ಅಡವು ಇಟ್ಟು ಸಾಲತಂದು ಗೊಬ್ಬರ - ಬೀಜ ಮತ್ತು ಉಳುಮೆಗೆ ಖರ್ಚು ಮಾಡಿ ಬೆಳೆಯನ್ನು ಹಾಕಿದ್ದಾರೆ. ಕೆಲವು ಕಡೆಗೆ ನಾನು ಹೋಗಿ ನೋಡಿದ್ದೆ ಅಲ್ಲಿ ಏನೇನೂ ಉಳಿದಿಲ್ಲ. ಭೀಕರವಾದ ಪರಿಸ್ಥಿತಿ. ಯಾವ ರೈತರ ಹೊಲಗದ್ದೆಗಳಿಗೆ ಹೋಗಿ ಕೇಳಿದರೆ, ಏನ್ರೀ ಹೀಗಾಯಿತು ಎಂದರೆ ಸ್ವಾಮಿ ದೇವರು ಇಂಥ ಶಿಕ್ಷೆ ಕೊಟ್ಟವನೆ, ನಾವು ಬದುಕುವುದು ಹೇಗೆ? ಮಕ್ಕಳಿಗೆ ಊಟಕ್ಕೇನು ಮಾಡುವುದು? ಮಕ್ಕಳನ್ನು ಶಾಲೆಗೆ ಕಳುಹಿಸುವುದು ಹೇಗೆ? ತಂದಿರುವ ಸಾಲವನ್ನು ತೀರಿಸುವುದು ಹೇಗೆ? ತಂದಿರತಕ್ಕ ಸಾಲಕ್ಕೆ ಬಡ್ಡಿಯನ್ನು ಕೊಡುವುದು ಹೇಗೆ? ಎಲ್ಲಕ್ಕಿಂತ ಹೆಚ್ಚಾಗಿ ಹೆಂಗಸರ ಒಡವೆಗಳನ್ನು ತೆಗೆದುಕೊಂಡು ಹೋಗಿ ಬ್ಯಾಂಕಿಗೆ ಇಟ್ಟು ಬಿಟ್ಟಿದ್ದೇವೆ. ಅವರು ಆರು ತಿಂಗಳು, ಒಂದು ವರ್ಷ ನೋಡಿ ಹರಾಜು ಹಾಕಿದರೆ ಎಲ್ಲಾ ಹೋಗಿ ಬಿಡುತ್ತದೆ. ಈ ಸಾರಿ ಮಳೆ ಹೋಗಿದ್ದರಿಂದ ನಾವಂತೂ ರೈತರು ಬೀದಿ ಭಿಕಾರಿಗಳಾಗುವ ಪರಿಸ್ಥಿತಿಗೆ ಬಂದಿದ್ದೇವೆ, ದೇವರು

ಯಾವ ರೀತಿ ನಮ್ಮನ್ನು ಕಾಪಾಡುತ್ತಾನೋ ಏನು ಮಾಡುತ್ತಾನೋ ಎನ್ನುವ ಒಂದು ಚಿಂತಾಜನಕ ಸ್ಥಿತಿಯಲ್ಲಿ ಇಡೀ ರೈತರ ಸಮೂಹವಿದೆ ನೂರಕ್ಕೆ 80 ಭಾಗ ಇರತಕ್ಕ ಈ ನಾಡಿನ ರೈತರು ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಅವರ ದುಃಖ ಹೇಳತೀರದು. ಬೆಳಿಗ್ಗೆ ಎದ್ದು ಹೊಲದ ಹತ್ತಿರ ಬರುತ್ತಾರೆ. ಮೋಡ ಇಲ್ಲ. ಮಳೆ ಇಲ್ಲ. ಶೀತದ ಗಾಳಿ ಬೀಸುತ್ತದೆ. ಸ್ವಲ್ಪ ಮೋಡ ಅಲ್ಲಲ್ಲೇ ಒಂದು ಚೂರು ಕಾಣುತ್ತದೆ. ಅಷ್ಟು ವಿನಹ ಇನ್ನೇನೂ ಇಲ್ಲ. ಮಾರು ಹೊತ್ತು ಆ ರೈತರು ನಿಟ್ಟುಸಿರು ಬಿಟ್ಟು ಮೋಡದ ಕಡೆ, ಆಕಾಶದ ಕಡೆಗೆ ನೋಡಿ ಅನನ್ಯ ಭಕ್ತಿಯಿಂದ ದೇವರಿಗೆ ಪ್ರಾರ್ಥನೆ ಮಾಡುತ್ತಿದ್ದಾರೆ. ದೇವರೇ, ಯಾವ ಅಪರಾಧಕ್ಕಾಗಿ ನಮಗೆ ಈ ಶಿಕ್ಷೆ ಕೊಟ್ಟೆ ಮುಂದೆ ನಮ್ಮಗತಿಯೇನು? ನಾವು ಬಾಳುವುದು ಹೇಗೆ, ಬದುಕುವುದು ಹೇಗೆ ಎಂದು ಇಂಥ ಚಿಂತಾಜನಕ ಸ್ಥಿತಿಯಲ್ಲಿ ಈ ದಿವಸ ರೈತರಿದ್ದಾರೆ. ಕೆಲವು ಭಾಗದಲ್ಲಿ ಬಿತ್ತನೆ ಮಳೆಯಾಗಿಲ್ಲ. ಬಿತ್ತನೆ ಮಾಡಿಲ್ಲ. ಕೊನೆಯ ಪಕ್ಷ ಅಂಥ ರೈತರಿಗೆ ಬ್ಯಾಂಕಿನಿಂದ ತಂದ ಸಾಲವಾದರೂ ಉಳಿಯಿತು, ಅಥವಾ ಹೆಚ್ಚು ಗೊಬ್ಬರ ಬೀಜ ಇದಕ್ಕೆಲ್ಲಾ ಹಣ ಹಾಕಿಲ್ಲ, ಅವರ ಪರಿಸ್ಥಿತಿ ಕೊಂಚ ಉತ್ತಮ. ಇನ್ನು ಕೆಲವು ಭಾಗಗಳಲ್ಲಿ ಅಂದರೆ ಸೆಮಿ ಮಲೆನಾಡು ಏರಿಯಾಗಲಲ್ಲಿ, ಉದಾಹರಣೆಗೆ ಹಾಸನ ಜಿಲ್ಲೆ ನಮ್ಮ ಜಿಲ್ಲೆಯಲ್ಲಿ ಆಲೂಗೆಡ್ಡೆ ಹೆಚ್ಚು ಹಣವನ್ನು ತರತಕ್ಕ ಮುಂಗಾರು ಬೆಳೆ. ಸುಮಾರು 50 ಸಾವಿರ ಎಕರೆ ಪ್ರದೇಶದಲ್ಲಿ ಆಲೂಗೆಡ್ಡೆಯನ್ನು ಬಿತ್ತನೆ ಮಾಡಿದ್ದಾರೆ. ಬಹುಶಃ ಹತ್ತಾರು ಕೋಟಿ ರೂಪಾಯಿಗಳನ್ನು ಆಲೂಗೆಡ್ಡೆ ಬಿತ್ತನೆ ಬೀಜಕ್ಕೋಸ್ಕರ ಕೊಟ್ಟಿದ್ದಾರೆ. ಒಂದು ಎಕರೆಯಲ್ಲಿ ಆಲೂಗೆಡ್ಡೆ ಹಾಕಬೇಕಾದರೆ ಖರ್ಚೆಲ್ಲಾ ಸೇರಿ ಸುಮಾರು 10 ಸಾವಿರ ರೂಪಾಯಿ ಹತ್ತಿರ ಹತ್ತಿರ ಆಗುತ್ತದೆ. ಒಬ್ಬೊಬ್ಬರು ಒಂದು ಎಕರೆ, ಎರಡು ಎಕರೆ ಹೀಗೆ ಪ್ರತಿ ಒಬ್ಬ ರೈತರೂ ಹಾಕಿದ್ದಾರೆ. ಆಲೂಗೆಡ್ಡೆ ಬೆಳೆಯುವಂತಹ ಪ್ರದೇಶವಾದ ಹಾಸನದ ಕೆಲವು ಭಾಗ; ಅಲ್ಲಿಂದ ಬೇಲೂರಿನ ಕೆಲವು ಭಾಗ, ಹೊಳೆನರಸೀಪುರದ ಕೆಲವು ಭಾಗ, ಆಲೂರು, ಅರಕಲಗೂಡು ಹೀಗೆ ಎಲ್ಲಾ ಭೂ ಪ್ರದೇಶಗಳಲ್ಲಿ ಆಲೂಗೆಡ್ಡೆ ಹಾಕಿದ್ದಾರೆ. ಆದರೆ ಇವತ್ತು ಅಲ್ಲಿ ಮಳೆಬಿದ್ದು ಒಂದೂವರೆ ತಿಂಗಳಾಯಿತು ಈಗ ಮೊದಲನೇ ಮಳೆಗೆ ಹಾಕಿದಂತಹ ಆಲೂಗೆಡ್ಡೆ ಪೂರ್ಣವಾಗಿ ಹಾಳಾಗಿ ಹೋಗಿದೆ. ಈಗೇನಾದರೂ ಇವತ್ತು ನಾಳೆಯೊಳಗೆ ಮಳೆ ಆದರೆ ಒಂದು ಹತ್ತು ಪೈಸೆ, ಇಪ್ಪತ್ತು ಪೈಸೆಯ ಬೆಳೆ ಬಂದರೂ ಬರಬಹುದು. ಆದರೆ ಮಳೆ ಬರತಕ್ಕಂಥದ ಸೂಚನೆ ಕಾಣುತ್ತಾ ಇಲ್ಲ. ಹೋಗಲಿ ಒಂದು ಪಕ್ಷ ಈ ಮಳೆಗಾಲದ ಸೋನೆ ಹಿಡಿಯುವ ಮಳೆ ಏನಾದರೂ ಬಂದೀತು ಅಂದರೆ ಅದೂ ಇಲ್ಲ. ತಮ್ಮ ಕಡೆ ಹೇಗೋ ಗೊತ್ತಿಲ್ಲ. ನಮ್ಮ ಪಶ್ಚಿಮ ಘಟ್ಟ ಭಾಗದಲ್ಲಿ ರೋಹಿಣಿ, ಮೃಗಶಿರ, ಆರಿದ್ರೆ ಪುನರ್ವಸು, ಪುಷ್ಯ, ಅಶ್ಲೇಷ ಇವು ಆರು ಸೋನೆ ಮಳೆಗಳು. ಈ ಮಳೆ ಹಿಡಿದಾಗ ಪಶ್ಚಿಮ ಘಟ್ಟದಲ್ಲಿ ಹೇರಳವಾಗಿ ಮಳೆ ಆಗಿ ಡ್ಯಾಂಗಳೆಲ್ಲಾ ತುಂಬುತ್ತಿತ್ತು. ಈಗ ಮೂರು ಮಳೆ ಕಳೆದು ಹೋಯಿತು.

ಉಪಾಧ್ಯಕ್ಷರು: ನಮ್ಮ ಕಡೆ ನಿಮ್ಮ ಕಡೆಗಿಂತಲೂ ಭೀಕರ.

ಶ್ರೀ ಕೆ.ಎಚ್. ಹನುಮೇಗೌಡ: ಇನ್ನೂ ಭೀಕರವೇ? ಹಾಗಾದರೆ ಸುಮ್ಮನೆ ಇದ್ದೀರಲ್ಲಾ? ನೀವು ಹಳ್ಳಿ ಕಡೆಗೆ ಹೋಗಿಲ್ಲ ಎಂದು ಕಾಣುತ್ತದೆ, ಹೋಗಿ ನೋಡಿದರೆ ಗೊತ್ತಾಗುತ್ತದೆ. ಇಂತಹ ಪರಿಸ್ಥಿತಿ ಇದೆ. ಈಗ ಮೂರು ಮಳೆ ಕಳೆದು ಹೋಗಿರುವುದರಿಂದ ನಾನು ಸರ್ಕಾರಕ್ಕೆ ಈ ಸದನದ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇನ್ನು ಡ್ಯಾಂ ತುಂಬುವ ಸಂಭವ

ಇಲ್ಲ. ಈ ಆರು ಮಳೆಗಳು ಸುಮಾರು ಮೂರು ತಿಂಗಳು ಸೋನೆ ಮಳೆ ಆಗಿದ್ದರೆ ಪಶ್ಚಿಮಘಟ್ಟದ ಎಲ್ಲಾ ಡ್ಯಾಂಗಳೂ ತುಂಬುತ್ತಿದ್ದವು. ಹಾರಂಗಿ, ಹೇಮಾವತಿ, ಕೆ.ಆರ್. ಸಾಗರ್ ಇವೆಲ್ಲಾ ತುಂಬುತ್ತಿದ್ದವು. ಈಗ ಮೂರು ಮಳೆ ಕಳೆದು ಹೋಗಿದೆ. ಮೂರು ಮಳೆ ಇನ್ನು ಮಾತ್ರ ಉಳಿದಿದೆ. ಮೂರು ಮಳೆ ಉಳಿದಿದ್ದರೂ ಕೂಡ ಮಳೆ ಬರತಕ್ಕ ಚಿಹ್ನೆ ಇಲ್ಲ. ಪರಿಸ್ಥಿತಿ ಹೀಗೆ ಇರುವುದರಿಂದ ಸರ್ಕಾರ ಈ ಜನರನ್ನು ಉಳಿಸುವುದಕ್ಕೆ, ಅವರು ಪಡೆದಿರತಕ್ಕ ಸಾಲವನ್ನು ಮನ್ನಾ ಮಾಡುವುದೋ ಅಥವಾ ಐದು ವರ್ಷ, ಹತ್ತು ಹತ್ತು ವರ್ಷ ಕಂತು ಕೊಡುವುದೋ ಅಥವಾ ಅವರು ತೆಗೆದುಕೊಂಡಿರತಕ್ಕ ಪೂರ್ತಿ ಹಣಕ್ಕೆ ಬಡ್ಡಿ ಮನ್ನಾ ಮಾಡುವುದೋ, ಇಂತಹ ಅನೇಕ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಆ ರೈತರ ಉಳಿವಿನ ದೃಷ್ಟಿಯಿಂದ ಕ್ರಮ ತೆಗೆದುಕೊಳ್ಳಬೇಕು. ಈ ದೇಶದ ರೈತರು ಯುಗ ಯುಗಗಳಿಂದ ಈ ದೇಶದ ಜನರಿಗೆ ಅನ್ನ ಕೊಟ್ಟವರು. ಯುಗ ಯುಗಗಳಿಂದ ರಾಜನಾಗಲೀ, ಪಾಳೇಗಾರನಾಗಲಿ, ಪ್ರಜಾಪ್ರಭುತ್ವ ಆಗಲೀ ಇವರೆಲ್ಲರಿಗೂ ಸಂಬಳ, ಮೇಂಟೆನೆನ್ಸ್, ಖರ್ಚು ವೆಚ್ಚಕ್ಕೆಲ್ಲಾ ಆ ಬಡಾಪಾಯಿ ರೈತ ಕೊಟ್ಟಂತಹ ದುಡ್ಡು. ಈ ದೇಶದಲ್ಲಿರತಕ್ಕ ಮನುಷ್ಯರು, ಪ್ರಾಣಿ, ಪಕ್ಷಿ, ಹುಳ, ಕೀಟ, ದನಕರು ಎಲ್ಲಕ್ಕೂ ಆಹಾರವನ್ನು ಕೊಡತಕ್ಕ ಈ ಮುಗ್ಧ ಜನ ಆ ರೈತರು ಇವತ್ತು ಆ ರೈತ ಸಮೂಹ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ ಸರ್ವ ನಾಶದ ಅಂಚಿಗೆ ಬಂದಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರನ್ನು ಕಡೆಗಣಿಸಿದರೆ ಬಹುಶಃ ಅವರ ಶಾಪಕ್ಕೆ ಎಲ್ಲರೂ ತುತ್ತಾಗಬೇಕಾಗುತ್ತದೆ ಎಂದು ನಾನು ಸಂದರ್ಭದಲ್ಲಿ ತಿಳಿಸಲು ಇಚ್ಛೆ ಪಡುತ್ತೇನೆ. ಹಿಂದೆ ಅನೇಕ ಸಾರಿ ಅವರು ಕಷ್ಟಕ್ಕೆ ಒಳಗಾದಾಗ ಊಟ ಇದ್ದರೆ ಊಟ ಮಾಡುವುದು, ಇಲ್ಲದಿದ್ದರೆ ಗಂಜಿ ಕುಡಿಯುವುದು, ಮಲಗುವುದು ಮಾಡುತ್ತಿದ್ದರು. ಜನರು ಒಳ್ಳೆಯ ಬಟ್ಟೆ ಇದ್ದರೆ ಬಟ್ಟೆ ಹಾಕಿ ಕೊಳ್ಳುತ್ತಾರೆ, ಇಲ್ಲದಿದ್ದರೆ ಆ ಹಳೆಯ ಬಟ್ಟೆಯನ್ನೇ ಪುನಃ ಪುನಃ ಹೊಲಿದು ತೇಪೆ ಬಟ್ಟೆ ಹಾಕಿಕೊಂಡು ಜೀವನ ಮಾಡಿದ್ದಾರೆಯೇ ವಿನಹಃ ಈ ಸುಸಂಸ್ಕೃತ ಸರ್ಕಾರದ ಮೇಲೆಯೇ ಆಗಲೀ ಅಥವಾ ಬೇರೆ ಸಂಸ್ಥೆ ಮೇಲೆ ದಂಗೆ ಎದ್ದು ಜನ ಅಲ್ಲ ಅವರು. ಕಾರ್ಮಿಕರು ಏನಾದರೂ ಒಂದು ಫ್ಯಾಕ್ಟರಿ ಮುಚ್ಚಿದರೆ ಸಂಬಳಗಳನ್ನೂ ತೆಗೆದುಕೊಂಡು, ಇನ್ನೊಂದು ಬೆನಿಫಿಟ್ ಹಾಗೂ ಮತ್ತಿತರ ಸವಲತ್ತು ತೆಗೆದುಕೊಂಡು ಬೀದಿಯೊಳಗೆಲ್ಲಾ ಮೆರವಣಿಗೆ ಮಾಡುತ್ತಾರೆ. ಈ ಶಾಸನ ಸಭೆಯಲ್ಲಿರತಕ್ಕಂಥ ನಾಲ್ಕೈದು ಕಾರ್ಮಿಕ ಮುಖಂಡರು ಎದ್ದು ಎದ್ದು ಹಾರಾಡುತ್ತಾರೆ. ಕಾರ್ಮಿಕರು, ಕಾರ್ಮಿಕರು ಹೋದರು ಎಂದು ಹೇಳುತ್ತಾರೆ. ಆದರೆ 100ಕ್ಕೆ 80 ಭಾಗ ಇರತಕ್ಕ ಈ ಮುಗ್ಧ, ರೈತರು, ದೇಶಕ್ಕೆ ಅನ್ನ ಕೊಡುವ ಜನ, ದೇಶದ ಜನಗಳಿಗೆ, ಸರ್ಕಾರಿ ನೌಕರರಿಗೆಲ್ಲಾ ಸಂಬಳ ಕೊಡತಕ್ಕ ಜನ ಕಷ್ಟದಲ್ಲಿದ್ದಾಗ, ತೊಂದರೆಯಲ್ಲಿದ್ದಾಗ ಅವರ ಬಗ್ಗೆ ಹೆಚ್ಚಿನ ಸಹಾನುಭೂತಿಯಿಂದ ವಿಷಯ ಪರಿಗಣನೆಗೆ ತೆಗೆದುಕೊಂಡು ಅವರಿಗೆ ಏನೇನು ಪರಿಹಾರ ಒದಗಿಸಬೇಕಾಗುತ್ತದೋ ಅವೆಲ್ಲವನ್ನೂ ಒದಗಿಸಿ ಅವರ ಕಷ್ಟವನ್ನು ಪರಿಹಾರ ಮಾಡಿ ಅವರ ಒಂದು ಆಶೀರ್ವಾದಕ್ಕೆ ಸರ್ಕಾರ ಮತ್ತು ಎಲ್ಲರೂ ಒಳಗಾಗಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. 30-40 ವರ್ಷದಲ್ಲಿ ಯಾರೋ ಒಬ್ಬ ಚೀಫ್ ಇಂಜಿನಿಯರ್‌ಗೆ ಹೊಟ್ಟೆ ಉರಿ ಬಂತು. ಇಲ್ಲೆಲ್ಲಾ ಇಷ್ಟು ಕರೆಗಳು ಇವೆ. ಈ ಕರೆಗಳಿಗೆಲ್ಲಾ ಇಷ್ಟು ಖರ್ಚು ಮಾಡುತ್ತಾರೆ. ನೀರು ಭತ್ತ, ಗದ್ದೆ ಇವೆಲ್ಲಾ ಏಕೆ ಅನ್ ಎಕನಾಮಿಕಲ್ ರೆಸ್ಟೋರ್ ಮಾಡಲೇ ಬೇಡಿ, ಇಂಥವನ್ನು ಕೈಬಿಟ್ಟು ಬಿಡಿ

ಎಂದು ಹುಕುಂ ದಯಪಾಲಿಸಿದರು. ಕಣ್ಣುಮುಚ್ಚಿಕೊಂಡು ಈ ಶಾಸನಸಭೆಯಲ್ಲಿ ರಾಜಕೀಯ ಮುಖಂಡರುಗಳೆಲ್ಲಾ ಒಪ್ಪಿಕೊಂಡರು. ಅಲ್ಲಿಂದ ಇಲ್ಲಿಯವರೆಗೂ ಕೂಡ ಒಂದು ಹಿಡಿ ಮಣ್ಣು ತೆಗೆದು ಆ ಏರಿ ಮೇಲೆ ಹಾಕಲಿಲ್ಲ, ಕರೆ ರಿಪೇರಿ ಮಾಡಲಿಲ್ಲ. ಯಾವುದೋ ಕಾಲದಲ್ಲಿ ಪುಣ್ಯಾತ್ಮರು ರಾಜರುಗಳು, ಮಹಾರಾಜರುಗಳು, ಪಾಳೇಗಾರರು ಬರಗಾಲ ಬಂದಾಗ ಆ ಜನಗಳಿಗೆ ಅನ್ನ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ಕರೆಕಟ್ಟೆಗಳನ್ನು ಆ ಕಾಲದಲ್ಲಿ ಕಟ್ಟಿಸಿದ್ದರು. ಆ ಕೆರೆಗಳೆಲ್ಲಾ ಸ್ವಾತಂತ್ರ್ಯ ಬಂದ ನಂತರ ಅವೆಲ್ಲ ಮುಚ್ಚಿ ಹೋದವು. ಒಬ್ಬರ ಅವಿವೇಕದ ತೀರ್ಮಾನದಿಂದ ಮುಚ್ಚಿ ಹೋದವು. ಇವತ್ತು ಪರಿಸ್ಥಿತಿ ಏನಾಗಿದೆ? ಕರೆಯಲ್ಲಿ ಹೂಳು ತುಂಬಿದೆ, ಜಲ ಪಾತಾಳಕ್ಕೆ ಹೋಯಿತು. ಇಷ್ಟೆಲ್ಲಾ ಅನಾಹುತ ಆಗಿದೆ. ಈಗ ಪುನಃ ಸರ್ಕಾರ ರೀಕನ್ಸಿಡರ್ ಮಾಡಬೇಕು. ಏನು ಆ ಕಾಲದಿಂದ ಧರ್ಮದ ಯುಗದಿಂದ, ಧರ್ಮದ ಕಾಲದಿಂದ ಯಾವ ರೀತಿ ಈ ದೇಶ, ರಾಜ್ಯ ನಡೆದುಕೊಂಡು ಬಂದಿತ್ತು ಆ ರೀತಿ ಮತ್ತೆ ಹಿಂದಕ್ಕೆ ಹೋಗಿ ಆ ಕೆರೆಗಳ ರಿಪೇರಿ ಮಾಡುವುದು, ಕಟ್ಟೆ ಕಟ್ಟುವ ಕೆಲಸವನ್ನೆಲ್ಲಾ ಮಾಡಬೇಕಾಗಿ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸಲು ಇಚ್ಛಪಡುತ್ತೇನೆ. ಇದುವರೆಗೂ ಮಾತನಾಡಿದ ವಿರೋಧ ಪಕ್ಷದ ನಾಯಕರು, ಮಾನ್ಯ ಭೈರೇಗೌಡರು ಇವರುಗಳೆಲ್ಲಾ ರೈತರಿಗೆ ಇನ್‌ಶ್ಯೂರೆನ್ಸ್ ಕೊಡಬೇಕು, ಇತ್ಯಾದಿ ವಿಚಾರ ಹೇಳಿದರು. ಇವೆಲ್ಲಾ ಶಾಶ್ವತವಾದಂತಹ ಕ್ರಮವಲ್ಲ, ಅಳುವ ಮಗುವಿಗೆ ಒಂದು ಬಿಸ್ಕೇಟ್ ಕೊಟ್ಟ ಹಾಗೆ, ಒಂದು ಚೂರು, ಟೆಂಪರರಿ ವ್ಯವಸ್ಥೆ, ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಯಾವ ಸರ್ಕಾರ ಇದ್ದರೂ ಕೊಡಬೇಕಾಗುತ್ತದೆ, ಕೊಡುತ್ತಾರೆ. ಈ ಸರ್ಕಾರದಲ್ಲೂ ರೈತರ ಮನೆಯಿಂದ ಬಂದಂತಹ ಮಂತ್ರಿಗಳು ಇದ್ದಾರೆ, ಮುಖ್ಯಮಂತ್ರಿಗಳು ಇದ್ದಾರೆ. ಅವರಿಗೆ ಅದರ ಬಗ್ಗೆ ಅನುಕಂಪ ಇದೆ, ಕೊಡುತ್ತಾರೆ, ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಆದರೆ ಇನ್ನು ಮುಂದೆ ಇಂತಹ ಬರ ಬರಬಾರದು. ಬಂದರೆ, ಬರದೇ ಇರುವ ಹಾಗೆ ಏನು ಮಾಡಬೇಕು ಎನ್ನುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅದರ ಜೊತೆಗೆ ಬರ ಬಂದರೆ ಇದನ್ನು ಯಾವ ರೀತಿ ಬಗೆಹರಿಸಬೇಕು ಎನ್ನುವ ಕಡೆ ಶಾಶ್ವತ ಪರಿಹಾರ ಕ್ರಮವನ್ನು ಸರ್ಕಾರ ಯೋಜನೆ ಮಾಡಬೇಕು ಎನ್ನುವುದರ ಬಗ್ಗೆ ಕೆಲವು ವಿಚಾರಗಳನ್ನು ತಿಳಿಸಬೇಕು ಎಂದು ಹೇಳಿ ಮಾತನಾಡುತ್ತಿದ್ದೇವೆ. ಸ್ವಾಮಿ, ಪ್ರತಿ ಸಾರಿ ಬರ ಬರುವುದರಿಂದ ಬರ ಪರಿಹಾರದ ಬೋರ್ಡ್' ಎಂದು ಮಾಡಿ ಆಮೇಲೆ ಮತ್ತೆ ಅಧಿಕಾರಿಗಳನ್ನು ಹಾಕಿದರೆ ಪ್ರಯೋಜನ ಆಗುವುದಿಲ್ಲ. ಈ ರಾಜ್ಯದಲ್ಲಿ ಏನಾಗಿದೆ ಎಂದರೆ ರೈತರಿಗೆ ಸಂಬಂಧ ಪಡಲಿ, ಕಾರ್ಮಿಕರಿಗೆ ಸಂಬಂಧಪಡಲಿ, ಯಾರಿಗೇ ಸಂಬಂಧಪಡಲಿ ಒಂದು ಸಮಿತಿ ಮಾಡುವುದು. ಅದರಲ್ಲಿ ಅಧಿಕಾರಿಗಳನ್ನು ಹಾಕುವುದು. ಅವರು ಹೊಲ ನೋಡಿಲ್ಲ, ಗದ್ದೆ ನೋಡಿಲ್ಲ, ಅವರ ಮನೆಯ ಹೆಂಗಸರು ಹೊಲಕ್ಕೆ ಹೋಗಿಲ್ಲ. ಅಂಥವರನ್ನೆಲ್ಲಾ ಇಂತಹ ಕಮಿಟಿಗಳಿಗೆ ಹಾಕಿ ರೈತರಿಗೆ ವಂಚನೆ ಮಾಡುತ್ತಿದ್ದಾರೆ. ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅಂಥವರನ್ನೆಲ್ಲಾ ಕಮಿಟಿಗೆ ಹಾಕುವುದಾದರೆ, ಆ ಬರಗಾಲ ಪ್ರದೇಶದಲ್ಲಿ ನಾಲ್ಕು ನಾಲ್ಕು ಎಕರೆ ಜಮೀನನ್ನು ಪುಕ್ಕಟೆಯಾಗಿ ಅವರಿಗೆ ಕೊಡಲಿ; ಕಮಿಟಿಗಳಿಗೆ ಹಾಕಿ ಅವರಿಂದ ಸಲಹೆ ತೆಗೆದುಕೊಳ್ಳುವುದಕ್ಕೆ ಹಾಕುತ್ತಾರಲ್ಲ, ಅವರಿಗೆ ಒಂದೆರಡು ವರ್ಷ ಸಂಬಳ ಕೊಡಬೇಡಿ. ಅಲ್ಲಿ ವ್ಯವಸಾಯ ಮಾಡಲಿ ಆಮೇಲೆ ಅವರ ಅನುಭವ ತೆಗೆದುಕೊಳ್ಳಿ. ಆ ಅನುಭವದ ಮೇಲೆ ಅವರ ಮಾತು ಕೇಳಿ ನೀವೇನಾದರೂ ರಿಪೋರ್ಟ್

ಕೊಡಬಹುದೇ ವಿನಹ, ಇಲ್ಲದೇ ಹೋದರೆ ಉಪಯೋಗ ಇಲ್ಲ. ಏನೂ ಗೊತ್ತಿಲ್ಲದವರಿಗೆ ಇಂತಹ ಕಮಿಟಿಗಳಿಗೆ ಹಾಕಿ ಅವರು ಕೊಡಬಾರದ ರಿಪೋರ್ಟ್ ಕೊಟ್ಟು ನಾವೂ ಮಾಡಬಾರದ್ದು ಮಾಡಿ, ಕೊನೆಗೆ ಆ ಮುಗ್ಧ ಜನಗಳ ಶಾಪಕ್ಕೆ ನಾವೆಲ್ಲಾ ಒಳಗಾಗುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ.

ಸ್ವಾಮಿ, ಈ ಬರಗಾಲ ಈ ದೇಶಕ್ಕೆ ಒಂದೇ ಅಲ್ಲ ಮಹಾರಾಷ್ಟ್ರದಲ್ಲೂ ಬರುತ್ತಿದೆ ಈ ಬರಗಾಲ ಹಾಗೆಯೇ ಚೈನಾ ದೇಶಕ್ಕೆ ಹೋಗಿ ಬಂದಂತಹ ಅನೇಕ ಶಾಸಕರೂ ಕೂಡ ಮಾತನಾಡುವುದನ್ನು ನಾನು ಕೇಳಿದ್ದೇನೆ. ಅಲ್ಲ ಆಗಾಗ್ಗೆ ಬರಗಾಲ ಬರತಕ್ಕಂಥಹ ಪ್ರದೇಶ ಇತ್ತಂತೆ. ಅಲ್ಲಿ ಅವರದೇ ಆದ ಒಂದು ವಿಧಾನದಲ್ಲಿ ಅಲ್ಲಿಗೆ ಹೊಂದಿಕೊಳ್ಳುವ ಹಾಗೆ ಅಲ್ಲಿ ಬೋರ್‌ಗಳನ್ನು ಹಾಕಿಸಿಲ್ಲವಂತೆ. ನೀರಾವರಿಗೆ ಬೋರ್ ಹಾಕಿಸಿಲ್ಲವಂತೆ, ನಾನು ನೋಡಿಲ್ಲ ನೀವು ನೋಡಿದ್ದೀರಾ ಎಂದು ಯಾರೋ ಕೇಳಿದರು. ಗೊತ್ತಿಲ್ಲ, ಹೇಳುವುದನ್ನು ಕೇಳಿದ್ದೇನೆ. ಪ್ರತಿ ಒಂದು ಎಕರೆಗೆ ಎರಡು ಎಕರೆಗೆ ಒಂದೊಂದು ಹೊಲದಲ್ಲಿ ಒಂದೊಂದು ಮಣ್ಣಿನ ಭಾವಿಗಳನ್ನು ತೆಗೆದಿದ್ದಾರಂತೆ. ಅಲ್ಲಿ ಬಿದ್ದ ಮಳೆ ಅದು ಹರಿದು ಹಳ್ಳಕ್ಕೆ ಹೋಗಿ ಕೆರೆಗೆ ಹೋಗಿ ಸಮುದ್ರಕ್ಕೆ ಸೇರುವ ಅವಕಾಶ ಅಲ್ಲಿ ಇಲ್ಲವಂತೆ. ಅಲ್ಲಿ ಬಂದಂತಹ ಮಳೆಯ ನೀರನ್ನು ಅಲ್ಲಿಯೇ ಶೇಖರಣೆ ಮಾಡುತ್ತಾರೆ ಇದರಿಂದ ಒಂದು ಉಪಯೋಗ ಏನಾಗುತ್ತದೆ ಎಂದರೆ ಭೂಮಿಯೊಳಗೆ ಜಲ ಇಳಿಯುತ್ತದೆ. ವಾಟರ್ ಟೇಬಲ್ ಮೇಲೆ ಬರುತ್ತದೆ, ಮರ ಗಿಡಗಳು ಸೊಗಸಾಗಿ ಬೆಳೆಯುತ್ತವೆ. ಮಳೆ ಹೋಯಿತು ಎಂದರೂ ಪರವಾಗಿಲ್ಲ. ಯಾವುದೋ ಗ್ರಹಚಾರ ಬಂದು 15-20 ದಿವಸ ಮಳೆ ಹೋಯಿತು ಎಂದರೆ ಹೊಲದಲ್ಲಿ ಇರುತ್ತದಲ್ಲಾ ಮಡ್ ವೆಲ್ಸ್, ಅದನ್ನು ಎರಡು ಎಕರೆಗೆ ಮೂರು ಎಕರೆಗೆ ಮಾಡಿಕೊಂಡಿರುತ್ತಾರೆ. ಕ್ರಾಪ್ ಲೈಫ್ ಸೇವಿಂಗ್ ವಾಟರ್ ಎಂತಲೋ ಎಂದು ಏನೋ ಹೇಳಿ ಕೊಡುತ್ತಾರಂತೆ. ಆ ರೀತಿ ಕೊಟ್ಟಾಗ ಕೊನೆಯ ಪಕ್ಷ ಮುಕ್ಕಾಲು ಭಾಗ ಮಳೆ ಬರದೇ ಹೋದರೂ ಬೆಳೆ ಬರುತ್ತದೆ. ಇಂತಹ ವ್ಯವಸ್ಥೆಗಳನ್ನೆಲ್ಲಾ ಇವರು ಚಿಂತನೆ ಮಾಡಿ ಯೋಜನೆ ಮಾಡಿ ಮಾಡಬೇಕೇ ವಿನಹ ಇಲ್ಲದೇ ಇದ್ದರೆ ಖಂಡಿತ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಸ್ವಾಮಿ, ಬೋರ್‌ವೆಲ್‌ಗಳನ್ನು ಅನ್ನು ಯದ್ವಾತದ್ವಾ ತೆಗೆದರು. ಇದನ್ನು ತೆಗೆಯುವಲ್ಲಿ ವಿವೇಚನೆಯೂ ಇಲ್ಲ, ರೆಗ್ಯುಲೇಷನ್ ಸಹ ಇಲ್ಲ, ಬೋರ್‌ವೆಲ್ ಅನ್ನು ಎಲ್ಲಿ ತೆಗೆಯಬೇಕು? ಎಲ್ಲಿ ತೆಗೆಯಬಾರದು ಎಂಬ ಪರಿಜ್ಞಾನವೂ ಇವರಿಗೆ ಬರಲಿಲ್ಲ. ಹೀಗೆ ಎಲ್ಲ ಕಡೆ ಬೋರ್‌ವೆಲ್‌ಗಳನ್ನು ತೆಗೆದರು. ಇದರಿಂದಾಗಿ ನೀರಿನ ಮಟ್ಟ ಎಲ್ಲಿಗೆ ಹೋಯಿತೆಂದರೆ, 5, 10, 15 ಅಡಿಗಳಷ್ಟು ಆಳದಲ್ಲಿದ್ದ ನೀರಿನ ಮಟ್ಟ ಇವೊತ್ತು 500-600 ಅಡಿಗಳಷ್ಟು ಕೆಳಕ್ಕೆ ಹೋಗಿದೆ. ನಾನು 7-8 ವರ್ಷದ ಹುಡುಗನಾಗಿದ್ದಾಗ ಶಾಲೆಗೆ ಹೋಗುತ್ತಿದ್ದಾಗ ಹತ್ತು ಗುಂಟೆಯಷ್ಟು ಇದ್ದ ನಮ್ಮ ತೋಟಕ್ಕೆ ನೀರು ಹಾಯಿಸಲು ಹೇಳುತ್ತಿದ್ದರು. ನೀರು ತೆಗೆದುಕೊಳ್ಳಲು ನಾವು ಬಾವಿಯ ಮೆಟ್ಟಿಲಿಗೆ ಇಳಿಯದೆ ಮೇಲಿನಿಂದಲೇ ನೀರನ್ನು ತೆಗೆದುಕೊಂಡು ತೋಟಕ್ಕೆ ಹಾಯಿಸುತ್ತಿದ್ದೆವು. ಆದರೆ, ಇವೊತ್ತು ನಮ್ಮ ಊರಿನಲ್ಲಿ ಸುಮಾರು ನಾಲ್ಕು ನೂರು ಅಡಿಗಳಷ್ಟು ಬೋರ್ ಕೊರೆದರೂ ನೀರಿಲ್ಲ. ಇದಕ್ಕೇನು ಮಾಡಬೇಕು? ಸರ್ಕಾರ ಈ ಬಗ್ಗೆ ವಿವೇಕಯುತವಾಗಿ ಆಲೋಚನೆ ಮಾಡಿ ಭೂ ಜಲ ಇಷ್ಟು ಪ್ರಮಾಣದಲ್ಲಿರುವುದರಿಂದ ಬೋರ್‌ವೆಲ್ ಅನ್ನು ಇಂತಿಷ್ಟು ದೂರದ ಆಳತೆಯಲ್ಲಿ ತೆಗೆಯಬೇಕು, ಅಂತರ್ಜಲವನ್ನು ಸಂಪೂರ್ಣ ಬರಿದು ಮಾಡಿದರೆ

ಭೂಮಿ ಬರಡಾಗುತ್ತದೆಂದು ಹೇಳಬೇಕಿತ್ತು. ಈ ವಿವೇಚನೆ ಸರ್ಕಾರಕ್ಕೆ ಏಕೆ ಬರಲಿಲ್ಲ? ಸಮಾಜದಲ್ಲಿ ಅನೇಕ ಕೃಷಿ ತಜ್ಞರುಗಳಿದ್ದು ಅವರುಗಳು ತಮ್ಮ ಹೆಸರಿನ ಮುಂದೆ 50 ವಿವಿಧ ತರಹದ ಡಿಗ್ರಿಗಳನ್ನು ಹಾಕಿಕೊಂಡಿದ್ದರೂ ಇವರು ಸರ್ಕಾರಕ್ಕೆ ಸಮಾಜಕ್ಕೆ ಏನು ಸಲಹೆ ಕೊಟ್ಟಿದ್ದಾರೆ? ಬಡಪಾಯಿಯ ದುಡ್ಡಿನಲ್ಲಿ ಸಂಬಳ ತೆಗೆದುಕೊಳ್ಳುತ್ತಿಲ್ಲವೇ? ಆತ ಬೆಳೆದುಕೊಡುತ್ತಿರುವ ಆಹಾರ-ಧಾನ್ಯಗಳನ್ನು ತಿನ್ನುತ್ತಿಲ್ಲವೇ? ಈ ಹಿಂದೆ ಕೋಲಾರದಲ್ಲಿ 400-500 ಅಡಿಗಳಷ್ಟು ಆಳದಲ್ಲಿದ್ದ ನೀರು ಇವೊತ್ತು ಸುಮಾರು 800-1000 ಅಡಿಗಳಷ್ಟು ಕೆಳಗೆ ಹೋಗಿದ್ದು ಬೋರ್‌ವೆಲ್ ಕೊರೆದರೂ ನೀರು ಸಿಗುತ್ತಿಲ್ಲ. ಸುಮಾರು 10-12 ವರ್ಷಗಳ ಹಿಂದೆ ವರ್ಲ್ಡ್ ಬ್ಯಾಂಕ್‌ನವರು ಕರ್ನಾಟಕ ರಾಜ್ಯದಲ್ಲಿ ಪ್ರವಾಸ ಮಾಡಿ ತೆರಳುವ ಸಂದರ್ಭದಲ್ಲಿ ಕೋಲಾರ ಜಿಲ್ಲೆಗೆ ಸಂಬಂಧಿಸಿದಂತೆ ಒಂದು ಹೇಳಿಕೆ ನೀಡಿದ್ದರುಃ ಏನೆಂದರೆ, "ರಾಜ್ಯದಲ್ಲಿ ಇದೇ ರೀತಿ ಎಲ್ಲೆಂದರಲ್ಲಿ ನೀರಿಗೋಸ್ಕರ ಬೋರ್‌ವೆಲ್ ಕೊರೆಯುತ್ತಿದ್ದರೆ ಮುಂದೊಂದು ದಿನ ಕೋಲಾರ ಮತ್ತು ಇನ್ನು ಕೆಲವು ಜಿಲ್ಲೆಗಳಲ್ಲಿ ಥಾರ್ ಮರುಭೂಮಿಗಿಂತಲೂ ಭೀಕರವಾದ ಮರುಭೂಮಿ ಕರ್ನಾಟಕ ರಾಜ್ಯದಲ್ಲಿ ಸೃಷ್ಟಿಯಾಗುತ್ತದೆ" ಎಂದು ಎಚ್ಚರಿಸಿ ಹೋಗಿದ್ದರು. ಈ ಕುರಿತು ನೀವೇಕೆ ಗಮನಹರಿಸಲಿಲ್ಲ? ಇದರಿಂದ ಏನಾಗುತ್ತದೆಂದರೆ, ಯುಗ-ಯುಗಗಳಿಂದ, ಶತಶತಮಾನಗಳಿಂದ ಈ ಭೂಮಿಯ ಕೆಳಗೆ ಸಂಗ್ರಹವಾಗಿದ್ದಂಥ ನೀರೆಲ್ಲವನ್ನೂ ಮೇಲಕ್ಕೆತ್ತಿದ್ದರಿಂದ ಭೂಮಿ ಬರಡಾಯಿತು, ಪರಿಣಾಮ ಶಾಖ ಹೆಚ್ಚಾಗಿ ಭೂಮಿ ಮೇಲಿಂದ್ದಂಥ ಗಿಡ-ಮರಗಳೆಲ್ಲವೂ ನಶಿಸಿ ಹೋದುವು. ಶಾಖ ಜಾಸ್ತಿಯಾಯಿತು. ತಂಪಿಲ್ಲ, ಮೋಡ ಬಂದದ್ದೆಲ್ಲಾ ಹಾಗೆ ಮುಂದೆ ಹೋಗುತ್ತದೆ. ಇದು ಮುಖ್ಯ ಕಾರಣ. ಈ ದೇಶಕ್ಕೆ ಬರ ಬರಬೇಕಾದರೆ ಸರ್ಕಾರ ವಿವೇಚನೆಯಿಲ್ಲದೆ ಎಲ್ಲೆಂದರಲ್ಲಿ ಬೋರ್ ಹಾಕಿಸಿದ್ದೇ ಕಾರಣ. ಭೂಮಿಯಡಿ ಸಂಗ್ರಹವಾಗಿದ್ದಂಥ ನೀರೆಲ್ಲವನ್ನೂ ತೆಗೆದುಕೊಳ್ಳಲು ಅತ್ಯಾಸೆಯಿಂದ ಬೋರ್‌ವೆಲ್ ಕೊರೆದಿದ್ದರಿಂದ ರೈತರು 2-3 ಬೆಳೆ ತೆಗೆದುಕೊಂಡ ಬಳಿಕ ಅಂತರ್ಜಲ ಬತ್ತಿ ಹೋಯಿತು. ಆದಕಾರಣ, ಈ ಕುರಿತು ಸರ್ಕಾರ ಪರಿಶೀಲಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಬೆಲ್ ಬಾರಿಸಿದರು)

ಶ್ರೀ ಕೆ.ಹೆಚ್. ಹನುಮೇಗೌಡ: ಮಾನ್ಯ ಉಪಾಧ್ಯಕ್ಷರೆ, ತಡೀರಿ, ತಾವು ಬೆಲ್ ಹೊಡೀಬೇಡಿ. ಎರಡು ನಿಮಿಷ, ಆಮೇಲೆ ನೀವು ನನಗೆ ಕೊಡಲೇಬೇಡಿ, ನಾನು ಮಾತನಾಡುವುದೇ ಇಲ್ಲ. ಈ ರೈತರ ಬಗ್ಗೆ ಮಾತನಾಡುವುದಕ್ಕೆ ಎದ್ದು ನಿಂತುಕೊಂಡಾಗಲೇ ಈ ಕಾಟವಲ್ಲ ನಮಗೆ? ಹೇಗಿದೆ ನೋಡಿ? ಎಂಭತ್ತು ಭಾಗ ರೈತರಿದ್ದೇವೆ. ನಾವೆಲ್ಲಾ ರೈತರ ಮನೆಯಿಂದ ಬಂದವರು, ರೈತರ ಕಷ್ಟ ಹೇಳಬೇಡವೇ? ಏಕೆ ಬೆಲ್ ಹೊಡಿತೀರಿ? ನಾನು ಬಂದಿರುವುದು ರೈತರ ಮನೆಯಿಂದ, ರೈತರ ಬಗ್ಗೆ ಏನು ಹೇಳಬೇಕೋ ಹೇಳುತ್ತೇನೆ. ನೀವು ಬೆಲ್ ಹೊಡೆದರೂ ನಾನು ಹೇಳುವವರೆಗೂ ಕೂರುವುದಿಲ್ಲ. ಅದೇನು ಸಸ್ಪೆಂಡ್ ಮಾಡುತ್ತೀರೋ ಮಾಡಿ.

ಉಪಾಧ್ಯಕ್ಷರು: ಬೆಲ್ ಹೊಡೆದದ್ದು ಬೇಗ ಮುಗಿಸಿ ಎಂಬುದರ ಮುನ್ಸೂಚನೆ. ಒಂದು ಸಲ ಬೆಲ್ ಹೊಡೆದರೆ ಬೇಗ ಮುಗಿಸಿ ಎನ್ನುವ ಮುನ್ಸೂಚನೆ. ಆದಷ್ಟು ಸಂಕ್ಷಿಪ್ತವಾಗಿ ಮಾತನಾಡಿ, ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ: ಅದಕ್ಕೆ ನಾನು ಹೇಳಿದ್ದು: ಮೊದಲು ನೀವು ಹೊಲದ ಕಡೆ ಹೋಗಿ ಎಂದು. ನಮ್ಮ ಹಳ್ಳಿ ಕಡೆ ಮಳೆ ಇಲ್ಲವೆಂದು ಹೇಳಿದಿರಲ್ಲ, ಅಲ್ಲಿ ಹೋಗಿ ನೋಡಿದರೆ ಅವರ ಕಷ್ಟ ಏನೆಂದು ನಿಮಗೂ ಗೊತ್ತಾಗೋದು. .. ನೋಡಿ, ನಾನು ಮಾತನಾಡುತ್ತಿದ್ದೆ, ಎಡವಟ್ಟಾಗಿ ಮರೆತೇಹೋಯಿತು.

(ಸದನದಲ್ಲಿ ನಗು)

ಕೆಲವೊಂದು ಸಲ ಹೀಗಾಗುತ್ತದೆ. ವಯಸ್ಸಾದ ನಾವುಗಳು ಕೊನೆಗೆ ಏನಾದರೂ ಒಳ್ಳೆಯ ಸಲಹೆ ಕೊಡೋಣವೆಂದು ಜ್ಞಾಪಿಸಿಕೊಂಡು ಎದ್ದು ನಿಂತರೆ ಅವರು ಇದ್ದಿದ್ದರೆ ಇಷ್ಟೊತ್ತಿಗೆ ನಾಲ್ಕು ಸಲ ಬೆಲ್ ಹೊಡೆಯುತ್ತಿದ್ದರು. ನೀವೇನೋ ಒಂದೇ ಸಲ ಬೆಲ್ ಹೊಡೆದಿರಿ. ಮಹಾರಾಷ್ಟ್ರದ ಪುಣೆಯ ಸುತ್ತಮುತ್ತ ಕೇವಲ 3-4 ಇಂಚು ಮಳೆ ಬಿದ್ದು ಅಲ್ಲಿನ ಜನರೆಲ್ಲ ಕುದುರೆ ಹೊಡೆದು ಕೂಲಿ ಸಂಪಾದಿಸಲು ಬೊಂಬಾಯಿಗೆ ಹೋಗುತ್ತಿದ್ದರಂತೆ. ಮಹಾರಾಷ್ಟ್ರದಲ್ಲಿ ಅಣ್ಣಾ ಹಜಾರೆ ಎಂಬ ಒಬ್ಬ ಪುಣ್ಯಾತ್ಮ. ಪುಣೆಯಿಂದ ಸ್ವಲ್ಪಭಾಗ ಮುಂದೆ ಎಂದು ಕಾಣುತ್ತದೆ, ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರುವವರು ಹೇಳುತ್ತಾರೆ. ಇದೇ ರೀತಿ ಬೆಂಗಾಡು, ಮಳೆ ಬರುತ್ತಿರಲಿಲ್ಲ, ರೈತರೆಲ್ಲಾ ಹೊಲ ಉಳುವುದಕ್ಕೆ ಆಗುತ್ತಿರಲಿಲ್ಲ, ದನ-ಕರುಗಳು ಸಾಕಿಕೊಂಡು, ಒಂದೊಂದು ಸಾರಿ ತೀರಾ ಮಳೆ ಹೋದಾಗ ಬೊಂಬಾಯಿಗೆ ಕೂಲಿಗೆ ಹೋಗುತ್ತಿದ್ದರಂತೆ. ಈಗ ಅಲ್ಲಿ ಬೋರ್ ತೆಗೆಯುವುದಕ್ಕೆ ಬಿಟ್ಟಿಲ್ಲವಂತೆ. ಸುಮಾರು 15-20 ಚದರ ಮೈಲಿಯಂತಲೋ ಇನ್ನೇನೋ ಹೇಳಿದರು. ಅಲ್ಲಿಗೆ ಹೋಗಿ ನೋಡಿಕೊಂಡು ಬಂದ ಕೆಲವು ಎಕ್ಸಪರ್ಟ್‌ಗಳನ್ನು ಕೇಳಿದೆ: ಅವರು ಹಾಗಂತ ಹೇಳಿದರು. ಬಾವಿ ತೆಗೆಯುವಂತಿಲ್ಲ, ಸಣ್ಣಸಣ್ಣ ಮಣ್ಣಿನ ಬಾವಿಗಳನ್ನು ತೆಗೆದುಕೊಂಡಿದ್ದಾರಂತೆ, ಬೋರ್ ಅಂತೂ ಹಾಕುವಂತೆಯೇ ಇಲ್ಲ, ಅಲ್ಲಿದ್ದಂಥ ಕೆರೆ - ಕಟ್ಟೆಗಳಲ್ಲಿರುವ ಮಣ್ಣಿನ ಗೋಡನ್ನು ಬೇಸಿಗೆ ಕಾಲದಲ್ಲಿ ರೈತರು ತಮ್ಮ ಹೊಲ-ಗದ್ದೆಗಳಿಗೆ ಹೊಡೆದುಕೊಳ್ಳುತ್ತಾರಂತೆ. ಹೀಗಾಗಿ ಅಲ್ಲಿ ಸಮೃದ್ಧಿಯಾಗಿ ಮಳೆಯಾಗುತ್ತಿದೆಯಂತೆ. ಈಗ ಇಲ್ಲಿರುವ ಎಕ್ಸ್‌ಪರ್ಟಗಳೆಲ್ಲರೂ ಏಕೆ ಅಲ್ಲಿಗೆ ಹೋಗಿ ನೋಡಿಕೊಂಡು ಬರಬಾರದು? ಚೈನಾ ಏನೋ ದೂರ, ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ, ಬಿಡಿ. ದುಡ್ಡು ಸಹ ವಿಪರೀತ ಖರ್ಚಾಗುತ್ತದೆ. ಇಲ್ಲಿಗೇಕೆ ಹೋಗಿ ಬರಬಾರದು? ಅಲ್ಲಿರುವ ಅನೇಕ ರೈತರು ಉತ್ತಮವಾದ ಎಕ್ಸಪೆರಿಮೆಂಟ್ ಮಾಡಿ, ಬರಗಾಲ ಬಂದರೂ ಕೂಡ ಜೀವನ ಮಾಡುವಂಥ ಒಂದು ವ್ಯವಸ್ಥೆ ಮಾಡಿಕೊಂಡು ಇಲ್ಲೇ ಪಕ್ಕದಲ್ಲಿರುವ ಉದಾಹರಣೆಯನ್ನು ಈ ರಾಜ್ಯದಲ್ಲೇಕೆ ಇದನ್ನು ಇಂಟ್ರಡ್ಯೂಸ್ ಮಾಡಬಾರದು? ಏನೇನೋ ಸ್ಕೀಮುಗಳು, ಮೊನ್ನೆ ದಿವಸ ಒಂದು ಸ್ಕೀಮ್ ತಂದುಬಿಟ್ಟು... ಹಳ್ಳಿ ಕಡೆ ಕೆರೆಗಳು ಇದೆಯೆಲ್ಲ, ಕೆರೆ ತುಂಬಿಕೊಂಡರೆ ಅವರ ಪಾಡಿಗೆ ಭತ್ತ ಬೆಳೆಯುತ್ತಾರೆ, ಅರ್ಧ ನೀರು ಬಂದರೆ ಅರ್ಧಕ್ಕೆ ಭತ್ತ ಹಾಕುತ್ತಾರೆ, ಇನ್ನರ್ಧಕ್ಕೆ ರಾಗಿ ಹಾಕಿಕೊಳ್ಳುತ್ತಾರೆ. ಇನ್ನೂ ಕಡಿಮೆ ಬಂದರೆ ರಾಗಿ ಹಾಕಿಕೊಂಡು ಜೀವನ ಮಾಡುತ್ತಾರೆ. ಅದಕ್ಕೊಂದು ಕಮಿಟಿ! ಯಾರ್ಯಾರೆಂದರೆ ಹಾರ್ಟಿಕಲ್ಚರ್ ಅಫೀಸರ್, ಫಾರೆಸ್ಟ್ ಅಫೀಸರ್, ಇನ್ನು 8-10 ಜನರು ಇವರದು ಏನು ಕೆಲಸವೆಂದರೆ, ಅಲ್ಲಿ ಹೋಗಿ ಮೀಟಿಂಗ್ ಕರೆದು ಹೇಳಿ ಬೆಳೆ ಹಾಕೋದು, ಅಡ್ವೈಸ್ ಮಾಡೋದು. ಇವರೇ ಇದ್ದಾರಾ ಇಷ್ಟು ದಿವಸಗಳ ತನಕ? ಇದಕ್ಕೆ ಖರ್ಚು ಎಷ್ಟು? ವರ್ಲ್ಡ್‌ಬ್ಯಾಂಕ್‌ನಿಂದ 465

ಕೋಟಿ, ಯಾರಿಗೆ ಬೇಕು? ಯಾರಿಗೆ ಬೇಡ? ಈ ದೇಶದಲ್ಲಿ ಸ್ಕೀಮುಗಳಿಗೆ, ಬೇಕಾದಷ್ಟು ದುಡ್ಡು ಬಿದ್ದಿದೆಯೆಂದು ಯಾರೋ ಕೊಡುತ್ತಾರೆಂದು ಈ ದೇಶದಲ್ಲಿ ತಂದು ಹಾಕಿ ಖರ್ಚು ಮಾಡಿ ಮುಂದಿನ ಪೀಳಿಗೆಯವರ ಹೊಲ-ಮನೆ ಎಲ್ಲವನ್ನೂ ಮಾರಿ, ಇವರನ್ನೂ ಹರಾಜು ಹಾಕಿಕೊಂಡರೂ ಸಾಲ ಹಾಗೂ ಬಡ್ಡಿಯನ್ನು ತೀರಿಸುವುದಕ್ಕಾಗುತ್ತದೆಯೇ? ಹೋಗಲಿ, ಸಾಲ ತರಲಿ, ತರಬೇಕು. ಹಣ ಹಾಕಿದರೆ ಯಾವ ಅಭಿವೃದ್ಧಿಯೂ ಆಗುವುದಿಲ್ಲ. ಹಾಕಿದ್ದನ್ನು ಉತ್ಪತ್ತಿ ಬರುವಂತೆ ಮಾಡಿಕೊಳ್ಳಬೇಕು ತಾನೇ? ಉತ್ಪತ್ತಿ ಬರತಕ್ಕಂಥ ಬಾಬಿಗೆ ನಾವು ಖರ್ಚು ಮಾಡಿದರೆ ಹಣವೂ ಬರುತ್ತದೆ, ಹಣಕ್ಕೆ ಬಡ್ಡಿಯೂ ಬರುತ್ತದೆ, ಒಂದಷ್ಟು ಉತ್ಪತ್ತಿನಯೂ ಆಗುತ್ತದೆ, ದೇಶಕ್ಕೆ ಸಮೃದ್ಧಿಯೂ ಬರುತ್ತದೆ. ಅದು ಬಿಟ್ಟು ಕೊಡುತ್ತಾರೆಂದು ಹೋಗಿ ಎಂತೆಂತಹುದೋ ಸ್ಕೀಮ್ ತಂದು ಇದೆಲ್ಲಾ ಮಾಡುತ್ತಾರೆ. ಅವೊತ್ತು ಕಮಿಟಿಯಲ್ಲಿ ನಾನು ಹೇಳಿದೆ: ಇದು ಯಾರುದ್ರಿ ತಲೆ? ಎಂದೆ. ಅವರ ಪಾಡಿಗೆ ಅವರು ಬೆಳೆದುಕೊಂಡು ನೆಮ್ಮದಿಯಿಂದಿದ್ದಾರೆ, ಅವರಲ್ಲಿ ನೀವ್ಯಾಕೆ ಇಂಟರ್‌ಫಿಯರ್ ಆಗುತ್ತೀರಿ? ನಿಮ್ಮನ್ನು ಏನು ಕೇಳುತ್ತಾರೆ? ನಿಮಗೇನು ಅನುಭವವಿದೆ? ಈಗ ನೀವು ಹೇಳಿದಿರಲ್ಲ, 8-10 ಜನರು, ಇವರು ಎಲ್ಲಿ ಹೊಲ ಉತ್ತಿದ್ದಾರೆ? ಯಾವ ಊರಿನವರು? ಹೇಳಿರಿ ಎಂದು ಗಲಾಟೆ ಮಾಡಿದ ಮೇಲೆ "ಅದೆಲ್ಲಾ ನಿಮಗೆ ಗೊತ್ತಾಗುವುದಿಲ್ಲ ನೀವು ಸುಮ್ಮನಿರಿ" ಎಂದು ನನಗೆ ಹೇಳಿಬಿಟ್ಟರು. ನಾವು ಹಳ್ಳಿಯಲ್ಲೇ ಹುಟ್ಟಿ ವ್ಯವಸಾಯಗಾರನ ಮನೆಗೆ ಬಂದು ಎಷ್ಟೋ ದಿವಸ ಉಪವಾಸ ಇದ್ದೇವೆ, ಎಷ್ಟೋ ದಿನ ಊಟ ಮಾಡಿದ್ದೇವೆ, ಇಂತಹ ಪರಿಸ್ಥಿತಿಯಲ್ಲಿ ಬಂದಿರುವರಿಗೆ ನಾವು ಹೇಳುವುದಕ್ಕೆ ಹೋದರೆ ನಿಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನಾನು ಕೊನೆಗೆ ಒಂದು ಮಾತು ಹೇಳಿದೆ: ಇಂತಹ ಪರಿಸ್ಥಿತಿಯಲ್ಲಿ ನೀವು ಇದನ್ನು ಹಾಕಿ, ಅದನ್ನು ಹಾಕಿ, ಹೀಗೆ ಮಾಡಿ ಎಂದು ಹೇಳುವುದಕ್ಕೆ ಹೋದರೆ ನಿಮ್ಮ ಪೈಜಾಮ ಕಿತ್ತು ಅದು ಹರಿದುಹೋಗುವಂತ ಹೊಡೆಯದೆ ಹೋದರೆ ನಾನು ಜೀವಸಹಿತ ಇದ್ದರೆ ನನ್ನ ಹೆಸರಿಡಿದು ನೆನೆದುಕೊಳ್ಳಿ ಎಂದು ಹೇಳಿದೆ. ಆದರೂ ಅವರು ಒಪ್ಪಿಕೊಂಡಂತೆ ಕಾಣಲಿಲ್ಲ. ಮತ್ತೆ ಏನೇನೋ ಮಾತನಾಡಿಕೊಂಡು, ಬರೆದುಕೊಂಡು ಎದ್ದು ಹೋದರು. ಅದೇನಾದರೂ ಇರಲಿ. ಇಂಟ್ರಡ್ಯೂಸ್ ಮಾಡುತ್ತಾರೋ, ಬಿಲ್ ತರುತ್ತಾರೋ ಇಲ್ಲವೇ ಅಲ್ಲಿಯೇ ಹಾಗೇ ಮಾಡಿಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ಇಂತಹ ಪೂಲೀಷ್ ಥಿಂಗ್ಸ್, ಹೊರದೇಶದಲ್ಲಿ ದುಡ್ಡು ಸಿಗುತ್ತದೆಂದು ತಂದು ಯದ್ವಾತದ್ವಾ ಖರ್ಚು ಮಾಡಿ ಪ್ಲಾನ್ ಹಾಕಿ ಹಂಚಿಕೊಂಡು ಇವರು ನಾಲ್ಕು ನಾಲ್ಕು ಮಹಡಿ ಮನೆ ಕಟ್ಟಿಕೊಂಡು ಹೋದರೆ ಅದನ್ನು ತೀರಿಸುವವರು ಯಾರು? ದೇಶದ ಗತಿ ಏನು? ಇದರ ಬಗ್ಗೆ ಸರ್ಕಾರದವರು, ಮುಖ್ಯಮಂತ್ರಿಯವರು, ನೀರಾವರಿ ಮಂತ್ರಿಗಳು ನೀವುಗಳೆಲ್ಲರೂ ಕುಳಿತುಕೊಂಡು ಸ್ವಲ್ಪ ಯೋಚನೆ ಮಾಡಿಕೊಂಡು ಮಾಡಿ. ಅಧಿಕಾರಿಗಳು ಹೇಳಿದ ಮಾತನ್ನು ಕೇಳಿಕೊಂಡು ದೇಶ ಹಾಳು ಮಾಡಬೇಡಿ. ಇಷ್ಟೆಲ್ಲಾ ಆಯಿತು. ಮಳೆ ಹೋಗಿದೆ, ಬೆಳೆ ಹೋಗಿದೆ ಎಲ್ಲಾ ಆಗಿದೆ, ಏನೇನೂ ಇಲ್ಲ. ಈಗ ಹಾಕಿರುವ ಬೆಳೆ ಹೋಗಿದೆ. ಈಗೇನಾದರೂ ಆಕಸ್ಮಾತ್ ಇನ್ನು ಒಂದೆರಡು ತಿಂಗಳಿನಲ್ಲಿ ಮಳೆ ಬಂತು ಅಂತ ಇಟ್ಟುಕೊಳ್ಳಿ. ಅವರು ಪೈರು ಹಾಕಬೇಕೋ ಬೇಡವೋ? ಅವರು ಪೈರು ಹಾಕಬೇಕಾದರೆ ದುಡ್ಡು ಎಲ್ಲಿಂದ ತರುತ್ತಾರೆ? ಬ್ಯಾಂಕ್‌ನಲ್ಲಿ ಲೋನ್ ತೆಗೆದುಕೊಂಡಿದ್ದಾರೆ, ವಾಪಸ್ಸು ಕಟ್ಟಲು ಚೈತನ್ಯವಿಲ್ಲ. ಎಲ್ಲಾ ಭೂಮಿಗೆ ಹಾಕಿದರು. ಅವರ ಹೆಂಗಸರ ಒಡವೆಗಳನ್ನು ತೆಗೆದುಕೊಂಡು ಹೋಗಿ ಬ್ಯಾಂಕಿನಲ್ಲಿಟ್ಟಿದ್ದಾರೆ. ಈಗ ಮಳೆ ಬಂದರೆ ಅವರು ಬೆಳೆಯಬೇಕು, ಅವರು ಬೆಳೆಯದೆ

ಹೋದರೆ ಜನರು ತಿನ್ನುವುದೇನು? ಇಲ್ಲಿರತಕ್ಕಂಥ ಮೂರುವರೆ ಲಕ್ಷ ಸರ್ಕಾರಿ ನೌಕರರು, ನಾವು ಒಂದಷ್ಟು ಜನ ಒಂದೂಕಾಲು ಲಕ್ಷ ಜನರು ಬರಬಹುದು, ಐದು ಪರ್ಸೆಂಟ್. ಈ ದೇಶದಲ್ಲಿ ಮುಕ್ಕಾಲು ಭಾಗ ದೇಶದ ದುಡ್ಡನ್ನು ಉಪಯೋಗಿಸಿಕೊಳ್ಳುವವರು ನಾವು. ಆ ಬಡಾಪಾಯಿಗಳಿಗೆ ನಾವು ಎಷ್ಟು ಖರ್ಚು ಮಾಡುತ್ತೇವೆ? ಈ ದೇಶದ ಒಟ್ಟು ಉತ್ಪತ್ತಿಯಲ್ಲಿ ಅವರದು ಶೇಕಡ 60-70 ಭಾಗ. ಅವರ ಬೆವರಿನಿಂದ ದುಡಿದು ಬರತಕ್ಕಂಥ ಹಣ. ನಾವು ಆ ಹಳ್ಳಿ ಜನರಿಗೆ ಎಷ್ಟು ಹಣ ಖರ್ಚು ಮಾಡುತ್ತೇವೆ. ಯಾವ್ಯಾವುದೋ ಸ್ಕೀಮು, ಯಾವ್ಯಾವನೋ ಹೊಡೆದುಕೊಂಡು ತಿನ್ನುತ್ತಾನೆ, ಯಾವ್ಯಾವನೋ ಏನೇನೋ ಮಾಡುತ್ತಾನೆ. ಆ ಬಡಪಾಯಿಗಳಿಗೆ 10 ಪರ್ಸೆಂಟ್ ಕೂಡ ಸಿಗುತ್ತಿಲ್ಲ. ಇಂತಹ ಪರಿಸ್ಥಿತಿ ಇದೆ. ಈಗ ಅಂತಹ ಜನರಿಗೆ ಸರ್ಕಾರದವರು ಬಿತ್ತನೆ ಬೀಜ, ಗೊಬ್ಬರ ಇದನ್ನು ಕೊಡುವುದಕ್ಕೆ ಏನು ಅವಕಾಶ ಇದೆಯೋ ಆತನ ಹತ್ತಿರ ಜಮೀನು ಇದ್ದರೆ ಬರೆಸಿಕೊಳ್ಳಿ, ನಾನು ಬೇಡವೆಂದು ಹೇಳುವುದಿಲ್ಲ. ಕೊಡದೆ ಹೋದರೆ ಆತ ಸರ್ವನಾಶವಾಗುತ್ತಾನೆ. ಇದಕ್ಕೆ ವ್ಯವಸ್ಥೆ ಮಾಡಬೇಕು. ಹಾಗೆಯೇ ಒಂದು ಪಕ್ಷ ಏನಾದರೂ ಮಳೆ ನಾಲ್ಕೈದು ತಿಂಗಳು ಬಾರದೆ ಹೋದರೆ ಈಗ ತೆಗೆದುಕೊಂಡಿರತಕ್ಕ ಸಾಲವನ್ನು ಐದು-ಹತ್ತು ವರ್ಷಗಳಿಗೆ ಕಂತುಗಳಲ್ಲಿ ತೀರಿಸಲು ಅವರಿಗೆ ಅವಕಾಶ ಮಾಡಿಕೊಡಬೇಕು. ಒಂದೇ ಸಲ ಕೊಡಬೇಕೆಂದರೆ... ಗೊತ್ತಿದೆಯೆಲ್ಲ ಹೋದ ಸಲ 100-150 ಜನ ಸತ್ತರು.

4.00 ಪಿ.ಎಂ

ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ವರದಿ ನೀಡಲು ಒಂದು ಕಮಿಟಿ ಮಾಡಿದ್ದರು. ಅದು ಪತ್ರಿಕೆಯಲ್ಲೂ ಬಂದಿತ್ತು. ಅನೇಕ ಜನರು ಬೇರೆ ಬೇರೆ ಕಾರಣಗಳಿಗಾಗಿ ನೇಣು ಹಾಕಿಕೊಳ್ಳುತ್ತಾರೆ. ಅವರಿಗೆ ಕೊಡುವ ಅವಶ್ಯಕತೆ ಇಲ್ಲ ಎಂಬ ಅರ್ಥದಲ್ಲಿ ಆ ಸಮಿತಿಯವರು ವರದಿ ನೀಡಿದ್ದ ಬಗ್ಗೆ ಪತ್ರಿಕೆಗಳಲ್ಲಿ ಬಂದಿತ್ತು. ನನಗೆ ಬಹಳ ಸಂಕಟವಾಯಿತು. ನಾನು ಒಬ್ಬರಿಗೆ ಐದು ಲಕ್ಷ ರೂಪಾಯಿ ಕೊಡುತ್ತೇನೆ. ಆ ಹಣಕ್ಕಾಗಿ ಅದು ಯಾರು ನೇಣು ಹಾಕಿಕೊಳ್ಳುತ್ತಾರೆ ಹೇಳಿ? ಬಡಪಾಯಿಗಳಿಗೆ ಒಂದು ಲಕ್ಷ ರೂಪಾಯಿ ಹಣವನ್ನು ಕೊಡುತ್ತಾರೆಂದು ಸುಮ್ಮ ಸುಮ್ಮನೆ ಹಣಕ್ಕಾಗಿ ನೇಣು ಹಾಕಿಕೊಳ್ಳುತ್ತಾರೆಂದು ನಾವು ಅರ್ಥ ಮಾಡಿದೆವು. ಇಲ್ಲಿ ನಾವಿಷ್ಟು ಜನರಿದ್ದೇವಲ್ಲಾ, ನಾನು ಜಮೀನು ಮಾರಿ ಇಲ್ಲವೇ ಬೇರೆ ರೀತಿಯಿಂದ ಹಣ ಮಾಡಿ ಐದು ಲಕ್ಷ ರೂಪಾಯಿ ಕೊಡುತ್ತೇನೆ, ಅದು ಯಾರು ಬನ್ನಿ ನೇಣು ಹಾಕಿಕೊಳ್ಳುವವರು? ಹಣಕ್ಕಾಗಿ ಯಾರಾದರೂ ನೇಣು ಹಾಕಿಕೊಳ್ಳುತ್ತಾರೆಯೇ? ನಾವು ರೈತರ ಜೀವನವನ್ನು ಎಷ್ಟೊಂದು ಹಗುರವಾಗಿ ತೆಗೆದುಕೊಂಡಿದ್ದೇವೆ?

ಉಪಾಧ್ಯಕ್ಷರು: ನೇಣು ಹಾಕಿಕೊಳ್ಳುವವರು ಇಲ್ಲಿದ್ದಾರೆಯೇ? ಯಾರಾದರೂ ನೇಣು ಹಾಕಿಕೊಂಡರೆ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತಾರಾ?

ಶ್ರೀ ಕೆ. ಹೆಚ್. ಹನುಮೇಗೌಡ: 25 ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿ ಯಾರಿದ್ದಾರೆ ಅವರು ಏನೇನೋ ಕಾರಣಗಳಿಗಾಗಿ ರೈತರು ನೇಣು ಹಾಕಿಕೊಳ್ಳುತ್ತಾರೆ ಎಂದು ವರದಿ ಕೊಟ್ಟಿದ್ದಾರೆ, ಬಡತನಕ್ಕಾಗಿ ನೇಣು ಹಾಕಿಕೊಳ್ಳುವುದಿಲ್ಲವೆಂದು ಅವರು ಹೇಳಿದ್ದಾರೆ, ಅದಕ್ಕಾಗಿ ನಾನು, ನಾನೇ ಐದು ಲಕ್ಷ ರೂಪಾಯಿಗಳನ್ನು ಕೊಡುತ್ತೇನೆ ಅದು ಯಾರು ನೇಣು

ಹಾಕಿಕೊಳ್ಳುತ್ತಾರೆ, ನೇಣು ಹಾಕಿಕೊಳ್ಳಿ ಎಂದು ಹೇಳಿದ್ದು. ಎಂಥವನೇ ಆಗಲಿ, ಒಂದು ಪುಟ್ಟ ಸಂಸಾರ, ಒಂದು ಇಲ್ಲವೇ ಅರ್ಧ ಎಕರೆ ಜಮೀನು ಇರುತ್ತದೆ, ನಗುನಗುತ್ತಿರತಕ್ಕ ಹೆಂಡತಿ, ಎಲ್ಲಾ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾಳೆ, ತಿಂಡಿ, ಊಟ ಮಾಡಿಕೊಡುತ್ತಾಳೆ, ಹಸಿದುಕೊಂಡಿದ್ದರೆ, ಕಾಯಿಲೆ ಬಿದ್ದರೆ ಕಣ್ಣೀರು ಹಾಕುತ್ತಾಳೆ. ಪುಟ್ಟ ಪುಟ್ಟ ಎರಡು ಮೂರು ಮಕ್ಕಳು, ಅಪ್ಪ, ಅಣ್ಣಾ, ಎನ್ನುತ್ತೇವೆ, ಓಡಿಬಂದು ತಬ್ಬಿಕೊಳ್ಳುತ್ತವೆ, ಅಂಥ ನಗುನಗುತ್ತಿರತಕ್ಕ ಕುಟುಂಬದ ಯಜಮಾನ ಒಂದು ಲಕ್ಷ ರೂಪಾಯಿ ಹಣ ಸಿಕ್ಕಲಿ ಎಂದು ನೇಣು ಹಾಕಿಕೊಳ್ಳುತ್ತಾನೆಯೇ? ಇದು ಎಲ್ಲಿಯಾದರೂ ಉಂಟಾ? ಇಷ್ಟೊಂದು ಕೋಟಿಗಟ್ಟಲೆ ಹಣವನ್ನು ದುಡಿದುಕೊಟ್ಟಿರುವಂಥ ಜನರಿಗೆ ಹತ್ತು, ಇಪ್ಪತ್ತು, ಐವತ್ತು ಜನ ಸತ್ತಿರುವವರಿಗೆ ಒಂದು ಲಕ್ಷ ರೂಪಾಯಿ ಹಣವನ್ನು ಕೊಟ್ಟರೆ ಸರ್ಕಾರಕ್ಕೆ ಬಡತನ ಬರುತ್ತದೆಯೇ? ಇನ್ನೂ ನಿಮ್ಮ ಸರ್ಕಾರದ ಕೀರ್ತಿ ಹೆಚ್ಚುತ್ತದೆ. ಅದನ್ನೇ ಭಕ್ತಿಯಿಂದ ದೇವರಲ್ಲಿ ಪ್ರಾರ್ಥನೆ ಮಾಡುತ್ತಾನೆ. ಇಂಥ ಕಷ್ಟಕಾಲದಲ್ಲಿ ನಮ್ಮ ಮುಖ್ಯಮಂತ್ರಿಯವರು, ಈ ಸರ್ಕಾರದವರು ಎಲ್ಲರೂ ನನಗೆ ಸಹಾಯ ಮಾಡಿದರು, ಒಳ್ಳೆಯದಾಗಲಿ ಎಂದು ಆತನ ಪ್ರಾಣದ ಮೇಲೆ ಸರ್ಕಾರ ಅಣಕವಾಡಬಾರದು. ಅದು ದ್ರೋಹವಾಗುತ್ತದೆ. ಅದು ದೈವದ್ರೋಹವಾಗುತ್ತದೆ. ಅವನು ಏನು ಮಾಡುತ್ತಾನೆ? ಮದುವೆಯಾಗುವ ಮಗಳಿರುತ್ತಾಳೆ, ವಯಸ್ಸು ತುಂಬುತ್ತಾ ಬಂದಿರುತ್ತದೆ, ಕೈಯಲ್ಲಿ ಹಣವಿರುವುದಿಲ್ಲ, ಯಾರ್‍ಯಾರೋ ಬಂದು ಕೇಳುತ್ತಾರೆ, ಅಷ್ಟು ಕೊಡು, ಇಷ್ಟು ಕೊಡು ಎನ್ನುತ್ತಾರೆ. ಕೊಡಲು ಶಕ್ತಿ ಇಲ್ಲ. ಮಕ್ಕಳು, ಅಣ್ಣಾ ಪಕ್ಕದ ಮನೆಯವರು ಎಸ್.ಎಸ್.ಎಲ್.ಸಿ, ಅದು ಇದು ಓದುತ್ತಿದ್ದಾರೆ, ನಾನೂ ಓದುತ್ತೇನೆ ಹಣ ಕೊಡು ಎನ್ನುತ್ತವೆ, ಆದರೆ ಎಲ್ಲಿ ತರುತ್ತಾನೆ? ಹೆಂಡತಿ ಕೇಳುತ್ತಾಳೆ, ರೀ ಒಂದೆರಡು ಸೀರೆ ಇದೆ, ಪಕ್ಕದ ಮನೆಯವರು ನಾಲ್ಕಾರು ಸೀರೆ ಉಟ್ಟು ಕೊಂಡಿದ್ದಾರೆ, ನನಗೊಂದು ಸೀರೆ ತೆಗೆದುಕೊಡಿ ಎನ್ನುತ್ತಾಳೆ, ಆ ಬಡಪಾಯಿ ಏನು ಮಾಡುತ್ತಾನೆ? ಯೋಚನೆ ಮಾಡಿ. ಎಲ್ಲವನ್ನೂ ಕಳೆದುಕೊಂಡು ಇದ್ದಾಗ ಇಂಥ ಅವಮಾನದಿಂದ ಇರುವುದರ ಬದಲು ನನ್ನ ಪ್ರಾಣ ಹೋದರೂ ಚಿಂತೆ ಇಲ್ಲ, ಇದರ ಕಾಟವನ್ನು ತಡೆಯಲಾರೆ, ಮುಂದಿನ ಜನ್ಮದಲ್ಲಾದರೂ ಒಳ್ಳೆಯದು ಮಾಡಲಿ ಎಂದು ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ದುಡ್ಡಿಗೋಸ್ಕರ ಪ್ರಾಣ ಕಳೆದುಕೊಳ್ಳುತ್ತಾನೆಯೇ? ಮಾನ್ಯ ಮುಖ್ಯಮಂತ್ರಿಯವರು ಇದರ ಬಗ್ಗೆ ದಯವಿಟ್ಟು ಆಲೋಚನೆ ಮಾಡಿ. ನಾನು ಸಂಕಟದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಯಾರೂ ಕೂಡ ಒಂದು ಲಕ್ಷ ರೂಪಾಯಿ ಹಣಕ್ಕಾಗಿ ತನ್ನ ಪವಿತ್ರವಾದ ಜೀವವನ್ನು ಕಳೆದುಕೊಳ್ಳಲು ತಯಾರಿರುವುದಿಲ್ಲ. ಯಾರೋ ಕೊಟ್ಟಂಥ ವರದಿಯನ್ನು ಮನ್ನಣೆಗೆ ತೆಗೆದುಕೊಂಡು ಇದು ನಿಜವೆಂದು ತಾವು ಭಾವಿಸಬೇಡಿ. ಅದು ಏಕೆ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುತ್ತೀರಂತಲ್ಲಾ? ಸ್ವಾಮಿಗಳು ಹದಿನೈದು ಇಪ್ಪತ್ತು ಸಾವಿರ ಸಂಬಳ ತೆಗೆದುಕೊಳ್ಳುತ್ತಾರೆ, ಅವರಿಗೆ ಬಡತನ ಗೊತ್ತಾ? ಹಸಿವು ಗೊತ್ತೇ? ಉಪವಾಸ ಗೊತ್ತೇ? ಅಂಥವರ ಕೈಯಲ್ಲಿ ಎನ್‌ಕ್ವೈರಿ ಮಾಡಿಸುತ್ತಾರೆ? ನಮ್ಮ ರೈತರ ಬಗ್ಗೆ ನಮಗೆ ಕನಿಕರವಿಲ್ಲವೆ? ಪ್ರೀತಿ ಇಲ್ಲವೆ? ವಿಶ್ವಾಸವಿಲ್ಲವೇ? ಯಾರ ಅನ್ನ ಊಟ ಮಾಡಿ ಈ ದೇಶ ಬದುಕುತ್ತಿದೆ? ಈ ದೇಶದಲ್ಲಿರುವ ಪ್ರತಿಯೊಂದು ಡ್ಯಾಂನ ಕೆಲಸದಲ್ಲಿ ಆ ಬಡಾಪಾಯಿಗಳ ಬೆವರು ಇದೆ. ಈ ಬಿಲ್ಡಿಂಗ್ ಕಟ್ಟಿದ್ದಾರಲ್ಲಾ, ಈ ಸೊಗಸಾದ ಕಟ್ಟಡದಲ್ಲಿ ಇಷ್ಟರಮಟ್ಟಿಗೆ ಕುಳಿತಿದ್ದೇವಲ್ಲಾ..

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಭಾಷಣ ಮಾಡುವಾಗ ಒಂದು ಶಬ್ದವನ್ನು ಬಳಸಿದರು. ಅವರು ಈ ಸದನದಲ್ಲಿ ಇಲ್ಲ, ಆದ್ದರಿಂದ ಅದನ್ನು ದಯವಿಟ್ಟು ಕಡತದಿಂದ ತೆಗೆಸಬೇಕು.

ಉಪಾಧ್ಯಕ್ಷರು: ಆ ಪದವನ್ನು ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ: ಆಯಿತು. ಒಳ್ಳೆಯ ಕೆಲಸ ಮಾಡಿದ ವಿವೇಕಶಾಲಿಗಳು

ಉಪಾಧ್ಯಕ್ಷರು: ಜೊತೆಗೆ ತಾವು ಆಗಲೆ ಮಾತನಾಡುವಾಗ ನಿಮ್ಮದ್ದೊಂದು ಕಾಟ" ಎಂದು ಹೇಳಿದಿರಿ ಅದನ್ನೂ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ: ನಾನು ಹಾಗೆ ಉಪಯೋಗಿಸಿರುವ ಪದಗಳನ್ನು ನೂರು ಸಲ ವಾಪಸ್ ತೆಗೆದುಕೊಂಡಿದ್ದೇನೆಂದು ಹೇಳುತ್ತೇನೆ, ಆದರೆ ಒಳ್ಳೆಯ ಕೆಲಸ ಮಾಡಿ. ಬಡ ರೈತರ ಬಗ್ಗೆ ಕನಿಕರ ಇಟ್ಟುಕೊಳ್ಳಿ, ನಿಮ್ಮ ಕೈಯಲ್ಲಿ ಏನು ಸಾಧ್ಯವಾಗುತ್ತದೋ ಒಳ್ಳೆಯ ಕೆಲಸ ಮಾಡಿ, ಕೀರ್ತಿಶಾಲಿಗಳಾಗಿ, ನಮ್ಮ ಕೃಷ್ಣರವರು ಇದ್ದರು, ಆ ಟೈಮ್‌ನಲ್ಲಿ ಬರಗಾಲ ಬಂದಿತ್ತು, ತೊಂದರೆ ಪಟ್ಟೆವು, ಹಾಳಾಗಿಹೋಗಿದ್ದೆವು, ನಮ್ಮನ್ನು ಉಳಿಸಿದರು, ನಮಗೆ ಪ್ರಾಣ ಕೊಟ್ಟರು ಎಂದು ಹೇಳಿ ಕೀರ್ತಿಶಾಲಿಗಳಾಗಿ ನೀವು ದೇವರಿಗೆ ಬಹಳ ಪ್ರೀತಿವಂತರಾಗುತ್ತೀರಿ. ನಾವು ಮಾತನಾಡುವಾಗ ಆವೇಶದಲ್ಲಿ ಏನೋ ಒಂದು ಮಾತು ಆಡಿದಾಗ ಅದನ್ನು ನಿಮಗಾಗಲಿ, ತಮ್ಮ ಸರ್ಕಾರಕ್ಕಾಗಲಿ, ತಮ್ಮ ಮಂತ್ರಿಗಳಿಗಾಗಲಿ ಅಂದದ್ದಲ್ಲ. ಆವೇಶದಲ್ಲಿ ಗೊತ್ತಿಲ್ಲದೇ ಅಂದದ್ದು. ಅದನ್ನು ನಾನು ವಾಪಸ್ ತೆಗೆದುಕೊಂಡಿದ್ದೇನೆ... ಹೌದು. ವಿವೇಕಶಾಲಿಯಾಗಿದ್ದವನು ಅಂಥ ವರದಿಯನ್ನು ಕೊಡುತ್ತಿದ್ದನೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: (ಗೃಹ ಸಚಿವರು): ಮಾನ್ಯ ಉಪಾಧ್ಯಕ್ಷರೆ ಹನುಮೇಗೌಡರಿಗೆ ನೆನಪು ಇದೆಯೋ ಇಲ್ಲವೋ ಡಾ।। ವೀರೇಶ್ ಅವರದ್ದು ಹೇಳಿದಿರಲ್ಲಾ ಆ ಆಯ್ಕೆ ಸಮಿತಿಯಲ್ಲಿ ನೀವೇ ಇದ್ದೀರಿ. ಆ ಕಾಲದಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿಯ ಬೋರ್ಡ್ ಆಫ್ ರೀಜೆಂಟ್ಸ್ ಇದ್ದರಲ್ಲಾ, ಪ್ರೊಫೆಸರ್ಸ್ ಅಸೋಸಿಯೇಟ್ ಪ್ರೊಫೆಸರ್ಸ್ ಮಾಡುವಾಗ ತಮ್ಮ ಕೊಡುಗೆ, ನಮ್ಮ ಲೇಟ್ ಶ್ರೀಮತಿ ನಾಗರತ್ನಮ್ಮನವರ ಕೊಡುಗೆ ಅದಕ್ಕೆ ಇದೆ. ಆದ್ದರಿಂದ ತಾವು ಅವರ ಬಗ್ಗೆ ಏಕೆ ಹೇಳುತ್ತೀರಿ?

ಶ್ರೀ ಕೆ.ಹೆಚ್. ಹನುಮೇಗೌಡ: ಅವರು ಹೇಳುತ್ತಿರತಕ್ಕದ್ದು 1972ನೇ ಇಸವಿಯ ವಿಚಾರ. ಮೂವತ್ತು ವರ್ಷಗಳಾಯಿತು. ನನಗೆ ಅವರ ಹಣೆ ಬರಹ ಅವತ್ತೇ ಗೊತ್ತಿತ್ತೆ? ಅವರಿಗೆ ಗೊತ್ತಿತ್ತೇ? ಇವರು ಮುಂದೆ ಇಂಥ ರಿಪೋರ್ಟ್ ಕೊಟ್ಟು ಇಡೀ ರಾಜ್ಯದ ರೈತರ ಶಾಪವನ್ನು ತೆಗೆದುಕೊಂಡು ಮೇಲಕ್ಕೆ ಹೋಗುತ್ತಾರೆಂದು ಗೊತ್ತಿತ್ತೇ? ಯೋಗ್ಯವಾದ ವ್ಯಕ್ತಿ, ರೈತರ ಮನೆಯವರು ಎಂದು ಅವರೂ ಕೈ ಎತ್ತಿದರು, ನಾನೂ ಎತ್ತಿದೆ. ಹಾಗಲ್ಲ ಮನುಷ್ಯ ಮೇಲೆ ಮೇಲಕ್ಕೆ ಹೋದಂತೆ, ಅಧಿಕಾರ ಸಿಕ್ಕಿಸಿಕ್ಕಿದಂತೆ ತಳಪಾಯದ ಜನರಿರುತ್ತಾರಲ್ಲಾ ಅವರ ಬಗ್ಗೆ ಅನುಕಂಪ ಬೇಕು, ಅವರನ್ನು ಕಂಡು ಹೃದಯ ಕರಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದರ ಬಗ್ಗೆ ನಾನು ಹೇಳಲಿಲ್ಲ. ತಾವು ಒಂದು ಪದ ಉಪಯೋಗಿಸಿದರಲ್ಲಾ ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆ ಪದವನ್ನು ಕಡತದಿಂದ ತೆಗೆದಿದ್ದಾರೆ ಅದು ಬೇರೆ ವಿಚಾರ. ಆದರೆ ಅಂದು ಆಯ್ಕೆ ಮಾಡುವಾಗ ತಾವೂ ಇದ್ದೀರಿ ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ನೂರು ಸಲ ಆ ಪದಗಳನ್ನು ವಾಪಸ್ ತೆಗೆದುಕೊಂಡಿದ್ದೇನೆ. ತಪ್ಪಾಯಿತು ಕ್ಷಮಿಸಿ. ನಾನು ಆವೇಶದಲ್ಲಿ ಮಾತನಾಡುವಾಗ ಹಾಗೆ ಹೇಳಿದೆ. ನಾವು ಹಳ್ಳಿಯ ರೈತರು, ನಮಗೆ ನೋವಾದಾಗ ಈ ಉಚ್ಛಮಟ್ಟದ ಸಂಸ್ಕೃತಿಯ ಬಹಳ ನಾಜೂಕಾದ ಪದಗಳಿವೆಯಲ್ಲಾ ಅವುಗಳು ನಮ್ಮ ತಲೆಗೇ ಬರುವುದಿಲ್ಲ. ಅವು ಎಲ್ಲೆಲ್ಲೋ ಹೋಗಿರತ್ತವೆ, ನಮಗೆ ಕಂಡಂತೆ ನಮ್ಮ ಗ್ರಾಮ್ಯ ಭಾಷೆಯಲ್ಲಿ ಮಾತನಾಡುತ್ತೇವೆ. ನಮ್ಮ ಅಳಲನ್ನು ನಾವು ನೋಡಿಕೊಳ್ಳುತ್ತೇವೆ. ನಾನು ಒಬ್ಬ ಹಳ್ಳಿಯವನು, ನಾಲ್ಕು ಅಕ್ಷರ ಕಲಿತಿರಬಹುದು ಇಲ್ಲಿ ಬಂದು ನಿಂತಿರಬಹುದು. ಆದರೂ ನಾನು ಹಳ್ಳಿಯವನು, ಹಳ್ಳಿಯ ರೈತನ ಮಗ. ಆದ್ದರಿಂದ ಅದಕ್ಕೆ ತಕ್ಕಂತೆ ಮಾತನಾಡಿದ್ದೇನೆ, ನಾನು ಮಾತನಾಡಿರುವ ಮಾತುಗಳನ್ನು ವಾಪಸ್ ತೆಗೆದುಕೊಂಡಿದ್ದೇನೆ, ಅದಕ್ಕೆ ಕ್ಷಮಾಪಣೆ ದೇವರಲ್ಲೂ ಉಂಟು, ನಿಮ್ಮಲ್ಲೂ ಉಂಟು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಕೈಮುಗಿದು ಕೇಳಿ ಕೊಳ್ಳುತ್ತೇನೆ, ಕೃಷಿ ಸಚಿವರೂ ಇದ್ದಾರೆ, ಅನುಭವಶಾಲಿ ಖರ್ಗೆಯವರೂ ಇದ್ದಾರೆ, ಕ್ಷಾಮವನ್ನು ಯಾವ ರೀತಿ ನಿರಂತರವಾಗಿ ತಡೆಗಟ್ಟಬಹುದು ಎನ್ನುವುದರ ಬಗ್ಗೆ ಚಿಂತನೆ ಮಾಡಿ ತಜ್ಞರ ಸಲಹೆ ತೆಗೆದುಕೊಂಡು, ತಮ್ಮ ಸರ್ಕಾರದಿಂದ ಕೆಲವು ತಜ್ಞರನ್ನು ಬೇಕಾದರೆ ಚೈನಾಕ್ಕೆ ಕಳುಹಿಸಿ, ಇಸ್ರೇಲ್‌ಗೆ ಕಳುಹಿಸಿ, ಅಲ್ಲಿಗೆ ಕಳುಹಿಸಲು ಹಣವಿಲ್ಲವೆಂದರೆ ಬಸ್ಸು ಹತ್ತಿಸಿ ಮಹಾರಾಷ್ಟ್ರಕ್ಕೆ ಕಳುಹಿಸಿ ಅಲ್ಲಿ ಅಣ್ಣಾ ಹಜಾರೆಯವರು ಮಾಡಿರತಕ್ಕಂಥ ಉಪಯುಕ್ತವಾದ ಕೆಲಸದ ಬಗ್ಗೆ ಮಾಹಿತಿ ತರಿಸಿ ಅದಕ್ಕೆ ಕೋಟಿಗಟ್ಟಲೆ ಹಣವೇನೂ ಬೇಕಾಗಿಲ್ಲ, ಅತ್ಯಲ್ಪ ತಿಳುವಳಿಕೆ ಮಟ್ಟದಲ್ಲಿ ಆ ಭೂಭಾಗವನ್ನು ಸಮೃದ್ಧವಾದ ನಾಡನ್ನಾಗಿ ಮಾಡಿರುವ ಕೀರ್ತಿ ಅವರಿಗೆ ಸಲ್ಲತಕ್ಕದ್ದು. ಅದನ್ನಾದರೂ ನೋಡಿ ಈ ಭಾಗದಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕು, ಕೊನೆಯದಾಗಿ, ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಡ್ಯಾಂಗಳನ್ನು ಏನು ಮಾಡುತ್ತಾರೆ. ಕೆ.ಆರ್.ಎಸ್. ಮಾಡಿದ್ದಾರೆ, ಅದಕ್ಕೆ ಇಡೀ ರಾಜ್ಯದ ಹಣವನ್ನು ಹಾಕುತ್ತಾರೆ. ದೇಶದ ದುಡ್ಡನ್ನೂ ಹಾಕುತ್ತಾರೆ, ನೀರನ್ನು ತೆಗೆದುಕೊಂಡು ಹೋಗಿ ಕೆಳಗಡೆ ಇರುವರಿಗೆ ಕೊಡುತ್ತಾರೆ. ಆ ನೀರು ಎಲ್ಲಿಂದ ಬರುತ್ತದೆ? ಪಶ್ಚಿಮ ಘಟ್ಟದಿಂದ ನಮ್ಮ ಭಾಗದ ಮೂಲಕ ಹರಿದು ಬರುತ್ತದೆ. ಇಂಜಿನಿಯರ್‌ಗಳ ತಕರಾರು, ಸರ್ಕಾರದ ಆದೇಶದಂತೆ ಡ್ಯಾಂ ನ ಮೇಲು ಭಾಗದಲ್ಲಿ ಏನನ್ನೂ ಕಟ್ಟಬಾರದು, ಕೆರೆಗಳನ್ನೂ ಕಟ್ಟಬಾರದು, ಲಿಫ್ಟ್ ಇರಿಗೇಷನ್ ಮಾಡಬಾರದು, ಎಂದು ನೀರೆಲ್ಲಾ ಇಲ್ಲಿಗೆ ಬರುವಂತೆ ಮಾಡುತ್ತಾರೆ. ಹಾಗಾದರೆ ನಮ್ಮ ಗತಿಯೇನು? ಮಾನ್ಯ ಮುಖ್ಯಮಂತ್ರಿಯವರನ್ನು ಈ ಪ್ರಶ್ನೆ ಕೇಳುತ್ತೇನೆ, ಕೆ.ಆರ್. ಸಾಗರದ ಹಿಂದುಗಡೆ ತಾವಿದ್ದೀರಿ, ಆ ನೀರು ಎಲ್ಲಿಂದ ಬಂತು? ನಮ್ಮ ಕಡೆಯಿಂದ ಬಂತು. ನಿಮ್ಮ ಇಂಜಿನಿಯರ್‌ಗಳು ಮೇಲುಭಾಗದಲ್ಲಿ ಯಾವುದೇ ಕಟ್ಟೆ ಕಟ್ಟಬಾರದು, ಕೆರೆ ರಿಪೇರಿ ಮಾಡಬಾರದು, ಲಿಫ್ಟ್ ಇರಿಗೇಷನ್ ಮಾಡಬಾರದೆಂದು ಹೇಳುತ್ತಾರೆ. ಎಲ್ಲಾ ನೀರು ಕೆಳಕ್ಕೆ ಬಂದು ವರ್ಷಕ್ಕೆ ಎರಡು ಬೆಳೆಗೆ ನಿಮಗೆ ನೀರನ್ನು ಕೊಡುತ್ತಾರೆ. ಅವರು ಅನುಕೂಲವಾಗಿ ಬೆಳೆ ಬೆಳೆಯುತ್ತಾರೆ, ಬೆಳೆಯಲ್ಲಿ, ಅವರು ಬೆಳೆದಾದ ಮೇಲೆ ನಾವೂ ಊಟ ಮಾಡುತ್ತೇವೆ. ಆದರೆ ಮೇಲುಗಡೆ ಇರತಕ್ಕಂಥ ಜನ ಈ ದೇಶಕ್ಕೇನು ಅಪರಾಧ ಮಾಡಿದ್ದರು? ಕುಡಿಯಲಿಕ್ಕೆ ನೀರಿಲ್ಲ, ದನ ಕರುಗಳಿಗೆ

ನೀರಿಲ್ಲ ನಾವು ನೆಮ್ಮದಿಯಾಗಿ ಬಾಳಿ ಬದುಕುವಂತಹ ಒಂದು ವ್ಯವಸ್ಥೆಯೂ ಕೂಡ ಇಲ್ಲ. ನೀವು ಡ್ಯಾಮ್ ಕಟ್ಟುವಾಗ, ಇವೆಲ್ಲಾ ವ್ಯವಸ್ಥೆ ಮಾಡುವಾಗ ಮೇಲಿನ ಭೂ ಭಾಗದಿಂದ ಬರತಕ್ಕಂಥ ನೀರು ಆ ಭಾಗದ ಜನಗಳಿಗೆ ಸಿಗಲಿಕ್ಕೆ ಅನುಕೂಲವಾಗುವಂತೆ ಸಣ್ಣ ಸಣ್ಣ ಕಟ್ಟೆ ಕಟ್ಟಿ ಕೊಡಿ. ತೀರಾ ತೊಂದರೆ ಇದ್ದರೆ ಅಲ್ಲಿಗೊಂದು ಲಿಫ್ಟ್ ಇರಿಗೇಷನ್ ಆದರೂ ಹಾಕಿಸಿಕೊಡಿ. ಇಂತಹ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲವೇ? ಯಾವುದೇ ಭಾಗದಿಂದಲಾದರೂ ನೀರನ್ನು ತಂದು ಡ್ಯಾಮ್ ಕಟ್ಟಿ ಅವರು ಬದುಕಿಕೊಳ್ಳುತ್ತಾರೆ. ನಾವೇನು ಅಪರಾಧ ಮಾಡಿದ್ದೇವೆ? ನಾವು ಈ ದೇಶದ ಜನರಲ್ಲವೇ? ನಾವು ಈ ದೇಶಕ್ಕೆ ತೆರಿಗೆ ಅಥವಾ ಕಂದಾಯ ಕಟ್ಟುವುದಿಲ್ಲವೇ? ನಮ್ಮ ಬೆವರಿನಿಂದ ಈ ದೇಶ ಸಮೃದ್ಧವಾಗಿಲ್ಲವೇ? ಇದರ ಬಗ್ಗೆ ದಯವಿಟ್ಟು ಯೋಚನೆ ಮಾಡಿ. ನಾನು 1972 ರಲ್ಲಿ ಇಲ್ಲಿಗೆ ಎಂ.ಎಲ್.ಎ.ಯಾಗಿ ಬಂದಿದ್ದೆ. ಆಗ ಮಾನ್ಯ ಚನ್ನಬಸಪ್ಪನವರು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಆಗಿದ್ದರು. ಆಗ ನಾನು ಅವರಿಗೊಂದು ಪ್ರಶ್ನೆ ಕೇಳಿದ್ದೆ. ಕರ್ನಾಟಕದ ಬೇಸಿನ್‌ನಲ್ಲಿ ಆಗ 3 ಲಕ್ಷ ಚಿಲ್ಲರೆ ಎಕರೆ ನೀರಾವರಿಯಾಗುತ್ತಿತ್ತು. ತಮಿಳುನಾಡಿನಲ್ಲಿ ಆಗ 7 ಲಕ್ಷ ಎಕರೆ ನೀರಾವರಿಯಾಗುತ್ತಿತ್ತು. ಈಗ ಅಲ್ಲಿ 37 ಲಕ್ಷ ಎಕರೆ ನೀರಾವರಿಯಾಗುತ್ತಿದ್ದರೆ, ಇಲ್ಲಿ ಅದು ಇನ್ನೂ 7 ಲಕ್ಷ ಎಕರೆ ನೀರಾವರಿಯಾಗುವ ಹಂತಕ್ಕೆ ಹೋಗಿಲ್ಲ. ಇದಕ್ಕೆ ಕೆಲವು ಭ್ರಷ್ಟ ಇಂಜಿನಿಯರ್‌ಗಳೇ ಕಾರಣರಾಗಿದ್ದಾರೆ. ಅವರು ಕೊಕ್ಕೆ ಹಾಕಿ ಹಾಕಿ ಒಂದು ಪ್ರಾಜೆಕ್ಟ್ ಅನ್ನೂ ಸಹಾ ಮಾಡಲಿಕ್ಕೆ ಬಿಡಲಿಲ್ಲ. ಈಗಲೂ ಕೆಲವರು ಅಂತಹವರು ಇದ್ದಾರೆ. ಇಲ್ಲಿ ಇಷ್ಟು ಟಿ.ಎಂ.ಸಿ ನೀರು ಇದೆ ಅದು ಹಾಗಾಯಿತು, ಇದು ಹೀಗಾಯಿತು ಏನೇನೋ ಹೇಳುತ್ತಿರುತ್ತಾರೆ. ಅವರೇನು ತಮಿಳುನಾಡಿನಿಂದ ದುಡ್ಡು ತೆಗೆದುಕೊಳ್ಳುತ್ತಾರೋ ಏನೋ ಗೊತ್ತಿಲ್ಲ. ಅಂತಹವರನ್ನು ಕಂಡು ಹಿಡಿದು ಜೈಲಿಗೆ ಹಾಕಿಸಿ ಎಂದು ನಾನು ಮಾನ್ಯ ಕೃಷ್ಣ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ತಾವು ಹಾಗೆ ಮಾಡಿದರೆ ಈ ರಾಜ್ಯದ ಜನ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತಾರೆ. ಇದಕ್ಕೆಲ್ಲಾ ಯಾರು ಕಾರಣ? ಇದು ಹೇಗಾಯಿತು? ನೂರಕ್ಕೆ ಅರವತ್ತೆರಡು ಭಾಗ ನೀರು ನಮ್ಮ ಕರ್ನಾಟಕ ರಾಜ್ಯದ್ದೇ. ತಮಿಳುನಾಡಿನ ಪಾಲು ಕೇವಲ ಶೇಕಡ 42 ಭಾಗ ಮಾತ್ರ. ಅವರು ಕೇಳಿದಾಗಲೆಲ್ಲಾ ನಾವು ನೀರು ಬಿಟ್ಟು ನಾವು ಈಗ ಅವರು 37 ಲಕ್ಷ ಎಕರೆ ನೀರಾವರಿ ಮಾಡಿ ಎರಡು ಬೆಳೆ ಬೆಳೆಯುತ್ತಿದ್ದಾರೆ. ನಾವು ಇನ್ನೂ 7 ಲಕ್ಷ ಎಕರೆ ಮುಟ್ಟಲಿಕ್ಕೂ ಕೂಡ ಸಾಧ್ಯವಾಗಿಲ್ಲ. ದೇವರು ನಮಗೆ ಈ ಕಾವೇರಿ ನದಿಯನ್ನು ಕೊಟ್ಟಿರುವುದು ಈ ಭಾಗದ ಜನ ಬದುಕಿ ಬಾಳಲಿ ಎಂದೋ ಅಥವಾ ಇವರು ರಾಜಕೀಯ ಮಾಡಿಕೊಂಡು ಯಾರ ಯಾರದ್ದೋ ಓಟು ತೆಗೆದುಕೊಳ್ಳುವುದಕ್ಕೋ? ಮಾನ್ಯ ವಾಜಪೇಯಿಯವರ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೆ. ಆದರೆ ಅವರೂ ಸಹ ತಮಿಳುನಾಡಿನ ಮುಖ್ಯಮಂತ್ರಿಗಳು ಕೇಳಿದ ತಕ್ಷಣ ನೀರು ಬಿಡಿ ಎಂದು ಕರ್ನಾಟಕಕ್ಕೆ ಡೈರೆಕ್ಷನ್ ಕೊಟ್ಟರು. ಈ ದೇಶದಲ್ಲಿ ಈ ರೀತಿ ಅನ್ಯಾಯ ನಡೆಯಬಹುದೇ? ನಮ್ಮ ಈ ಕಷ್ಟ ಯಾರ ಕೈಯಲ್ಲಿ ಹೇಳೋಣ? ತಮಿಳುನಾಡು ರೈತರು ಮಾಡಿರತಕ್ಕ ಭಾಗ್ಯವೇನು? ನಾವು ಮಾಡಿರತಕ್ಕಂಥ ಪಾಪವೇನು ಇಲ್ಲಿನ ನೀರನ್ನು ಅಲ್ಲಿಗೆ ಬಿಡುತ್ತಿದ್ದಾರೆ ನಮ್ಮ ಗತಿ ಏನು? ಮಳೆ ಇನ್ನೂ ಕಡಿಮೆಯಾದರೆ ನಾವೇನಾದರೂ ಬದುಕಲಿಕ್ಕಾಗುತ್ತದೆಯೇ? ನಾನು ಪೇಪರ್‌ನಲ್ಲಿ ಇಲ್ಲಿಂದ ಹೋಗುವ ನೀರು ಮೆಟ್ಟೂರು ಜಲಾಶಯಕ್ಕೆ ಹೋಗಿ ಅಲ್ಲಿಂದ ಸುಮಾರು 60-70 ಟಿ.ಎಂ.ಸಿ.ಯಷ್ಟು ನೀರು ಅರಬ್ಬಿ ಸಮುದ್ರಕ್ಕೆ ಹೋಗುತ್ತದೆ ಎಂದು ಓದಿದ್ದೇನೆ. ಇದನ್ನು ಏಕೆ ಇವರು ಪ್ರಶ್ನೆ ಮಾಡುವುದಿಲ್ಲ? ಕಾವೇರಿ ಬೇಸಿನ್‌ನ ಮೂರನೇ ಒಂದು ಭಾಗ ನಮ್ಮಲ್ಲಿ ಬಂದರೆ, ಐದನೇ

ಒಂದು ಭಾಗ ಮಾತ್ರ ತಮಿಳುನಾಡಿನಲ್ಲಿ ಬರುತ್ತದೆ. ಮೆಟ್ಟೂರು ಡ್ಯಾಮ್‌ನಿಂದ ಕೆಳಕ್ಕೆ ಅವರು ಉಪಯೋಗಿಸತಕ್ಕಂಥ ಜಲಾನಯನ ಪ್ರದೇಶದಲ್ಲಿ 100 ಟಿ.ಎಂ.ಸಿ. ನೀರು ಇದೆ ಎಂದು ವರ್ಲ್ಡ್ ಬ್ಯಾಂಕ್‌ನವರು ಅಸೆಸ್ ಮಾಡಿ ಹೇಳಿದ್ದಾರೆ. ಅದನ್ನೆಲ್ಲಾ ಗಣನೆಗೆ ತೆಗೆದುಕೊಂಡು ನಮ್ಮ ಪಾಲಿನ ನೀರು ಇಷ್ಟು ಬೇಕಾಗಿದೆ ಎಂದು ಹೇಳಿ ಅದಕ್ಕಾಗಿ ಹೋರಾಟ ಮಾಡಿ ಅದನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲವೇ? ಇಲ್ಲಿ ಬಂದ ನೀರನ್ನೂ ಸಹ ಅವರಿಗೆ ನಾವು ಕೊಟ್ಟುಕೊಂಡು ಹೋದರೆ ಇಲ್ಲಿಯ ಜನ ಬದುಕುವುದು ಹೇಗೆ? ಇವೆಲ್ಲವನ್ನೂ ನೋಡಿ ಸ್ವಲ್ಪ ಈ ರಾಜ್ಯದ ಹಿತದೃಷ್ಟಿಯಿಂದ ಉತ್ತಮವಾಗಿ ಕಾಂಗ್ರೆಸ್ ಸರ್ಕಾರದವರು ಕೆಲಸ ಮಾಡಲಿ. ನಾನೂ ಸಹ ಸ್ವಲ್ಪ ದಿವಸ ಬಿ.ಜೆ.ಪಿ.ಯಲ್ಲಿದ್ದೆ. ಬಿ.ಜೆ.ಪಿ. ಎಂದರೆ ಹಳ್ಳಿಯವರು ಒಂದು ತರಹ ಮಾತನಾಡುತ್ತಾರೆ. ನಾನು ಇರುವ ವಿಚಾರವನ್ನು ಹೇಳುತ್ತಿದ್ದೇನೆ. ಆದರೆ ಕಾಂಗ್ರೆಸ್ ಅಂದರೆ ಎಲ್ಲಾ ವರ್ಗದ ಜನಗಳಿಗೆ ಅದು ನಮ್ಮ ಪಾರ್ಟಿ ಎಂಬ ಬ್ರಾಡ್ ಬೇಸ್ಡ್ ಔಟ್‌ಲುಕ್ ಇದೆ. ಬಿ.ಜೆ.ಪಿ. ಅಂದರೆ ಟೌನ್ಸ್, ಮರ್ಚೆಂಟ್ಸ್, ಅಧಿಕಾರಿಗಳು ಎಂಬ ಭಾವನೆ ಹಳ್ಳಿಯವರಲ್ಲಿ ಇದೆ. ಮಾನ್ಯ ಸುರೇಶ್‌ಕುಮಾರ್‌ರವರೇ, ಇದು ನನ್ನ ಅಭಿಪ್ರಾಯ ಅಲ್ಲ. ಇಂತಹ ಬರಗಾಲದಲ್ಲೂ ಸಹ ನೀರು ಬಿಡಿ ಎಂದು ದೊಡ್ಡ ಸಾಹೇಬರು ಆರ್ಡರ್ ಕೊಟ್ಟಿದ್ದಾರಲ್ಲಾ? ಆಗ ನೀವೇನು ಮಾಡುತ್ತಿದ್ದಿರಿ. ನೀರುಕೊಡಿ ಎಂದು ಏಕೆ ಹೇಳಿದಿರಿ?

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. We should put the records straight. ಮಾನ್ಯ ಪ್ರಧಾನ ಮಂತ್ರಿಗಳು ತಮಿಳುನಾಡಿನ ರೈತರ ಬಗ್ಗೆ ಯೋಚನೆ ಮಾಡಿ, ಅವರಿಗೆ ನೀರು ಬಿಡುವ ಬಗ್ಗೆ ಯೋಚನೆ ಮಾಡಿ ಎಂದು ಕರ್ನಾಟಕಕ್ಕೆ ಮನವಿ ಮಾಡಿದ್ದಾರೆಯೇ ಹೊರತು ಆದೇಶ ಅಥವಾ ಸೂಚನೆಯನ್ನು ಕೊಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. I request the Chief Minister to put the records straight. Sir these things cannot go on like this. ಸುಳ್ಳು ಸುಳ್ಳಾಗಿ ಏನೇನೋ ಹೇಳಿದರೆ ಹೇಗೆ? ಇದರಿಂದ ಏನಾಗುತ್ತದೆ?

ಶ್ರೀ ಕೆ.ಹೆಚ್. ಹನುಮೇಗೌಡ: ಈ ದೇಶದ ಪ್ರಧಾನ ಮಂತ್ರಿಯಾಗಿರುವವರು ಇಡೀ ರಾಷ್ಟ್ರದ ರೈತರ ಹಿತದೃಷ್ಟಿಯನ್ನು ನೋಡಬೇಕಾಗಿತ್ತು. ಅವರು ಆ ರೀತಿಯಾಗಿ ಏಕೆ ಹೇಳಿದರು? ಅವರು ವೆರಿಫೈ ಮಾಡಬೇಕಾಗಿತ್ತು ಅಥವಾ ಕೇಳಿ ತಿಳಿದುಕೊಳ್ಳಬೇಕಾಗಿತ್ತು. ನೀರು ಇದ್ದರೆ ಬಿಡಿ ಎಂದು ಹೇಳಬೇಕಾಗಿತ್ತು.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಸದಸ್ಯರು ಮಾನ್ಯ ಪ್ರಧಾನ ಮಂತ್ರಿಗಳು ಏನು ಹೇಳಿದ್ದಾರೆ ಎಂಬುದನ್ನು ತಿಳಿದುಕೊಂಡು ಮಾತನಾಡಬೇಕು.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಹನುಮೇಗೌಡರು ಮಾನ್ಯ ಪ್ರಧಾನ ಮಂತ್ರಿಗಳು ಏನು ಹೇಳಿದ್ದಾರೆ ಎಂಬುದನ್ನು ತಿಳಿದುಕೊಂಡು ಮಾತನಾಡಿದರೆ ಒಳ್ಳೆಯದು. ಇಡೀ ರಾಜ್ಯದ ಜನತೆಗೆ ತಪ್ಪು ಸಂದೇಶ ಹೋಗಬಾರದು. ಅವರು ಸ್ವಲ್ಪ ಹೆಚ್ಚು ಕಡಿಮೆ ಸ್ಥಿತ್ಯಂತರವಾಗಿದ್ದಾರೆ. ಆ ಹಿನ್ನೆಲೆಯಲ್ಲಿ ಅವರು ಮಾತನಾಡುತ್ತಾ ಏನೇನೋ ಹೇಳಿದರೆ ಅದು ಸರಿಯಾಗುವುದಿಲ್ಲ. ಅವರು ಹಾಗೆ ಹೇಳಬಾರದು. ಹಿಂದೆಯೆಲ್ಲಾ

ಸೆಂಟ್ರಲ್ ಗೌರ್ನಮೆಂಟ್ ಬಗ್ಗೆ ಮಾನ್ಯ ಹನುಮೇಗೌಡರು ಒಳ್ಳೆಯ ಮಾತನಾಡುತ್ತಿದ್ದರು. ಈಗ ಸ್ವಲ್ಪ ವ್ಯತ್ಯಾಸವಾಗಿ ಮಾತನಾಡುವ ಹಿನ್ನೆಲೆಯಲ್ಲಿ ಸತ್ಯ ತಿಳಿದುಕೊಂಡು ಸಹಜತೆ ಏನು ಇದೆ ಎಂಬುದನ್ನು ಅವರು ಮಾತನಾಡಬೇಕು. ಪ್ರಧಾನ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಹೇಳಿದ್ದಾರೆ ಎಂಬುದನ್ನು ಸರಿಯಾದ ರೀತಿಯಲ್ಲಿ ಹೇಳಬೇಕು.

ಶ್ರೀ ವಿ. ಪಾಪಣ್ಣ: ಮಾನ್ಯ ಉಪಾಧ್ಯಕ್ಷರೇ, ಈ ರಾಷ್ಟ್ರದ ರೈತರ ಬಗ್ಗೆ ಅವರ ಚಿಂತನೆ ಎಷ್ಟಿತ್ತು ಎಂದು ಪ್ರಧಾನ ಮಂತ್ರಿಗಳು ಹೇಳಿರುವುದನ್ನು ನಾನು ನನ್ನ ಭಾಷಣದಲ್ಲಿ ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ: ಮಾನ್ಯಉಪಾಧ್ಯಕ್ಷರೇ, ನಾನು ಹೇಳಿದ ಉದ್ದೇಶ ಏನೆಂದರೆ, ನನಗೇನೂ ವ್ಯವಸ್ಥೆ ಇಲ್ಲ. ಮದ್ರಾಸ್‌ನಲ್ಲಿ ಏನಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಒಬ್ಬ ಪ್ರಧಾನ ಮಂತ್ರಿಗಳಾದವರಿಗೆ ಇಡೀ ರಾಜ್ಯದ ಸ್ಥಿತಿಗತಿಗಳ ಬಗ್ಗೆ ಇನ್‌ಫರ್‌ಮೇಷನ್ ಕೊಡತಕ್ಕ ವ್ಯವಸ್ಥೆ ಇರುತ್ತದೆ. ಅವರು ಹಾಗೆ ಹೇಳುವುದಕ್ಕೆ ಮೊದಲು ಅಲ್ಲಿ ನೀರು ಇದೆಯೇ? ಇದ್ದರೆ ಎಷ್ಟು ಇದೆ? ಅಲ್ಲಿರುವ ಕೆರೆಗಳು ತುಂಬಿದೆಯೇ? ಅಲ್ಲಿ ಮಳೆ ಬಿದ್ದಿದೆಯೇ? ಜನಗಳ ಬವಣೆ ಏನು ಎಂದು ಯೋಚನೆ ಮಾಡಿ ಅವರು ಹೇಳಬೇಕಾಗಿತ್ತು ಎನ್ನುವ ವಿಚಾರಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಯೇ ವಿನಃ, ಅವರ ಮೇಲೆ ಹೇಳಿ ನನಗೆ ಆಗಬೇಕಾಗಿರುವುದೇನು? ಮೇಲಕ್ಕೆ ಹೋದಂತಹವರು ಕೆಳಮಟ್ಟದವರು ಏನಾಗಿದ್ದಾರೆ ಎಂಬುದನ್ನು ನೋಡುತ್ತಿರಬೇಕು. ಆ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆಯೇ ವಿನಃ ಅವರು ಅದನ್ನು ಬೇರೆ ರೀತಿಯಾಗಿ ಅಪಾರ್ಥ ಮಾಡಿಕೊಳ್ಳಬಾರದು ಅವರು ತಿಳಿದುಕೊಳ್ಳದೇ ಹೇಳುವುದು ಸರಿಯಲ್ಲ. ನಾನು ರೈತರ ಮನೆಯಿಂದ ಬಂದವನು. ರೈತರ ಪರಿಸ್ಥಿತಿ ಈಗ ಏನಾಗಿದೆ? ಈಗ ನಾವು ಸರ್ವ ನಾಶವಾಗಿ ಹೋಗುತ್ತಿದ್ದೇವಲ್ಲಾ. ಪರದೇಶದಿಂದ ಎಲ್ಲವನ್ನೂ ತಂದು ಇಲ್ಲಿಗೆ ಹಾಕುತ್ತಿದ್ದಾರೆ. ಒಂದು ತೆಂಗಿನಕಾಯಿಗೆ 1 - 150 ರೂ. ಆಗಿದ್ದಾಗ ಅಮ್ಮನವರು ಬಹಳ ರುಚಿ ರುಚಿಯಾಗಿದೆ ಎಂದು ಚಟ್ನಿ ಮಾಡುತ್ತಾರೆ. ಇನ್ನು ನಾಲ್ಕು ವರ್ಷ ಹೋದ ಮೇಲೆ ಅದರ ಬೆಲೆ 10 ರೂಪಾಯಿ ಆದಾಗ ನಿಮಗೆ ಗೊತ್ತಾಗುತ್ತದೆ ಎಂದು ನಾನು ಇದೇ ಸದನದಲ್ಲಿ ಆ ಕಡೆಗೆ ಇದ್ದಾಗ ಹೇಳಿದ್ದೆ. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ, ಏನಾದರೂ ಮಾಡಬೇಕಾದರೆ ಇಡೀ ದೇಶದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಆ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಿದ್ದೇನೆಯೇ ವಿನಃ ಅವರು ಬೇಕು ಎಂದೇ ಮಾಡಿದ್ದಾರೆ ಎಂದು ಇನ್ನಾವ ಅಪಾರ್ಥ ಕಲ್ಪಿಸಿ ನಾನು ಹೇಳಲಿಲ್ಲ. ಅವರೂ ಆದೇಶ ಕೊಟ್ಟರು. ಇಲ್ಲಿಯೂ ಮಳೆ ಹೋಯಿತು. ನಮ್ಮ ಕಥೆ ಕೇಳುವವರು ಯಾರು? ಒಂದು ಪಕ್ಷ ಅವರು ಬಿಟ್ಟಿದ್ದರೆ, ನಾವು ಏನು ಮಾಡಬೇಕಾಗಿತ್ತು? ಹೇಮವತಿ ಅಣೆಕಟ್ಟೆನಲ್ಲಿ ಒಂದು ಅಡಿ ಮಾತ್ರ ನೀರು ಇದೆ. ಇನ್ನು ನಾಲ್ಕೈದು ದಿವಸ ಹೋದರೆ ಕುಡಿಯಲಿಕ್ಕೆ ನೀರೂ ಕೂಡ ಸಿಗುವುದಿಲ್ಲ. ಮೇಲಿನಿಂದ ಆದೇಶ ಬಂದು ನೀರನ್ನು ಬಿಟ್ಟಿದ್ದರೆ ನಾವು ನೀರು ಕುಡಿಯಲು ಎಲ್ಲಿಗೆ ಹೋಗಬೇಕಾಗಿತ್ತು? ದೊಡ್ಡವರು ಏನು ಹೇಳಿದರೂ ಅದೇ ಅರ್ಥ ಕೊಡುತ್ತದೆ. ಅವರು ಹೇಳಿದ್ದಾರೆಂದರೆ ಓಡಾಡಿಕೊಂಡು ಮಾಡುತ್ತಾರೆ. ನಾನು ಚಿಕ್ಕ ಹುಡುಗನಾಗಿದ್ದಾಗ, ಶ್ಯಾನುಭೋಗರು ಏನಾದರೂ ತರಕಾರಿಗೆ ಹೇಳಿ ಕಳುಹಿಸಿದ್ದರೆ, ನಾವುಗಳು ಮನೆಯಲ್ಲಿ ಇದ್ದಿದ್ದು, ಇಲ್ಲದ್ದು, ಪಕ್ಕದ ಹೊಲದ್ದು ಎಲ್ಲವನ್ನೂ ಸೇರಿಸಿ ಅವರ ಮನೆಗೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದವು. ಅಂತಹ ವ್ಯವಹಾರವೇ ಇದು. ಈ ತರಹದ ವ್ಯವಹಾರವಲ್ಲ ಎಂದು ನೀವು ಹೇಳುವುದಾದರೆ, ಅವರು

ಏಕೆ ಹಾಗೆ ಹೇಳಿದರು? ಏಕೆ ನೀರು ಬಿಡಿ ಎಂದು ಹೇಳಿದರು. ಎಂಬುದನ್ನು ಹೇಳಿ ನೋಡೋಣ. ಹೇಳುವವರು ಕೇಳುವವರು ಯಾರು ಇಲ್ಲವೆಂದು ಆದೇಶ ಕೊಡುತ್ತಾ ಹೋಗುವುದೇ? ಚನ್ನಪಟ್ಟಣದ ಕಡೆಗೆ ಹೋಗಿ ಬಂದರೆ ರೈತರ ಕಷ್ಟ ಏನು ಎಂಬುದು ಗೊತ್ತಾಗುತ್ತದೆ. ವಿಷಯ ಎಲ್ಲೆಲ್ಲೋ ಹೋಗುತ್ತಿದೆ. ನಾನು ಜಾಸ್ತಿ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಈ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಬರಗಾಲಕ್ಕೆ ಶಾಶ್ವತವಾಗಿ ಪರಿಹಾರ ಒದಗಿಸುವುದಕ್ಕೆ ಅನೇಕ ಮಾರ್ಗಗಳಿವೆ. ಅದನ್ನು ಚಿಂತನೆ ಮಾಡಿ, ಜಾರಿಗೊಳಿಸಿ ಅವರು ಕೀರ್ತಿಶಾಲಿಗಳಾಗಬೇಕು. ಹೊರ ದೇಶದಲ್ಲಿ ಬೇರೆ ಕಡೆ ಏನೇನು ಬರ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಂಡು ದೇಶ ಹೇಗೆ ನೆಮ್ಮದಿಯಾಗಿ ಇರುವಂತೆ ಮಾಡಿದ್ದಾರೆ ಎಂಬುದನ್ನೂ ಸಹ ನೋಡಬೇಕು. ನೀರಿನ ಮೇಲೆ ನಮ್ಮ ಹಕ್ಕು ಶೇಕಡ 62ರಷ್ಟು ಇದೆ. ನಮಗೆ ಎಷ್ಟು ನೀರು ಬರಬೇಕೋ ಅದನ್ನು ಉಳಿಸಿಕೊಳ್ಳಲು ಹೋರಾಟ ಮಾಡಬೇಕು. ಅದನ್ನು ಕೇಳುವ ಹಕ್ಕು ನಮಗೆ ಇದೆ. ಈ ಭಾಗದ ರೈತರು ಬಾಳಿ ಬದುಕಲಿ ಎಂದು ದೇವರು ನಮಗೆ ಕೊಟ್ಟಿರುವ ಕಾವೇರಿ ನೀರನ್ನು ರಾಜಕೀಯ ಕಾರಣಕ್ಕಾಗಿ ಯಾರ್ಯಾರಿಗೋ ಧಾರೆ ಎರೆಯುವುದಕ್ಕಾಗುತ್ತದೆಯೇ? ಇದೇನು ಹಡಬಿಟ್ಟಿ ಮನೆಯದೇ? ಯಾರೂ ಹೇಳುವವರು ಕೇಳುವವರು ಇಲ್ಲವೇ? ಇಷ್ಟು ಮಾತುಗಳನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಏನಾದರೂ ಮಾಡಿಕೊಳ್ಳಿ, ಆ ಪಾಪ ಪುಣ್ಯ ನಿಮಗೆ ಬಿಟ್ಟಿದ್ದು.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ, ರೆಕಾರ್ಡ್ಸ್ ಸ್ಟ್ರೇಟ್ ಮಾಡತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಪ್ರಧಾನ ಮಂತ್ರಿಗಳು ನನಗೆ ಡೈರೆಕ್ಷನ್ ಕೊಡಲಿಲ್ಲ, ಪ್ರಧಾನ ಮಂತ್ರಿಯವರು ಸೂಚನೆ ಮಾಡಿದರು. ತಮಿಳುನಾಡು ಮತ್ತು ಕರ್ನಾಟಕದ ಜನಗಳ ಮಧ್ಯೆ ಇರತಕ್ಕಂಥ ಸೌಹಾರ್ದಯುತವಾದಂತಹ ಸಂಬಂಧವನ್ನು ಮತ್ತೂ ಹೆಚ್ಚು ಮಾಡತಕ್ಕಂಥ ದೃಷ್ಟಿಯಿಂದ ಗುಡ್‌ವಿಲ್‌ಗೋಸ್ಕರ ಮೂರು ಟಿ.ಎಂ.ಸಿ.ಯಷ್ಟು ನೀರು ಬಿಡಲಿಕ್ಕೆ ಸಾಧ್ಯವೇ, ಯೋಚನೆ ಮಾಡಿ ಎಂದು ಹೇಳಿದರು. ಅವರಿಗೆ ತಿಳಿಸಿದೆ, ನಮ್ಮ ರಾಜ್ಯದಲ್ಲಿ ಇರತಕ್ಕಂತಹ ಜಲಾಶಯಗಳ ನೀರಿನ ಮಟ್ಟ ಇವುಗಳೆಲ್ಲವನ್ನು ತಿಳಿದು ಅವರಿಗೆ ನಮ್ಮ ಪ್ರತಿ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದೆ. ಈ ಮಧ್ಯೆ ತಮಿಳುನಾಡಿನ ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿದರು, ನಾನು ಕರ್ನಾಟಕದವರನ್ನು ಕೇಳುವುದಿಲ್ಲ, ನಾನು ಸುಪ್ರೀಂ ಕೋರ್ಟಿಗೆ ಕೇಳುತ್ತೇನೆಂದು ತಿಳಿಸಿದರು. ಇದು ನಡೆದಿರತಕ್ಕಂತಹ ವೇರಿಯಸ್ ಸ್ಟೇಜ್‌ಗಳು.

ಶ್ರೀ ಕೆ. ಹೆಚ್. ಹನುಮೇಗೌಡ: ಹೇಮವತಿ ಹಾರಂಗಿ ಜಲಾಶಯಗಳನ್ನು ಕಟ್ಟಿರುವುದು ಕರ್ನಾಟಕದ ದುಡ್ಡಿನಲ್ಲಿ. ತಮಿಳುನಾಡಿನವರದ್ದು ಒಂದು ನಯಾಪೈಸೆ ಇಲ್ಲ, ಕೇಂದ್ರ ಸರ್ಕಾರದವರೂ ಕೂಡ ಮೂರು ಕಾಸೂ ಕೊಟ್ಟಿಲ್ಲ. ಡ್ಯಾಂ ಕಟ್ಟಿ ನೀರು ಸ್ಟೋರ್ ಮಾಡಿದ ಮೇಲೆ ಅವರು ಕೇಳಿ ಕೇಳಿದ ಹಾಗೆಲ್ಲಾ ನೀರು ಕೊಡುವುದಕ್ಕೆ ಇರುವುದಾ? ಅವರು ಯಾರು ಕೇಳುವುದಕ್ಕೆ? ಅವರು ದುಡ್ಡು ಕೊಟ್ಟಿದ್ದಾರಾ? ಕೇಂದ್ರದವರು ಕೊಟ್ಟಾರಾ? ಒಂದು ನಯಾಪೈಸೆ ಕೊಟ್ಟಿಲ್ಲ. ಇವತ್ತು ದಿ. ಶ್ರೀ ವೀರೇಂದ್ರ ಪಾಟೀಲ್ ಅವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ಆ ಕಾಲದಲ್ಲಿ ಕೂಡ ಹೀಗೆಯೇ ಇಂಜಿನಿಯರ್‌ಗಳು ಅದು - ಇದು ಎಂದು ಸುಮ್ಮನೆ ಕೊಕ್ಕೆ ಹಾಕಿಕೊಂಡು ಕುಳಿತಿದ್ದರಂತೆ. ನಮ್ಮ

ದೇಶದ ದುಡ್ಡು ಹಾಕಿ ನಾವು ಕಟ್ಟಿಕೊಳ್ಳುತ್ತೇವೆ, ನಮ್ಮ ರೈತರಿಗೆ ಅನುಕೂಲವಾಗುತ್ತದೆ ಎಂದು ಆ ಪುಣ್ಯಾತ್ಮರು ಕಟ್ಟಿದರು. ಇವತ್ತು ನೀರು ನಿಂತಿದೆ. ಅದಕ್ಕೆ ತಮಿಳುನಾಡಿನವರು ಹಿಂದೆ ಹಿಂದೆ ಬಿದ್ದಿದ್ದಾರೆ. ಎಲ್‌ಓಸಿ ಇಲ್ಲ, ದುಡ್ಡು ಇಲ್ಲ, ಅದು ಇಲ್ಲ, ಇದು ಇಲ್ಲ ಎಂದು ಹೇಳುತ್ತಿದ್ದಾರೆ. ಮಾನ್ಯ ಬೈರೇಗೌಡರಿಗೆ ಕೇಳುತ್ತಿದ್ದೇನೆ, ವಾಟರ್ ಟ್ರಿಬ್ಯುನಲ್ ಅವರ ಕಾಲದಲ್ಲಿಯೇ ಆಗಿದ್ದು. ತಮಿಳುನಾಡಿನಿಂದ ಸ್ವಲ್ಪ ದುಡ್ಡು ಕೊಡಿಸಲಿ ನೋಡೋಣ? ಯಾರೋ ಕಟ್ಟಿ ಯಾರೋ ತ್ಯಾಗ ಮಾಡಿರುವುದಕ್ಕೆ ಎಲ್ಲಾ ಹಿಸ್ಸೆ ಕೇಳುವವರೇ. ಕೇಂದ್ರದವರು ಏಕೆ ಕೊಡಲಿಲ್ಲ? ಕೇಂದ್ರದವರೂ ಕೊಡಲಿ, ತಮಿಳುನಾಡಿನವರು ಕೊಡಲಿ ಆಗ ನೀರು ಹಂಚಿ, ಯಾರು ಬೇಡ ಎನ್ನುತ್ತಾರೆ? ಕರ್ನಾಟಕ ರಾಜ್ಯದ ಬಡವರು ಕೊಟ್ಟಿರತಕ್ಕಂತಹ ತೆರಿಗೆ ದುಡ್ಡಿನಲ್ಲಿ ಕಟ್ಟಿರುವ ಡ್ಯಾಂನಲ್ಲಿ ನೀರು ಸ್ಟೋರ್ ಮಾಡಿಕೊಂಡು ಅವರು ಕೇಳಿ ಕೇಳಿದ ಹಾಗೆಲ್ಲಾ ನೀರು ಕೊಡುವುದು; ಇದು ನ್ಯಾಯವಾ? ಧರ್ಮವಾ? ಬರ ಬಂದು ಜನ ಸಾಯುತ್ತಿದ್ದಾರೆ, ನಮ್ಮ ಸಹಾಯಕ್ಕೆ ಬರುವವರು ಯಾರು? ರೈತರು ಸಾಯುತ್ತಿದ್ದಾರೆ, ಬರ ಬಂದಿದೆ ಎಂದು ಕೇಂದ್ರದವರು ಎಷ್ಟು ದುಡ್ಡು ಕೊಟ್ಟರು? ಹೋದ ವರ್ಷದಿಂದ ಬೇಕಾದಷ್ಟು ಸ್ಟೇಟ್ ಮೆಂಟ್‌ಗಳು ಬಂದವು ಅಲ್ಲಿಂದ ಕೂಡ ಹಣ ಬಂದಿಲ್ಲ. ತಮಿಳುನಾಡಿನಿಂದ ಕೂಡ ಹಣ ಕೊಟ್ಟಿಲ್ಲ ಇವೆಲ್ಲಾ ಮಾತನಾಡಿದರೆ ತಪ್ಪಾಗುತ್ತದೆ. ಈ ದೇಶಕ್ಕೋಸ್ಕರ ತೆರಿಗೆ ಕೊಟ್ಟವರಿಗೆ ಆಹಾರ ಬೆಳೆದು ಕೊಡುವವರಿಗೆ ಸಂಕಟವಾಗುವುದಿಲ್ಲವಾ?

ಶ್ರೀ ಪಿ. ಜಿ. ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಧ್ಯೆ ಪ್ರವೇಶಿಸಿದ್ದರಿಂದ ನಾನು ಒಂದು ವಿವರಣೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಸಾಮಾನ್ಯವಾಗಿ ಡಿಸ್ಟ್ರೆಸ್ ಈಯರ್ ಮತ್ತು ಇಂಟರ್ ಸ್ಟೇಟ್ ಪ್ರಾಬ್ಲಮ್ ಲಾ ಅಂಡ್ ಆರ್ಡರ್ ಪ್ರಾಬ್ಲಮ್ಸ್ ಬಂದಾಗ ಮಾನ್ಯ ಮುಖ್ಯ ಮಂತ್ರಿಗಳು ಸರ್ವ ಪಕ್ಷದ ನಾಯಕರನ್ನು ಕರೆದು ಸಮಾಲೋಚನೆ ಮಾಡಿ ವಸ್ತು ಸ್ಥಿತಿ ಬಗ್ಗೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡತಕ್ಕಂತಹವರು ಈ ಸಾರಿ ಏಕೋ ಹಾಗೆ ಮಾಡಲಿಲ್ಲ. ನಾವು ಅತ್ತೂ ಕರೆದು ಕಳುಹಿಸಿಕೊಳ್ಳುವುದಕ್ಕೆ ಹೋಗಲಿಲ್ಲ, ನಾವು ಡಿಸ್ಟ್ರೆಸ್ ಈಯರ್ ಇದೆ ಎಂದು ತಿಳಿದುಕೊಂಡಿರತಕ್ಕಂಥವರು. ಆದರೆ ಒಂದು ಸುದ್ಧಿ ಏನೆಂದರೆ, ಕಬಿನಿ ಜಲಾಶಯದಿಂದ ಸ್ವಲ್ಪ ಮಟ್ಟಿನ ನೀರನ್ನು ವಿಶ್ವಾಸಕ್ಕೋಸ್ಕರ ಬಿಟ್ಟಿದ್ದಾರೆಂದು ಸುದ್ದಿ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಈ ರಾಜ್ಯದ ಜನತೆಗೆ ಸ್ಪಷ್ಟೀಕರಣ ಕೊಡಬೇಕೆಂದು ನಮ್ಮ ಮೂಲಕ ಬಯಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ: ಇದುವರೆಗೆ ನಾವು ನೀರನ್ನು ಬಿಡಲಿಕ್ಕೆ ಸಾಧ್ಯವಾಗಿಲ್ಲ. ಕಬಿನಿಯಿಂದ ಕೂಡ ನೀರು ಬಿಡುವುದಕ್ಕೆ ಸಾಧ್ಯವಾಗಿಲ್ಲ, ಬೇರೆ ಜಲಾಶಯಗಳಿಂದ ಕೂಡ ನಾವು ನೀರು ಬಿಡಲಿಕ್ಕೆ ಸಾಧ್ಯವಾಗಿಲ್ಲ. ಆದರೆ ಪರಿಸ್ಥಿತಿಯನ್ನು ನಾವು ಮಾನಿಟರ್ ಮಾಡುತ್ತಿದ್ದೇವೆ. ನಮ್ಮ ಸ್ಥಿತಿಗಳು ಅನುಕೂಲವಾದಾಗ ನೀರನ್ನು ಬಿಡತಕ್ಕಂಥದ್ದರಲ್ಲಿ ಯಾವ ತಕರಾರೂ ಇಲ್ಲ. ವಿರೋಧ ಪಕ್ಷದವರನ್ನು ಯಾವಾಗಲೂ ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ. ಅದರಲ್ಲಿಯೂ ಅಂತರರಾಜ್ಯ ನೀರು ಅಥವಾ ಗಡಿ ಈ ವಿಚಾರಗಳಲ್ಲಿ ಏಕ ಮನಸ್ಸಿನಿಂದ ನಾವು ಕೆಲಸ ಮಾಡಿದ್ದೇವೆ. ವಿಶೇಷವಾದ ಬೆಳವಣಿಗೆಗಳೇನೂ ಇಲ್ಲವಾದ ಕಾರಣ ನಾನು ಆ ಸಭೆಯನ್ನು ಕರೆಯುವುದಕ್ಕೆ ಹೋಗಲಿಲ್ಲ. ಆದರೆ ಸಭೆ ಅಗತ್ಯ ಬಿದ್ದಾಗ ತಮ್ಮೆಲ್ಲರನ್ನೂ ಕೂಡ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆಂದು ತಿಳಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಮುಖ್ಯ ಮಂತ್ರಿಗಳು ವಿರೋಧ ಪಕ್ಷದವರ ಸಭೆ ಕರೆಯದೆ ಇರುವುದಕ್ಕೆ ಆಕ್ಷೇಪ ವ್ಯಕ್ತಮಾಡಿಲ್ಲ, ತಾವು ಎಲ್ಲೋ ಈ ರೀತಿ ಮಾತನಾಡುವಂತಹ ಸಂದರ್ಭದಲ್ಲಿ ಮೆಷರಿಂಗ್ ಸ್ಟೇಷನ್ ಏನಿದೆ, ಬಿಳಿಗುಂಡ್ಲು ಅಥವಾ ಅವರ ಜಲಾಶಯ ಇದೆಯಲ್ಲಾ ಮೆಟ್ಟೂರು ಅದರ ಬಗ್ಗೆ ತಾವು ಒಂದು ಕಡೆ ಹೇಳಿದ್ದೀರಿ, ವಸ್ತು ಸ್ಥಿತಿಯಲ್ಲಿ ನೀವು ಇವತ್ತು ಉತ್ತರವನ್ನು ಕೊಡತಕ್ಕಂಥ ಕಾಲದಲ್ಲಿ ಮಾತನಾಡತಕ್ಕಂತಹ ಧ್ವನಿಯಲ್ಲಿ ಕೂಡ ನೋಡಿದಾಗ ಏಕೋ ಸ್ವಲ್ಪ ನೀರು ಬಿಟ್ಟಿರುವ ಹಾಗೆ ಕಾಣುತ್ತಿದೆ. ಆ ರೀತಿ ಯಾವುದೇ ಒತ್ತಡ ಬಂದರೂ ಈವತ್ತಿನ ಪರಿಸ್ಥಿತಿಯಲ್ಲಿ ತಾವು ದಯವಿಟ್ಟು ಯಾವುದೇ ಕಾರಣಕ್ಕೂ ನೀರು ಬಿಡಬಾರದು ಎಂಬುದು ನಮ್ಮ ಆಗ್ರಹ.

ಶ್ರೀ ಎಸ್.ಎಂ. ಕೃಷ್ಣ: ಹಿಂದೆ ನೀರು ಬಿಟ್ಟ ನಿದರ್ಶನಗಳಿವೆ.

ಶ್ರೀ ಡಿ. ಬಿ. ಚಂದ್ರೇಗೌಡ: ನೀರು ಬಿಡುವುದಕ್ಕೆ ಮಾನ್ಯ ಹನುಮೇಗೌಡರು ಹೇಳಿದ ಹಾಗೆ ನೀರು ತಳ ಮುಟ್ಟಿದೆ. ನಾವು ಗೇಟ್ ತೆಗೆದರೂ ನೀರು ಹೋಗುವುದಿಲ್ಲ. ಇನ್ನು ನೀರು ಬಿಡುವ ಪ್ರಶ್ನೆ ಎಲ್ಲಿ ಇದೆ? ಮಾತನ್ನು ಅವರಿಗೆ ಹೇಳಿದ್ದೇವೆ. ಇನ್‌ಫ್ಲೋ ಎಷ್ಟಿದೆ, ಔಟ್ ಫ್ಲೋ ಎಷ್ಟು ಇದೆ ಎಂದು ನೋಡಿದ್ದೇವೆ. ನೀರು ಬಿಡುವುದಕ್ಕೆ ಸಾಧ್ಯವೇ ಇಲ್ಲವೆಂದು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ನೀರು ಹೆಚ್ಚು ಕಡಿಮೆ ಡೆಡ್ ಸ್ಟೋರೇಜ್‌ಗೆ ಬಂದಿದೆ. ಈಗ ಒಂದು ವಾರದಿಂದ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ಗೇಟ್ ತೆಗೆದರೂ ನೀರು ಹೋಗಲಾರದ ಸ್ಥಿತಿ ಇದೆ ಎಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ನಾನು ಮಾತನ್ನು ಆರಂಭ ಮಾಡುವುದಕ್ಕಿಂತ ಮೊದಲು ಕಾವೇರಿ ನೀರನ್ನು ಬಿಡಬೇಕೆಂದು ಕೇಂದ್ರದಿಂದ ಆದೇಶ ಬಂದಿದೆ ಎಂದು ಕಳೆದ ಹಲವಾರು ದಿನಗಳಿಂದ ಮಾಧ್ಯಮಗಳಲ್ಲಿ ಒಂದು ದೊಡ್ಡ ಸುದ್ದಿ ಇದೆ. ಕರ್ನಾಟಕ ರಾಜ್ಯದ ಜನತೆಗೆ ಏನೇನೋ ಸಂದೇಶ ಹೋಗುತ್ತಿದೆ. ನೀರಿನಲ್ಲಿ ರಾಜಕಾರಣ ಮಾಡುವ ಜನ ಇದನ್ನು ಎಲ್ಲಾ ಮಾಡುತ್ತಿದ್ದಾರೆ. ಅದಕ್ಕೆ ಒಂದು ಇತಿಶ್ರೀ ಹಾಡಿರತಕ್ಕಂತಹ, ಕೇಂದ್ರದಿಂದ ಏನು ಪತ್ರವನ್ನು ಬರೆದಿದ್ದಾರೆಂದು ಅದರ ನೈಜತೆಯನ್ನು ಹೇಳಿರತಕ್ಕಂತಹ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸದನದ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು ಕರ್ನಾಟಕ ರಾಜ್ಯದ ಸುಮಾರು ಏಳು ಜಿಲ್ಲೆಗಳಲ್ಲಿ ನೈರುತ್ಯ ದುರ್ಬಲಗೊಂಡಿದ್ದರಿಂದ 82 ತಾಲ್ಲೂಕುಗಳು ಬರದ ಬಾಯಿಯಲ್ಲಿವೆ. 44 ತಾಲ್ಲೂಕುಗಳಲ್ಲಿ ಮಳೆಯಾಗಿಲ್ಲ. ಇದು ಬಹಳ ಆತಂಕಕರವಾಗಿರತಕ್ಕಂತಹ ಸಂಗತಿ. ಮಳೆ ಆಗದೆ ಇದ್ದಾಗ ಯಾರನ್ನೋ ಕಾರಣ ಎಂದು ಸರ್ಕಾರವನ್ನು ದೂಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಧಿಕಾರದಲ್ಲಿ ಇದ್ದವರು ನಾವು, ನೀವು, ಇನ್ನೊಬ್ಬರು ಇದಕ್ಕೆ ಹೊಣೆಗಾರರು ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಇದು ಯಾರ ಕೈಯಲ್ಲಿ ಕೂಡ ಇಲ್ಲ. ಪ್ರಕೃತಿ ಮುಂದೆ ಇದೆ. ನೀವು ಅಧಿಕಾರಕ್ಕೆ ಬಂದಾಗಿನಿಂದ ಇದೇ ಆಗುತ್ತಿದೆ ಎಂಬ ಒಂದು ಆತಂಕ. ಆದ್ದರಿಂದ ನನ್ನ ವಿನಂತಿ ಇಷ್ಟೆ, ಮಂತ್ರಿಗಳು, ಮುಖ್ಯ ಮಂತ್ರಿಗಳು ಬೇರೆ ಬೇರೆ ದೇವಸ್ಥಾನಗಳಿಗೆ ಹೋಗಿ ಪೂಜೆ ಪುರಸ್ಕಾರ ಮಾಡುವಾಗ ಬರ ಕೂಡ ನೀಗಿಸಲಿ ಎಂದು ಪೂಜೆ ಮಾಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ. ಈ ರೀತಿ ಆಗಿ ಏನಾದರೂ ಮಳೆ

ಬರುವುದಾದರೆ ಬರಲಿ. ಮಳೆ ಕಡಿಮೆಯಾದರೆ ಅನೇಕ ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆ. ಮೊದಲನೆಯದಾಗಿ ಕುಡಿಯುವ ನೀರು, ಎರಡನೆಯದಾಗಿ ಜಾನುವಾರುಗಳಿಗೆ ಮೇವು ಮತ್ತು ನೀರು, ಮೂರನೆಯದಾಗಿ ವಿದ್ಯುತ್ ಉತ್ಪಾದನೆ ಅದರ ಮೇಲೆಲ್ಲಾ ಸಾಕಷ್ಟು ದುಷ್ಪರಿಣಾಮ ಬೀರುತ್ತದೆ. ಬೇಸಾಯದ ಪರಿಸ್ಥಿತಿಯಂತೂ ನಾವು ಹೇಳುವ ಹಾಗಿಲ್ಲ. ನಮ್ಮ ಹಿರಿಯರು ಅನೇಕ ಜನ ಮಾತನಾಡಿದಾದರೆ. ಇವತ್ತು ಈ ರಾಜ್ಯದಲ್ಲಿ ಈ ಪರಿಸ್ಥಿತಿ ಆಗುತ್ತದೆ. ಎಂದು ಯಾರೂ ಕೂಡ ಎಣಿಸಿರಲಿಲ್ಲ. ಕಳೆದ ಸಾರಿ ಕೂಡ ಇದೇ ಪರಿಸ್ಥಿತಿ ಇತ್ತು. ಆದರೂ ಕೂಡ ಹೆಚ್ಚು ಕಡಿಮೆ ನಿಭಾಯಿಸಿದ್ದಾರೆ. ಆದರೆ ಈ ವರ್ಷ ಆರಂಭದಲ್ಲಿ ಚೆನ್ನಾಗಿ ಮಳೆಯಾಗಿದೆ. ನಾವು ಮಲೆನಾಡಿನಿಂದ ಬಂದಿರತಕ್ಕಂತಹ ಅನೇಕ ಜನ ಶಾಸಕರು ಇದ್ದೇವೆ. ಜೂನ್ ಮೊದಲನೇ ವಾರದಿಂದ ಆಗಸ್ಟ್ ಕೊನೇ ವಾರದವರೆಗೆ ಸೂರ್ಯನನ್ನು ನೋಡುತ್ತಿರಲಿಲ್ಲ. ಕತ್ತಲು ಬೆಳಕಿನ ವ್ಯತ್ಯಾಸ ಗೊತ್ತಾಗುತ್ತಿರಲಿಲ್ಲ. ದಟ್ಟವಾದ ಮೋಡ ಕವಿದ ವಾತಾವರಣ, ಕತ್ತಲು, ಸದಾ ಕಾಲ ಸುರಿಯುತ್ತಿರತಕ್ಕಂತಹ ಮಳೆ. ಇಂತಹ ಪರಿಸ್ಥಿತಿಯಲ್ಲಿ ನಾವು ಬದುಕಿ ಬಾಳಿ ಬಂದವರು. ಹೆಚ್ಚು ಕಡಿಮೆ ಜುಲೈ ತಿಂಗಳ ಅರ್ಧ ಭಾಗದಲ್ಲಿ ನಮ್ಮ ಭೂಮಿಯಲ್ಲಿ ಅಂತರ್ಜಲದ ಮಟ್ಟ ಮೇಲಕ್ಕೆ ಬಂದು ನೀರಿನ ಬುಗ್ಗೆಗಳು ಏಳುತ್ತಿದ್ದವು. ಹೊಳೆ- ಹಳ್ಳಗಳು ತುಂಬಿ ಹರಿಯುತ್ತಿದ್ದವು. ನಮ್ಮಲ್ಲಿ ಆರು ತಿಂಗಳುಗಳ ಕಾಲ ಆಗುವಷ್ಟು ದವಸ ಧಾನ್ಯಗಳನ್ನು ಒಣಗಿಸಿ ಆರು ತಿಂಗಳ ಕಾಲ ಕೆಡದ ಹಾಗೆ ಇಡುವ ಕಲೆ ಇತ್ತು. ಇದನ್ನು ಹಿಂದಿನಿಂದ ಕೂಡ ಮಾಡಿಕೊಂಡು ಬಂದಿದ್ದೇವೆ. ಇವತ್ತು ಯಾವ ಹೊಲೆಯೂ, ಯಾವ ಹಳ್ಳವೂ ಹರಿಯುತ್ತಿಲ್ಲ. ಹಳ್ಳಕೊಳ್ಳಗಳು ತೀರ್ಥಹಳ್ಳಿ ತಾಲ್ಲೂಕಿನಿಂದ ಹಿಡಿದು ಸಾಗರ, ಹೊಸ ನಗರ ಇಲ್ಲಿ ಎಲ್ಲಿಯೂ ಕೂಡ ಹರಿಯುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಾವಿಯಲ್ಲಿ ನೀರು ಬರಲಿಲ್ಲ. ಕಳೆದ ಬೇಸಿಗೆಯಲ್ಲಿ ಒಣಗಿದ್ದು ಜುಲೈ ತಿಂಗಳ ಒಂಬತ್ತನೇ ತಾರೀಖಿನವರೆಗೆ ಅದೇ ರೀತಿ ಇದೆಯೇ ಹೊರತು ಒಂದು ಕೂಡ ನೀರು ಎತ್ತುವುದಕ್ಕೆ ಸಾಧ್ಯವಿಲ್ಲ. ಇಂತಹ ದೌರ್ಭಾಗ್ಯದ ದಿನಗಳನ್ನು ನಾವು ಯಾವಾಗಲೂ ಕಂಡಿರಲಿಲ್ಲ ಎಂದು ನಮ್ಮ ಹಿರಿಯರು ಹೇಳುತ್ತಿದ್ದಾರೆ.

4.30 ಪಿ.ಎಂ

ಇಂಥ ಒಂದು ಸ್ಥಿಯಲ್ಲಿ ವಿದ್ಯುತ್ ಉತ್ಪಾದನೆ ಹೇಗೆ ಆಗುತ್ತಿದೆ ಎಂಬ ಬಗ್ಗೆ ಮನಗೆಲ್ಲರಿಗೂ ಗೊತ್ತೇ ಇದೆ. ಇವೊತ್ತು ಲಿಂಗನಮಕ್ಕಿಯಲ್ಲಿ ಕಲೆದ ಸಾಲಿನ ಇದೇ ದಿನಾಂಕಕ್ಕೆ ಹೋಲಿಸಿ ನೋಡಿದರೆ ನೀರು 18 ಅಡಿ ಕಡಿಮೆ ಇದೆ. ಚಕ್ರಾ ಮೊನಿ ಕಾಳಿ, ಭದ್ರಾ ಸೇರಿದಂತೆ ಯಾವುವು ತುಂಬಲೇ ಇಲ್ಲ. ಇಷ್ಟು ಹೊತ್ತಿಗಾಗಲೇ ತುಂಬಿ ಉಕ್ಕಿ ಹರಿಯಬೇಕಾಗಿತ್ತು. ನಾವೆಲ್ಲರೂ ಪ್ರವಾಹದ ದಿನಗಳನ್ನು ಎದುರಿಸಬೇಕಾಗಿತ್ತು. ಅತಿವೃಷ್ಟಿಗಾಗಿ ಹಣವನ್ನು ಬಿಡುಗಡೆ ಮಾಡಿ ಎಂದು ನಾವೆಲ್ಲಾ ಬೊಬ್ಬೆ ಹೊಡೆಯಬೇಕಾಗಿತ್ತು. ಪ್ರತಿ ವರ್ಷ ಹೆಚ್ಚು ಕಡಿಮೆ ನಮ್ಮ ತಾಲ್ಲೂಕುಗಳಲ್ಲಿ ಆ ರೀತಿ ಇತ್ತು. ಈಗ ಒಂದೆರಡು ವರ್ಷವಾಗಿರಬಹುದು, ಅಂಥದ್ದೇನೂ ಇಲ್ಲ. ಇವೊತ್ತು ಕುಡಿಯುವ ನೀರಿಗೂ ಕೂಡ ತೊಂದರೆಯಾಗಿ ಅದಕ್ಕೆ ಮಹತ್ವವನ್ನು ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಹೇಳಬೇಕೆಂದರೆ ಇಡೀ ರಾಜ್ಯದಲ್ಲಿ ಶೆಡ್‌ಡೌನ್ ಇನ್ನೂ ಕೂಡ ತೆಗೆಯಲಿಲ್ಲ. ಅದನ್ನು ಇನ್ನು ಜಾಸ್ತಿ ಮಾಡಬೇಕಾಗುತ್ತದೆ. ಏಕೆಂದರೆ ನಾವೆಲ್ಲ ಮಳೆಗಾಲದಲ್ಲಿ ಪಂಪ್‌ಸೆಟ್ ಉರಿಸುತ್ತಲೇ ಇರಲಿಲ್ಲ, ಮೊನ್ನೆ ದಿನ ಮಂಗಳೂರಿನ ಕೆ.ಪಿ.ಟಿ.ಸಿ.ಎಲ್. ವಲಯದ ಎಂ.ಡಿ.ಯವರನ್ನು ನಾವು ಕೇಳುವುದಕ್ಕೆ ಹೋಗಿದ್ದೆವು. ಮೆಸ್ಕಾ

ಎಂ.ಡಿ.ಯವರ ಹತ್ತಿರ ನಾವು ಮಾತನಾಡುವುದಕ್ಕೆ ಹೋಗಿದ್ದೆವು. ನಮಗೊಂದು ವಿಶೇಷವಾದ ಸೌಲಭ್ಯಗಳು ಬೇಕು ಎಂದು ಕೇಳಲು ಹೋಗಿದ್ದೆವು. ಏಕೆಂದರೆ ಮಲೆಗಾಲದಲ್ಲಿ ನಮ್ಮ ಹೊಳೆಯ ಬದಿಯಲ್ಲಿ ಇರತಕ್ಕಂಥ ಪಂಪ್‌ಸೆಟ್‌ಗಳನ್ನು ಕಿತ್ತುಕೊಂಡು ಹೋಗಿ ನಾವು ಮೇಲೆ ಇಡುತ್ತೇವೆ. ಏಕೆಂದರೆ ಅವು ಪ್ರವಾಹ ಬಂದಾಗ ಮುಳುಗಿಹೋಗುತ್ತವೆ ಎನ್ನುವ ಕಾರಣದಿಂದ ಮೇಲೆ ಇಡುತ್ತೇವೆ. ಆ ಕಾರಣಕ್ಕಾಗಿ ವಾಹನಗಳನ್ನು ಆರು ತಿಂಗಳು ಸೆರೆಂಡರ್ ಮಾಡಿದ ಹಾಗೆ, ನಾವು ಪಂಪ್‌ಸೆಟ್‌ಗಳನ್ನು ಸೆರೆಂಡರ್ ಮಾಡುತ್ತೇವೆ, ಆಗ ನಮಗೆ ಹೆಚ್.ಪಿ. ಮಿನಿಮಮ್ ಇರುವುದನ್ನು ತೆಗೆದುಹಾಕಿ ಎಂದು ಕೇಳುವುದಕ್ಕೆ ಕೆಲವು ಶಾಸಕರು ಕೂಡಿ ನಾವೆಲ್ಲರೂ ಹೋಗಿದ್ದೆವು. ಆಗ ಮಲೆನಾಡಿನ ಭಾಗದ ನಮ್ಮ ಅನೇಕ ರೈತರೂ ಕೂಡ ಅಲ್ಲಿಗೆ ಬಂದಿದ್ದರು. ಏಕೆಂದರೆ ಆರು ತಿಂಗಳು ನಾವು ಪಂಪ್‌ಸೆಟ್ ಉರಿಸುವುದಿಲ್ಲ ಎಂದು ಹೇಳಿ ಈ ರೀತಿ ಕೇಳಿದ್ದೆವು. ಈ ವರ್ಷ ಆ ರೀತಿ ಆಗಲೀ ಇಲ್ಲ, ಈ ವರ್ಷ ಈಗಲೂ ಕೂಡ ಪಂಪ್‌ಸೆಟ್‌ನ್ನು ಚಾಲೂ ಮಾಡಿಕೊಂಡೇ ಇದ್ದೇವೆ, ಆ ಪಂಪ್ ಚಾಲೂ ಮಾಡುವುದಕ್ಕೂ ನಮ್ಮ ಹಳ್ಳಿಗಳಲ್ಲಿ ಇನ್ನೂ ಕೂಡ ನೀರು ಬಂದಿಲ್ಲ ಬೇಸಿಗೆಯಲ್ಲಿ ಆರಿ ಹೋಗಿರತಕ್ಕ ನೀರು ಕೂಡ ಬರಲಿಲ್ಲ. ಎಲ್ಲೋ ತುಂಗಾ ನದಿಯಲ್ಲಿ ಮಾಲತಿ ನದಿಯ ದಡದಲ್ಲಿರತಕ್ಕಂಥವರು ಹಾಗೂ ಹೀಗೂ ಪಂಪ್‌ಸೆಟ್ ಚಾಲೂ ಮಾಡಿಕೊಂಡು ಸ್ವಲ್ಪ ಬೆಳೆಯನ್ನು ಉಳಿಸಿಕೊಳ್ಳುವಂಥ ಪರಿಸ್ಥಿತಿಯಲ್ಲಿ ಇವೊತ್ತು ವ್ಯವಸಾಯ ಮಾಡುತ್ತಿದ್ದಾರೆ. ಆರಂಭದಲ್ಲಿ ಮಳೆಯಾದಾಗ ಅವರು ಸಸಿಯನ್ನು ಹಾಕಿದ್ದಾರೆ, ಕೆಲವರು ಬಿತ್ತನೆ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಬಿತ್ತನೆ ಮಾಡುವ ಬೇಸಾಯದ ಪದ್ಧತಿ ಇಟ್ಟುಕೊಂಡಿರುವವರು ಆರಂಭದಲ್ಲಿ ಮಳೆ ಬಂದಾಗ ಬಿತ್ತನೆಯನ್ನು ಮಾಡಿಬಿಟ್ಟಿದ್ದಾರೆ. ಈಗ ಅವೆಲ್ಲಾ ಸಸಿಗಳು ಸತ್ತುಹೋಗುತ್ತಿವೆ. ಹಾಕಿದ ಬೀಜ ಹೋಯಿತು, ಹಾಕಿದ ಗೊಬ್ಬರ ಹೋಯಿತು, ಸಾಲ ಮಾತ್ರ ನಮಗೆ ಉಳಿದಿದೆ. ಇವೊತ್ತು ಸೊಸೈಟಿಗಳಲ್ಲಿ, ಬೇರೆ ಬೇರೆ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಸಾಲ ಮಾಡಿರತಕ್ಕಂಥ ನಾವು ಎರಡು ವರ್ಷಗಳಿಂದಲೂ ಸಾಲಗಾರರಾಗಿಯೇ ಉಳಿದಿದ್ದೇವೆ. ಕಳೆದ ವರ್ಷದ ಕ್ರಾಪ್ ಇನ್‌ಶ್ಯೂರೆನ್ಸ್ ಬಗ್ಗೆ ಹೇಳಬೇಕಾದರೆ ನಮ್ಮ ಸಾರ್ಕರದವರು ಈ ಬಗ್ಗೆ ಯಾವ ರೀತಿ ಯೋಚನೆ ಮಾಡುತ್ತಾರೋ ನಮಗೆ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಕಳೆದ ಬಾರಿ ಬೆಳೆ ಹಾಳಾಗಿರುವುದಕ್ಕೆ ಸಂಬಂಧಪಟ್ಟಂತೆ ನಿನ್ನೆ ಹಣವನ್ನು ರಿಲೀಸ್ ಮಾಡಿದ್ದೇವೆ ಎಂದು ಹೇಳಿದರೆ ಇದರರ್ಥ ಏನು? ಇವರಿಗೆ ರೈತರ ಬಗ್ಗೆ ಕಳಕಳಿ ಇದೆಯೇ? ರೈತನ ಬಗ್ಗೆ ಯೋಚನೆ ಇದೆಯೇ? 100ಕ್ಕೆ 70-80 ಭಾಗ ಬೆಳೆಗಾರರಿರುವಾಗ, ಇವರ ಕಲ್ಯಾಣದ ಹೊರತು ಬೇರೆ ಏನು ಕೆಲಸ ಇವರಿಗೆ ಇರಬಹುದು ಹೇಳಿ. ರೈತರ ಓಟು ತೆಗೆದುಕೊಂಡು ನಾವೆಲ್ಲಾ ಆಯ್ಕೆಯಾಗಿ ಬರುತ್ತೇವೆ, ನಾವೆಲ್ಲಾ ಶಾಸಕರಾಗಿ, ಮಂತ್ರಿಗಳಾಗುತ್ತೇವೆ. ಅಧಿಕಾರಿಗಳಂತೂ ವಿಳಂಬವೇ, ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲ, ಹೇಗೆ ಬೇಕಾದರೂ ಆಗುತ್ತದೆ, ಕ್ರಾಪ್ ಇನ್‌ಶ್ಯೂರೆನ್ಸ್ ಯಾವತ್ತು ಬೇಕಾದರಾಗಲಿ, ಏಕೆಂದರೆ ಅವರಿಗೆ ಪ್ರತಿ ತಿಂಗಳು ಸಂಬಳ ಬರದೇ ಇದ್ದಾಗ ಮಾತ್ರ ಮನೆಯಲ್ಲಿ ಒಲಿ ಹಚ್ಚದೇ ಇದ್ದಾಗ ಮಾತ್ರ ಅವರಿಗೆ ಗೊತ್ತಾಗುವುದು, ಅದೇ ಅಧಿಕಾರಿಗಳಿಂದ ಹಿಡಿದು ರಾಜಕಾರಣಿಗಳವರೆಗೆ ನಾವೆಲ್ಲರೂ ಊಟ ಮಾಡುವಂಥ ಅನ್ನದ ಅಕ್ಕಿಯನ್ನು ಬೆಳೆದುಕೊಡತಕ್ಕಂಥ ರೈತರಿಗೆ ಬೆಳೆ ಹಾಳಾಗಿದ್ದಕ್ಕೆ ಕ್ರಾಪ್ ಇನ್‌ಶ್ಯೂರೆನ್ಸ್‌ನ್ನು ರಿಲೀಸ್ ಮಾಡಬೇಕು ಎನ್ನುವ ಕಳಕಳಿ ಹೃದಯವಂತಿಕೆ ನಮ್ಮ ಅಧಿಕಾರಿಗಳಿಗೆ ಇಲ್ಲವಾಗಿದೆ. ಅಂದರೆ ರೈತರ ಪಾಲಿಗೆ ನಾವು ತೀರಾ ರಾಕ್ಷಸರಾಗಿದ್ದೇವೆ. ಎಂದು ಬೇರೆ

ಹೇಳಬೇಕಾಗಿಲ್ಲ. ಹೀಗಾಗಿ ಇವೊತ್ತು ರೈತರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಅವರು ತುಂಬಾ ಸಂಕಷ್ಟದಲ್ಲಿದ್ದಾರೆ. ಯಾರು ಏನು ಮಾಡುತ್ತಾರೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಮ್ಮ ರೈತರಿಗೆ ಸಂಕಷ್ಟ ಬಂದರೆ ಕೆಲವರಿಗೆಲ್ಲಾ ಸಂತೋಷ, ರೈತರಿಗೆ ಹೀಗೆ ಆಗಲಿ ಎಂದೇ ಕಾಯುತ್ತಾ ಇರುತ್ತಾರೆ. ನಮ್ಮಲ್ಲಿಲ್ಲಾ ಜಾನುವಾರುಗಳು ಎಲ್ಲೋ ಕಾಡಿನಲ್ಲಿ ಬಿದ್ದು ಸಾಯುತ್ತವೆ, ಆಗ ಯಾವು ಯಾವುದೋ ಕಡೆಯಲ್ಲಿರುವ ರಣಹದ್ದುಗಳಿಗೆ ಈ ಸುದ್ದಿ ಯಾರು ಮುಟ್ಟಿಸುತ್ತಾರೋ ಗೊತ್ತಿಲ್ಲ, ಏಕಾ ಏಕಿಯಾಗಿ ಎಲ್ಲೆಲ್ಲಿಂದಲೋ ರಣಹದ್ದುಗಳು ಬಂದು ಸತ್ತಿರುವ ಜಾನುವಾರುಗಳ ಮಾಂಸವನ್ನು ಕಚ್ಚಿಕಚ್ಚಿ ತಿನ್ನುತ್ತಿರುತ್ತವೆ. ಬಹುಶಃ ಅದೇ ರೀತಿಯಲ್ಲಿ ರೈತರಿಗೆ ಸಂಕಷ್ಟ ಬಂದಾಗ ಬೇರೆ ಬೇರೆ ಬೀಜದ ಕಂಪನಿಗಳು, ಗೊಬ್ಬರದ ಕಂಪನಿಗಳು, ಪಸ್ಟಿಸೈಡ್ಸ್ ಕಂಪನಿಗಳೆಲ್ಲವೂ ಇಂಥ ಸಮಯವನ್ನೇ ಕಾಯುತ್ತಿರುತ್ತವೆ. ಎಲ್ಲಿ ಯಾರಿಗೆ ಟೋಪಿ ಹಾಕಿ ಏನು ಮಾಡಬಹುದು ಎಂದು ಕಾಯುತ್ತಿರುತ್ತಾರೆ. ಈಗ ಬಂದಿರುವ ಕೃಷಿ ಸಚಿವರು ಹೊಸಬರು, ಆದರೆ ಅವರು ಸಾಕಷ್ಟು ಅನುಬವಸ್ಥರು, ಅವರ ಇಲಾಖೆಯಲ್ಲಿ ಅನೇಕ ಒಳ್ಳೆಯ ಅಧಿಕಾರಿಗಳು ಇದ್ದಾರೆ, ಎಲ್ಲರೂ ಕೆಟ್ಟವರು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಳ್ಳೆಯ ಅಧಿಕಾರಿಗಳು ಯಾರಿದ್ದಾರೆ ಅಂಥವರನ್ನು ಕರೆದುಕೊಂಡು ಹೋಗಿ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಬೇಕು. ಒಂದು ಕ್ವಿಂಟಾಲ್ ಬೀಜದ ಭತ್ತಕ್ಕೆ 5 ಸಾವಿರ, 8 ಸಾವಿರ ರೂಪಾಯಿ ಎಂದರೆ ಏನು ಸ್ವಾಮಿ, ಅಷ್ಟು ಹಣವನ್ನು ರೈತರು ಎಲ್ಲಿಂದ ತರುತ್ತಾರೆ? ಯಾರು ಬೆಳೆಯುತ್ತಾರೆ? ಎಷ್ಟು ಲಾಭ ಇವರಿಗೆ? ಮಾನ್ಯ ಮುಖ್ಯಮಂತ್ರಿಗಳು ಸಾಗರದಲ್ಲಿ ರೈತರ ಬೃಹತ್ ಸಭೆಗೆ ಬಂದಾಗ ಇಡೀ ಈ ರಾಜ್ಯದಲ್ಲಿ ಈ ಬಾರಿ 50 ಪರ್ಸೆಂಟ್ ಸಬ್ಸಿಡಿಯನ್ನು ರೈತರ ಬೀಜದ ಭತ್ತಕ್ಕೆ ಕೊಡುತ್ತೇವೆ ಎಂದು ಘೋಷಣೆಯನ್ನು ಮಾಡಿದರು. ಈ 50 ಪರ್ಸೆಂಟ್ ಯಾರಿಗೆ ಹೋಗುತ್ತದೆ. ಈ ಬೀಜದ ಭತ್ತವನ್ನು ಇಲಾಖೆಗೆ ಸರಬರಾಜು ಮಾಡುತ್ತಿದ್ದಾರಲ್ಲಾ ಅಂಥ ಕಂಪನಿಗಳಿಗೆ ಮಾತ್ರ ಲಾಭವಾಗುತ್ತದೆಯೇ ವಿನಹ ರೈತರಿಗೆ ಇದರಿಂದ ಲಾಭವಿಲ್ಲ. ಒಂದು ಕ್ವಿಂಟಾಲ್ ಭತ್ತವನ್ನು 5 ರಿಂದ 6 ಸಾವಿರ ರೂಪಾಯಿಗಳಿಗೆ ಮಾರುತ್ತಾರೆಂದರೆ ನಿಮ್ಮ ಇಲಾಖೆ ಯಾವ ರೀತಿ ಒಪ್ಪಿಕೊಂಡಿತು? ಇದಕ್ಕೆ ಸಬ್ಸಿಡಿ ಕೊಡುವುದಕ್ಕೆ ನೀವು ಹೇಗೆ ಒಪ್ಪಿಕೊಂಡಿರಿ? ಯಾವ ಅಧಿಕಾರಿ ಮತ್ತು ಯಾರು ಇದರಲ್ಲಿ ಇನ್‌ವಾಲ್ವ ಆಗಿದ್ದಾರೆಂದು ನಾನು ಕೇಳುತ್ತಿದ್ದೇನೆ. ಆ ಕಂಪನಿಗಳ ಸೆಳೆತಕ್ಕೆ ಯಾವ ರೀತಿ ಒಳಗಾಗಿದ್ದಾರೆ ಎಂಬ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ. ದಯವಿಟ್ಟು ಕೃಷಿ ಸಚಿವರು ತಮ್ಮ ಇಲಾಖಾಧಿಕಾರಿಗಳನ್ನು ಕೂರಿಸಿಕೊಂಡು ಸಮಾಲೋಚನೆ ಮಾಡಬೇಕು. ಸರ್ಕಾರದ ಸಬ್ಸಿಡಿ ಹಣವನ್ನು ತಿನ್ನುವುದಕ್ಕಾಗಿಯೇ ಕಂಪನಿಗಳು ಹುಟ್ಟಿಕೊಂಡಿವೆಯೋ ಅಂಥವುಗಳನ್ನು ದಯವಿಟ್ಟು ಓಡಿಸುವಂಥ ಕೆಲಸವನ್ನು ತಾವು ಮಾಡಬೇಕು. ಕಳೆದ ಬಾರಿ ಒಂದು ರೀತಿಯ ಬೀಜದ ಭತ್ತ ಕೊಟ್ಟರು ಅದರ ಬೆಲೆ ಒಂದು ಕ್ವಿಂಟಾಲ್‌ಗೆ 5 ಸಾವಿರ ರೂಪಾಯಿಗಳು ಅದನ್ನು ತೆಗೆದುಕೊಂಡು ಹೋಗಿ ಬಿತ್ತನೆ ಮಾಡಿದರೆ ಅದರಿಂದ ಈ ಬಾರಿ ಬೀಜವನ್ನು ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಏಕೆಂದರೆ ಒಂದೇ ಬಾರಿ ಮಾತ್ರ ಅದನ್ನು ಉಪಯೋಗಿಸುವುದಕ್ಕೆ ಬರುವುದು. ಬೀಜವನ್ನು ಬೆಳೆದು ಅದರಿಂದ ಮತ್ತೆ ರೈತರು, ರೈತರುಗಳೇ ಬೀಜವನ್ನು ಹಂಚಿಕೊಳ್ಳುವುದಕ್ಕೆ ಬರುವುದೇ ಇಲ್ಲ. ಬೀಜ ಆಗದಿದ್ದ ಹಾಗೆ ಮಾಡುವಂಥ ಕಲೆ ಆ ಕಂಪನಿಯ ಕೈಯಲ್ಲಿದೆ. ಏಕೆಂದರೆ ರೈತರು ಖಾಯಂ ಆಗಿ ಆ ಕಂಪನಿಯ ದಾಸರಾಗಿಯೇ

ಇರಬೇಕು ಎನ್ನುವ ಹಾಗೆ ಮಾಡಿವೆ. ನಾನು ಕೂಡ ಕಳೆದ ಬಾರಿ ಬೀಜ ನಾಟಿ ಮಾಡಿ ಸಸಿ ಹಾಕಿಸಿದ್ದೇನೆ. ಈ ಸಾರಿ ಅವರು ಬಂದು ಹೇಳುತ್ತಾರೆ, ಖಂಡಿತವಾಗಿ ಅದರಿಂದ ಬೀಜ ಬರುವುದಿಲ್ಲ, ನೀವು ಖಂಡಿತವಾಗಿ ಅದನ್ನು ಹಾಕಬಾರದು, ಮತ್ತೆ ಅಂಥದ್ದೇ ಬೀಜವನ್ನು ನೀವು ಕೊಂಡುಕೊಂಡು ಬರಬೇಕು ಎನ್ನುತ್ತಾರೆ. ಒಂದು ಕ್ವಿಂಟಾಲ್‌ಗೆ 5 ಸಾವಿರ 8 ಸಾವಿರ ರೂಪಾಯಿಗಳನ್ನು ಮತ್ತೆ ಮತ್ತೆ ಕೊಟ್ಟು ಕೊಂಡುಕೊಂಡು ಬರಬೇಕು. ನಮ್ಮ ಕಡೆ ರೈತ ಸಂಪ್ರದಾಯ ಏನೆಂದರೆ, ಒಂದು ಹೊಸ ತಳಿ ಬಂತು ಎಂದು ಹೇಳಿದರೆ ಅದನ್ನು ಅಭಿವೃದ್ಧಿ ಪಡಿಸತಕ್ಕಂಥ ಪ್ರೋಗ್ರೆಸ್ಸೀವ್ ರೈತರು ಒಂದು ವರ್ಷ ಆ ಹೊಸ ತಳಿಯನ್ನು ಹಾಕಿಬಿಡುತ್ತಾರೆ, ಆಮೇಲೆ ಹಳ್ಳಿಯಲ್ಲಿ ನಾವೆಲ್ಲಾ ಆ ಬೀಜವನ್ನು ಹಂಚಿಕೊಳ್ಳುತ್ತೇವೆ. ಭತ್ತಕ್ಕೆ ಅವನಿಗೆ ಭತ್ತ ಕೊಟ್ಟು ಬೀಜವನ್ನು ನಾವೆಲ್ಲಾ ಹಂಚಿಕೊಳ್ಳುವ ಮೂಲಕ ಬೀಜ ಪ್ರಸಾರ ಆಗುತ್ತಾ ಹೋಗುತ್ತದೆ. ಆದರೆ ಇವತ್ತು ಹಾಗಿಲ್ಲ, ಈ ಕಂಪನಿಗಳು ನಮ್ಮನ್ನು ಕೈ ಕಾಲು ಕಟ್ಟಿ ಕೂರಿಸಿವೆ, ನಮ್ಮ ರೈತರು ಖಾಯಂ ಆಗಿ ಕಂಪನಿಗೇ ಹೋಗಿ ಬೀಜದ ಭತ್ತವನ್ನು ತೆಗೆದುಕೊಳ್ಳಬೇಕು ಎನ್ನುವಂತೆ ಆಗಿದೆ. ಬೀಜದ ಭತ್ತವನ್ನು ಕೊಡುವ ವ್ಯವಹಾರ ಇಟ್ಟುಕೊಂಡು ದಂಧ ಮಾಡುತ್ತಿರುವ ಇಂಥ ಕಂಪನಿಗಳು ನಮ್ಮ ಕುತ್ತಿಗೆಗೆ ಹಗ್ಗ ಹಾಕಿವೆ. ನಮ್ಮ ಹಳ್ಳಿಗಳ ಕಡೆ ಫ್ಲಾಟ್‌ಗಳನ್ನು ಮಾಡಿ ಅಲ್ಲಿ ಇಂಥ ರೀತಿಯ ಬೀಜವನ್ನು ಬೆಳೆಯತಕ್ಕಂಥ ಮಾದರಿ ರೈತರುಗಳಿದ್ದರೆ, ನಿಮ್ಮ ಇಲಾಖೆಯ ಅಧಿಕಾರಿಗಳ ಹತ್ತಿರ ಇದಕ್ಕೆ ಸಂಬಂಧಪಟ್ಟ ಹಾಗೆ ಮಾಹಿತಿಗಳು ಇವೆ, ಅಂಥ ರೈತರುಗಳಿಗೆ ಇಂಥ ಬೀಜವನ್ನು ಮಾಡುವುದು ಹೇಗೆ ಎನ್ನುವ ಟೆಕ್ನಿಕ್‌ನ್ನು ಹೇಳಿಕೊಟ್ಟರೆ ಅವರು ಬೀಜವನ್ನು ಬೆಳೆದು ನಮ್ಮ ಹಳ್ಳಿಗಳಲ್ಲಿ ರೈತರುಗಳಿಗೆ ಬೀಜ ಪ್ರಸಾರ ಮಾಡುವುದಕ್ಕೆ ಅನುಕೂಲವಾಗುತ್ತದೆ, ಸಾಮಾನ್ಯ ರೈತರುಗಳೆಲ್ಲರಿಗೂ ಇಂಥ ಬೀಜವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ನನ್ನ ವಿನಂತಿ ಇಷ್ಟೆ, ಈ ರೀತಿ ಕಂಪನಿಗಳಿಗೆ ಸಹಾಯಧನವನ್ನು ಕೊಡಬಾರದು, ನಮ್ಮ ರೈತರುಗಳೇ ಬೆಳೆದಿರತಕ್ಕಂಥ ಬೀಜದ ಭತ್ತ ಇರುತ್ತದೆ. ಒಂದು ಸಾರಿ ಬೀಜದ ಭತ್ತ ಹೋಯಿತು, ಇನ್ನೊಂದು ಸಾರಿ ಯಾವ ಯಾವ ರೈತರ ಹತ್ತಿರ ಬೀಜದ ಭತ್ತ ಉಳಿದಿದೆ, ಅವರಿಂದ ಯಾವ ರೈತರು ಕೊಂಡು ಕೊಳ್ಳುತ್ತಾರೆ ಅವರಿಗೆ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡಬೇಕಾಗುತ್ತದೆ. ಸಾಂಪ್ರದಾಯಿಕವಾದ ಬೀಜಗಳು ಯಾವುವಿವೆ ಅಂಥದ್ದಕ್ಕೆ ತಾವು ಸಹಾಯಧನವನ್ನು ಬಿಡುಗಡೆ ಮಾಡದೇ ಹೋದರೆ ಈ ವರ್ಷ ಬರ ಪರಿಸ್ಥಿತಿಯಲ್ಲಿ ರೈತರುಗಳು ಬಚಾವ್ ಆಗುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಇದನ್ನು ಮಾಡಬೇಕೆಂದು ಮಾನ್ಯ ಕೃಷಿ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಗೊಬ್ಬರದ ಬಗ್ಗೆ ಹೇಳಬೇಕೆಂದರೆ ನೈಸರ್ಗಿಕ ಕೃಷಿ ಎಂದು ಇವೊತ್ತು ಹೇಳುತ್ತಾ ಸಾವಯವ ಗೊಬ್ಬರವನ್ನು ಇಂದು ಎಲ್ಲರೂ ಮಾಡುವುದಕ್ಕೆ ಶುರು ಮಾಡಿಬಿಟ್ಟಿದ್ದಾರೆ. ಅದರಲ್ಲಿ ಎಷ್ಟು ಪರ್ಸೆಂಟ್ ಯಾವುದಿದೆ ಇವತ್ತು ನಿಮ್ಮ ಅಗ್ರಿಗೋಲ್ಡ್ ಎಂದು ಹೇಳಿ ಗೊಬ್ಬರವನ್ನು ಏನು ಬಿಡುಗಡೆ ಮಾಡಲಾಗಿದೆ, ಅದು ಚೆನ್ನಾಗಿದೆ, ಸರ್ಟಿಫೈಡ್ ಮಾಡಿದ್ದಾರೆ, ನಮ್ಮ ಸರ್ಕಾರದ ಸಂಸ್ಥೆಯಾದ್ದರಿಂದ ಅದು ಸರಿ. ಅದರಲ್ಲಿ ಏನು ಹಾಕಿದರೂ ಕೂಡ ನಾವು ನಂಬಿ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಇನ್ನು ಏನೂ ಗೊತ್ತಿಲ್ಲ. ಆದರೆ ಬೇರೆ ಬೇರೆ ಸಾಮಾನ್ಯ ಕಂಪನಿಗಳು ಇವೊತ್ತು ಆರಂಭವಾಗಿವೆ. ಆ ಕಂಪನಿಗಳ ಬಗ್ಗೆ ಚೆಕ್ ಮಾಡುವ ಕೆಲಸವನ್ನು ಇಲಾಖೆಯ ತಜ್ಞರ ಮೂಲಕ ಮಾಡಿಸುವ ಕೆಲಸವನ್ನು ತಾವು ಮಾಡಬೇಕು. ಇಂಥ ಕಂಪನಿಗಳಿಂದ ಸ್ಯಾಂಪಲ್‌ನ್ನು ರೆಗ್ಯುಲರ್ ಆಗಿ ಡ್ರಾ ಮಾಡಬೇಕಾಗುತ್ತದೆ.

ಸ್ಯಾಂಪಲ್‌ನ್ನು ಪ್ರತಿಯೊಂದು ಬ್ಯಾಗ್‌ನಲ್ಲಿ ಪ್ರತಿಯೊಂದು ಊರುಗಳಲ್ಲಿಯೂ ಇರುವ ಅಂಗಡಿಗಳಲ್ಲಿ ತೆಗೆದು ಅದನ್ನು ಕೆಮಿಕಲ್ ಟೆಸ್ಟಿಂಗ್‌ಗೆ ಕಳುಹಿಸಿ ಗುಣಮಟ್ಟದ ಬಗ್ಗೆ ಟೆಸ್ಟ್ ಮಾಡಿಸಿ ಸ್ಪೆಸಿಫಿಕೇಷನ್ ಪ್ರಕಾರ ಗುಣಮಟ್ಟ ಇಲ್ಲದೇ ಹೋದರೆ ಅವರ ಮೇಲೆ ಕೇಸ್ ಹಾಕಿ ಅವರನ್ನು ಜೈಲಿಗೆ ಕಳುಹಿಸುವಂಥ ಕೆಲಸವನ್ನು ತಾವು ಮಾಡಬೇಕು. ಇಲ್ಲದಿದ್ದರೆ ರೈತರನ್ನು ದರಿದ್ರರನ್ನಾಗಿ ಮಾಡುವುದರಲ್ಲಿ ಇಂಥ ಕಂಪನಿಗಳು ನಿಸ್ಸೀಮರಾಗಿಬಿಟ್ಟಿದ್ದಾರೆ. ಆದ್ದರಿಂದ ಅಂಥ ಗೊಬ್ಬರದ ಕಂಪನಿಗಳನ್ನು ನಿಯಂತ್ರಣ ಮಾಡಬೇಕು. ಇನ್ನು ಔಷಧ ವಿಚಾರದಲ್ಲಿ ಕೂಡ ತೊಗರಿ ಬೆಳೆಯಲ್ಲಿ ನಷ್ಟವಾಗಿ ಯಾರು ನೇಣು ಹಾಕಿಕೊಂಡಿದ್ದಾರೆ ಅದಕ್ಕೆ ಇವರೇ ಕಾರಣ. ಅದನ್ನು ನಿಯಂತ್ರಣ ಮಾಡದೆ ಹೋದರೆ ಇವರು ದೊಡ್ಡ ದರೋಡೆಕೋರರು ಆಗುತ್ತಾರೆ. ನಮ್ಮ ರೈತರ ದುಡ್ಡು ಹೊಡೆದು ಕೊಂಡು ಅವರ ತಲೆ ಒಡೆಯುವಂತಹ ಮಾನಸಿಕವಾಗಿ ಬಳಲುವಂತಹ ಪರಿಸ್ಥಿತಿಯಲ್ಲಿ, ಈ ಗೊಬ್ಬರ ಹಾಗೂ ಔಷಧ ಕಂಪನಿಗಳು ರೈತರನ್ನು ಇಟ್ಟುಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ದಯಮಾಡಿ ತಮ್ಮ ಇಲಾಖೆಯನ್ನು ವಿಶೇಷವಾಗಿ ತರಬೇತು ಮಾಡಬೇಕಾಗುತ್ತದೆ. ನಮ್ಮ ಕೃಷಿಕನ ಮನೆ ಬಾಗಿಲಿಗೆ ಬರುವವರು ಯಾರೂ ಇಲ್ಲ. ಎ.ಇ.ಓ ಹುದ್ದೆಗಳನ್ನು ರದ್ದು ಮಾಡಿದ್ದೀರಿ. ಕೃಷಿ ಕ್ಲಿನಿಕ್‌ಗಳು ಎಂದು ಹೋಬಳಿಗೆ ಒಂದೊಂದು ಮಾಡಿದ್ದೀರಿ ಅಂದರೆ ರೈತ ಸಂಪರ್ಕ ಕೇಂದ್ರಗಳು ಎಂದು ಅಲ್ಲಿ ಹೋಗಿ ನೋಡಿದರೆ ಏನಿದೆ ಎಂದರೆ ಏನೂ ಇಲ್ಲ. ಏಕೆಂದರೆ ಅಲ್ಲಿ ಯಾರಾದರೂ ಒಬ್ಬರು ಕುಳಿತುಕೊಳ್ಳಬೇಕು. ರೈತನಿಗೆ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಇದ್ದು ಏನಾದರೂ ಒಂದು ಮಾಹಿತಿಯನ್ನು ಕೊಡಬೇಕಲ್ಲಾ. ಆದರೆ ಅನೇಕ ಕೇಂದ್ರಗಳಲ್ಲಿ ಒಬ್ಬರೂ ಕೂಡ ಇಲ್ಲ. ರೈತರ ಮನೆ ಬಾಗಿಲಿಗೆ ಕೃಷಿ ಸಹಾಯಕರು ಹೋಗುತ್ತಿದ್ದರು. ಈಗ ನಿಮ್ಮ ಸರ್ಕಾರದ ಕಾಲದಲ್ಲಿ ರೈತ ಆಫೀಸ್ ಬಾಗಿಲಿಗೆ ಹೋಗಬೇಕೆಂದು ಮಾಡಿದ್ದೀರಿ. ಹೋಗಲಿ, ಆದರೆ ಅಲ್ಲಿ ಯಾರಾದರೂ ಒಬ್ಬರು ಇದ್ದಾರೆಯೇ ಎಂದರೆ ಅಲ್ಲಿ ಕೂಡ ಯಾರೂ ಇಲ್ಲ. ಅಲ್ಲಿ ಕಂಪ್ಯೂಟರ್ಸ್ ಮಾಡಿ ರೇಟ್‌ಗಳ ಮಾಹಿತಿಯನ್ನು ಕೊಡಬೇಕು. ಇವೆಲ್ಲವೂ ಕೂಡ ದೊಡ್ಡ ಕನಸು. ಆದರೆ ಯಾವುದೂ ಕೂಡ ಅಲ್ಲಿ ಬರುತ್ತಾ ಇಲ್ಲ. ಇವತ್ತು ಆ ಕೇಂದ್ರಗಳು ಖಾಲಿ ಇವೆ. ಅದಕ್ಕೆ ಅಲ್ಲಿ ಸಿಬ್ಬಂದಿಗಳನ್ನು ಹಾಗೂ ತಜ್ಞರನ್ನು ತುಂಬಿಸುವಂತಹ ಕೆಲಸ ನಿಮ್ಮ ಕಡೆಯಿಂದ ಇವತ್ತು ಆಗಬೇಕಾಗಿದೆ. ಹಾಗೆ ಈಗಾಗಲೇ ಕೆಲವರು ಹೇಳಿದರು, ನಮಗೆ ಖಾಯಂ ಆಗಿರತಕ್ಕಂಥ ಒಂದು ಸ್ಥಿತಿ ಇರಬೇಕು. ಏಕೆಂದರೆ ನಾವು ಪ್ರಕೃತಿ ಮೇಲೆ ಅವಲಂಬಿತವಾಗಿದ್ದೇವೆ. ಇವತ್ತು ಹೇಗಿದೆ ಎಂದರೆ ನಮ್ಮ ಮಲೆನಾಡಿನ ತಾಲ್ಲೂಕುಗಳಲ್ಲಿ, ಕರಾವಳಿಯಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಾಟಿ ಆಗಿ ಬಹಳಷ್ಟು ದಿವಸ ಆಗಬೇಕಾಗಿತ್ತು. ಅಥವಾ ಮಲೆನಾಡಿನಲ್ಲಿ ನಾಟಿ ಆರಂಭವಾಗಬೇಕಾಗಿತ್ತು. ಆದರೆ ಇದುವರೆಗೂ ಕೂಡ ನಾಟಿ ಆರಂಭವಾಗಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಖಾಯಂ ಆದಂತಹ ರಕ್ಷಣೆ ನಮಗೆ ಸಿಗಬೇಕಾದರೆ ಅಂತರ್ಜಲವನ್ನು ಜಾಸ್ತಿ ಮಾಡುವಂತಹ ಕೆಲಸ ಮಾಡಬೇಕಾಗಿದೆ. ಇದರ ಬಗ್ಗೆ ಇವತ್ತು ಬರೀ ಪ್ರಚಾರ ಕೊಡುತ್ತಿದ್ದೇವೆ, ಮಾತನಾಡುತ್ತಿದ್ದೇವೆ, ಭಾಷಣ ಮಾಡುತ್ತಿದ್ದೇವೆ. ಇದಕ್ಕೆ ಎಷ್ಟು ಹಣವನ್ನು ತೊಡಗಿಸಬೇಕು ಆ ಕೆಲಸವನ್ನು ಮಾಡಲಿಲ್ಲ. ಮಳೆಯಿಂದ ಬಂದಂತಹ ನೀರನ್ನು ಆದರೂ ಕೂಡ ಇಂಗಿಸಿ ಅಂತರ್ಜಲವನ್ನು ಜಾಸ್ತಿ ಮಾಡುವಂತಹ ಕೆಲಸ ಆಗಬೇಕು. ಇವತ್ತು ಬೆಳಿಗ್ಗೆ ಈ ಒಂದು ವಿಚಾರದ ಬಗ್ಗೆ ಮಾತನಾಡಿದೆವು. ಅದೇನೆಂದರೆ ಚರಂಡಿಯಲ್ಲಿ ನೀರು ಹರಿದು ಮೂರು

ಜನ ಕೊಚ್ಚಿಕೊಂಡು ಹೋದ ಪ್ರಯುಕ್ತ ಸಾವನ್ನಪ್ಪಿದ್ದು ಆ ಒಂದು ಕುಟುಂಬದವರಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದೆವು. ಆದರೆ ಅದರ ಜೊತೆಯಲ್ಲಿ ರೈನ್ ಹಾರ್ವೆಸ್ಟಿಂಗ್ ಬಗ್ಗೆ ಕೂಡ ಹೇಳಿದರು. ಮಳೆ ನೀರನ್ನು ತಡೆದು ಹಿಡಿದಿಡುವಂತಹ ಒಂದು ಟೆಕ್ನಿಕ್ ಬಂದಿದೆ. ಇದನ್ನು ರಾಜ್ಯದಲ್ಲಿ ವ್ಯಾಪಕವಾಗಿ ವಿಸ್ತಾರ ಮಾಡುವಂತಹ ಅವಶ್ಯಕತೆ ಇದೆ. ಮದ್ರಾಸ್‌ನಲ್ಲಿ ಈಗಾಗಲೇ ಸಾಕಷ್ಟು ಮನೆಗಳಲ್ಲಿ ಆಗಿಹೋಗಿದೆ. ಹಾಗೆ ಮಳೆ ನೀರನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇಂಗಿಸುವಂತಹ ಕೆಲಸವನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಅಂತರ್ಜಲವನ್ನು ಜಾಸ್ತಿ ಮಾಡತಕ್ಕಂಥ ಅವಶ್ಯಕತೆ ಇದೆ. ಮಲೆನಾಡಿನಲ್ಲಿ ನಮ್ಮ ತಾಲ್ಲೂಕಿನಲ್ಲಿ 400 ರಿಂದ 450 ಅಡಿಯವರೆಗೆ ಬೋರ್ ಹೊಡೆದರೂ ಕೂಡ ನೀರು ಸಿಗುವುದಿಲ್ಲವೆಂದರೆ ನಮ್ಮ ದುರ್ದೈವಕ್ಕೆ ಏನು ಮಾಡಬೇಕೆಂದು ನನಗಂತೂ ಅರ್ಥವಾಗುವುದಿಲ್ಲ. ಇವತ್ತು ಕೆರೆ ಕಾಯಕ ಎಂದು ಕೆರೆ ಹೂಳು ತೆಗೆದು ಆ ಕೆರೆಯನ್ನು ದುರಸ್ತಿ ಮಾಡುವಂತಹ ಕೆಲಸಕ್ಕೆ ಸಾಕಷ್ಟು ಪ್ರಚಾರ ಇದೆ. ಎರಡು ವರ್ಷದಿಂದ ಎಷ್ಟು ಪ್ರಚಾರ ಸಿಕ್ಕಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ ಇತ್ತೀಚೆಗೆ ಈ ಕೆರೆ ಕಾಯಕ ಪ್ರಾರಂಭವಾಯಿತೆಂದು ಹೇಳಿದರು. ಈ ಕೆಲಸವನ್ನು ಲ್ಯಾಂಡ್ ಆರ್ಮಿಯವರಿಗೆ ವಹಿಸಿದ್ದಾರೆ. ನಾನು ಮೊನ್ನೆ ದಿನ ನಮ್ಮಲ್ಲಿ ಏಕೆ ಕೆಲಸ ಪ್ರಾರಂಭ ಮಾಡಲಿಲ್ಲವೆಂದು ಕೇಳಿದಾಗ ಅವರು ಹಣವನ್ನು ಜಮಾ ಮಾಡಲಿಲ್ಲ ನಾವು ಏನು ಮಾಡುವುದು ಎಂದು ಹೇಳಿದರು. ಹಣವನ್ನು ಕೈಯಲ್ಲಿ ಇಟ್ಟುಕೊಳ್ಳದೆ ನಾವು ಸುಮ್ಮನೆ ಪ್ರಚಾರ ಮಾಡುತ್ತೇವೆ, ಉದ್ಘಾಟನೆ ಮಾಡುತ್ತೇವೆ. ನಾವು ಆ ಕಾರ್ಯಕ್ರಮ ಮಾಡಿದ್ದೇವೆಂದರೆ ಇದು ಆಗುವುದಿಲ್ಲ ಇದು ನಿಜವಾಗಿ ರೈತನಿಗೆ ಪ್ರಚಾರ ಮಾಡಿ ಅವನಿಗೆ ನೆಮ್ಮದಿಯನ್ನು ತರುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಇದರ ಬಗ್ಗೆ ಇವತ್ತು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಈ ಕೆರೆಕಾಯಕ, ಕೆರೆಯಲ್ಲಿ ನೀರು ನಿಲ್ಲಿಸತಕ್ಕ ಕೆಲಸ ಜರೂರಾಗಿ ಆಗಬೇಕು. ಯಾವುದು ಮಳೆ ನೀರಿನ ಮೇಲೆ ಅವಲಂಬಿತವಾಗಿರತಕ್ಕಂಥ ನಮ್ಮ ಕೃಷಿಕ ಜಮೀನಿದೆ ಇದಕ್ಕೆ ಒಂದು ಖಾಯಂ ಆಗಿರತಕ್ಕಂಥ ವ್ಯವಸ್ಥೆಯನ್ನು ಮಾಡತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಸಾಕಷ್ಟು ಹಣಕಾಸನ್ನು ಈ ಕಡೆ ಕೊಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಇವತ್ತು ನಮ್ಮ ಹತ್ತಿರ ಏನೇನು ಸೋರ್ಸ್ ಇದೆ ಅದನ್ನು ಉಪಯೋಗಿಸುವಂತಹ ಕೆಲಸವಾಗಬೇಕು. ಅದರ ಜೊತೆಗೆ ಕೇಂದ್ರಕ್ಕೂ ಕೂಡ ಒಂದು ಉತ್ತಮವಾದಂತಹ ವರದಿಯನ್ನು ಕಳುಹಿಸಿ ಇಲ್ಲಿಂದ ಒಂದು ನಿಯೋಗವನ್ನಾದರೂ ತೆಗೆದುಕೊಂಡು ಹೋಗಿ ಆ ಸರ್ಕಾರದ ಜೊತೆ ಮಾತನಾಡತಕ್ಕಂಥ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬಹಳ ಜನ ಗೌರವಾನ್ವಿತ ಸದಸ್ಯರು ರೈತರ ಕಷ್ಟದ ಬಗ್ಗೆ ಹಾಗೂ ಬೆಳೆ ವಿಮೆ ಬಗ್ಗೆ ಮಾತನಾಡಿದರು. ಮಾನ್ಯ ಕೃಷಿ ಸಚಿವರು ಇಲ್ಲಿ ಇದ್ದಾರೆ, ತಾವು ಅನುಭವಿತರಾದರೂ ಕೂಡ ಬೆಳೆ ವಿಮೆಗೆ ಸಂಬಂಧಪಟ್ಟಂತಹ ಫೈಲ್ ಪೂರ್ಣವಾಗಿ ನೋಡಿ ತಿಳಿದುಕೊಳ್ಳಬೇಕಾಗುತ್ತದೆ. ನಮ್ಮ ಹಿಂದಿನ ಕೃಷಿ ಸಚಿವರಿಗೆ ಅಧಿವೇಶನದಲ್ಲಿ ನಾನು ಪ್ರಶ್ನೆ ಹಾಕಿ ಕೇಳಿದರೂ ಕೂಡ ಅದಕ್ಕೆ ಉತ್ತರ ಬರಲಿಲ್ಲ. ನಾನು ಮಾತನಾಡುವಾಗ ಕೇಳಿದಂತಹ ಪ್ರಶ್ನೆಗೂ ಕೂಡ ಅವರು ಉತ್ತರ ಹೇಳಲಿಲ್ಲ. ಈ ಒಂದು ಬೆಳೆ ವಿಮೆ ಏನಿದೆ ಇದು ರೈತರಿಗೆ ಮಾಡತಕ್ಕಂಥ ಒಂದು ಮೋಸ. ಅದರಲ್ಲಿ

ಸಂಪೂರ್ಣವಾಗಿ ಮೋಸ ಇದೆ ಇದನ್ನು ಎಲ್ಲಾ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕಾಗುತ್ತದೆ. ಪಕ್ಷಾತೀತವಾಗಿ ಇದಕ್ಕೆ ನಾವು ಹೋರಾಡಬೇಕಾಗುತ್ತದೆ. ಇದು ಒಂದು ಕಡು ಮೋಸ. ನಾನು ಒಂದು ಪ್ರಶ್ನೆ ಕೇಳಿದ್ದೆ. ಥ್ರೆಶೋಲ್ಡ್ ಯೀಲ್ಡ್ ಎಂದು ಹೇಳುತ್ತಾರೆ. ಹಿಂದಿನ ವರ್ಷದ ಉತ್ಪನ್ನದ ಏನು ಬಂದಿರುತ್ತದೆ ಅದರ ಐದು ವರ್ಷದ ಉತ್ಪನ್ನದ ಆವರೇಜ್ ತೆಗೆದು, ಆ ಒಂದು ಸರಾಸರಿಯನ್ನು ತೆಗೆದುಕೊಂಡು ಈ ವರ್ಷ ಎಷ್ಟು ಉತ್ಪನ್ನ ಬಂದಿದೆ ಅದರ ಮೇಲೆ ಇಷ್ಟು ಪ್ರಮಾಣ ನಿಮಗೆ ಇನ್ಸೂರೆನ್ಸ್ ಸಿಗುತ್ತದೆಂದು ಹೇಳುತ್ತಾರೆ. ಅದರ ಬಗ್ಗೆ ತಾವು ತಮ್ಮ ಅಧಿಕಾರಿಗಳನ್ನು ಕೇಳಬೇಕು. ಅವರಿಗಾದರೂ ಗೊತ್ತಿದೆಯಾ? ಇಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೇನೆ. ಈ ಸಲವಾದರೂ ಅದಕ್ಕೆ ಉತ್ತರ ಕೊಡುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. "ಬೆಳೆ ವಿಮೆ ಮಾಡಿದ ರೈತರಿಗೆ ವಿಮೆ ಸೌಲಭ್ಯ ಸಿಗಬೇಕಾದರೆ ಅನುಸರಿಸಬೇಕಾದ ಮಾನದಂಡಗಳು ಏನು? ಥ್ರೆಶೋಲ್ಡ್ ಯೀಲ್ಡ್ ಎಷ್ಟು ವರ್ಷದ ಸರಾಸರಿ ನೋಡುತ್ತೀರಿ? ಎಲ್ಲಾ ಬೆಳೆಗಳ ಥ್ರೆಶೋಲ್ಡ್ ಯೀಲ್ಡ್ ಸರಾಸರಿ ಎಷ್ಟು ಎನ್ನುವ ತಾಲ್ಲೂಕು ಹಾಗೂ ಹೋಬಳಿವಾರು ವಿವರ ನೀಡುವುದು. ಇದರ ಬಗ್ಗೆ ಹಿಂದಿನ ಅಧಿವೇಶನದಲ್ಲಿ ಕೇಳಿದ ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಪುನಃ ಈ ಬಾರಿ ಕೇಳಿದ್ದೇನೆ ಉತ್ತರ ಬರುತ್ತದೆಯೇ ಎಂದು ನೋಡಬೇಕು. ರೈತರಿಗೆ ಅದರ ಮೇಲೆ ವಿಶ್ವಾಸ ಬರಬೇಕಾದರೆ ಎಲ್ಲಾ ಹೋಬಳಿಗಳಲ್ಲಿ ಮತ್ತು ಎಲ್ಲಾ ಪಂಚಾಯತಿಗಳಲ್ಲಿ ಥ್ರೆಶೋಲ್ಡ್ ಈಲ್ಡ್ ಎಷ್ಟಿದೆ ಎಷ್ಟು ಹಾಕುತ್ತೀರಿ ಎನ್ನುವ ಪ್ರಶ್ನೆಗೆ ಮಾಹಿತಿ ಸಿಗಲಿಲ್ಲ. ನಿಮ್ಮ ಅಧಿಕಾರಿಗಳಿಗೆ ಕೇಳಿದರೆ ಅವರಿಗೆ ಗೊತ್ತಿಲ್ಲ. ಅದು ಯಾವ ರೈತರಿಗೂ ಗೊತ್ತಾಗುವುದಿಲ್ಲ. ಸುಮ್ಮನೆ ಅಲ್ಲಿ ಅಳೆದುಕೊಂಡು ಬರುತ್ತಾರೆ. ಅದಕ್ಕೆ ಒಂದು ಕಮಿಟಿ ಮಾಡಿದ್ದಾರೆ. ಅವರು ಎಲ್ಲಿ ಕುಳಿತುಕೊಂಡು ಕೆಲಸ ಮಾಡುತ್ತಾರೋ, ಹೇಗೆ ಮಾಡುತ್ತಾರೋ ಯಾರಿಗೂ ತಿಳಿಯುವುದಿಲ್ಲ. ಅದನ್ನು ತೆಗೆದುಕೊಂಡು ಬಂದು ನಿಮಗೆ ಇಷ್ಟು ಪರ್ಸೆಂಟಾಗಿದೆ ಎಂದು ಹೇಳುತ್ತಾರೆ. ಇದು ಇನ್ಸೂರೆನ್ಸ್? ಇದರಿಂದ ರೈತರಿಗೆ ಒಳ್ಳೆಯದಾಗುತ್ತದೆಯೇ? ಏಕೆ ರೈತರಿಂದ ಸುಮ್ಮನೆ ದುಡ್ಡು ತುಂಬಿಸಿಕೊಳ್ಳುತ್ತೀರಿ? ಉದಾಹರಣೆಗೆ ಹೇಳುತ್ತೇನೆ, ಅತೀ ಬರ ಬಿದ್ದಂತಹ ಮುಂಡರಗಿ ತಾಲ್ಲೂಕಿಗೆ ಬಹಳ ಸಲ ಇನ್ಸೂರೆನ್ಸ್ ಸಿಗುವುದಿಲ್ಲ. ಏಕೆಂದರೆ 365 ದಿವಸವೂ ಆ ತಾಲ್ಲೂಕಿನಲ್ಲಿ ಬರ ಇರುತ್ತದೆ. ಆ ಬರದಲ್ಲಿ ಒಂದು ಚೀಲ ಶೇಂಗಾವನ್ನು ಒಂದು ಎಕರೆಗೆ ಬಿತ್ತಿದಾಗ ಒಂದು ಚೀಲದ ಮೇಲೆ ಒಂದು ಕೆಜಿ ಬಂದರೂ ಅದಕ್ಕೆ ಇನ್ಸೂರೆನ್ಸ್ ಕೊಡುವುದಿಲ್ಲ. ಇದು ವ್ಯವಸ್ಥೆ. ಆದಕಾರಣ ಅದು ಬದಲಾವಣೆ ಆಗಬೇಕು ಇಲ್ಲದೆ ಇದ್ದರೆ ಇದರಿಂದ ರೈತರಿಗೆ ಮೋಸವಾಗುತ್ತದೆ. ಈ ವರ್ಷ ಕೂಡ ಅನ್ಯಾಯವಾಗಿದೆ. ಇನ್‌ಶ್ಯೂರೆನ್ಸ್ ಹಣ ತುಂಬಬೇಕಾದ ಒಂದು ಇಶ್ಯೂ ಇದೆ ಯಾವ ಸರ್ಕಾರ ತುಂಬಬೇಕಾಗಿತ್ತು ಅದರಲ್ಲಿ ಯಾರ ತಪ್ಪಿದೆ ಎಂಬುದನ್ನು ಮುಂದೆ ನೋಡೋಣ ಆದರೆ ರೈತರಿಂದ 16 ರಿಂದ 18 ಕೋಟಿ ರೂಪಾಯಿ ಇನ್ಸೂರೆನ್ಸ್ ದುಡ್ಡು ಕಟ್ಟಿಸಿಕೊಳ್ಳುತ್ತೀರಿ. ನಿನ್ನೆ ನಾನು ಪ್ರಗತಿ ಪರಿಶೀಲನಾ ಸಭೆಯನ್ನು ನನ್ನ ಕ್ಷೇತ್ರದಲ್ಲಿ ಇಟ್ಟುಕೊಂಡಿದ್ದೆ. ನಿಮ್ಮ ಅಧಿಕಾರಿಗಳನ್ನು ನಮ್ಮ ತಾಲ್ಲೂಕಿಗೆ ಎಷ್ಟು ಪ್ರಮಾಣ ಬರುತ್ತದೆ ಎಂದು ಕೇಳಿದರೆ ಗೊತ್ತಿಲ್ಲ. ಥ್ರೆಶೋಲ್ಡ್ ಯೀಲ್ಡ್ ಎಷ್ಟಿದೆ ಎಂದರೂ ಕೂಡ ಅಧಿಕಾರಿಗಳಿಗೆ ಗೊತ್ತಿಲ್ಲ. ಯಾರು ಇನ್ಸೂರೆನ್ಸ್ ತುಂಬು ಎಂದು ಹೇಳುತ್ತಾರೋ ತುಂಬಿಸುತ್ತಾರೋ ಇದರ ಬಗ್ಗೆ ಅವರಿಗೆ ವಿಚಾರವೇ ಗೊತ್ತಿಲ್ಲ. ಇದನ್ನು ಕೃಷಿ ಇಲಾಖೆ, ಸ್ಟಾಟಿಸ್ಟಿಕಲ್ ಇಲಾಖೆ, ಕಂದಾಯ ಇಲಾಖೆ ಹಾಗೂ ಇನ್ಸೂರೆನ್ಸ್ ಕಂಪನಿ, ಈ ನಾಲ್ಕು ಮಂದಿ ಸೇರಿ ಇದನ್ನು ಟ್ಯಾಲಿ ಮಾಡುತ್ತಾರೆ. ಈ ನಾಲ್ಕು ಇಲಾಖೆಯವರು ಕುಳಿತು

ಮೌಲ್ಯಮಾಪನ ಮಾಡುತ್ತಾರೆ, ಇದು ಯಾವ ರೈತರಿಗೂ ಗೊತ್ತಾಗುವುದಿಲ್ಲ. ಇವರು ಸುಮ್ಮನೆ ಏನೋ ಬರೆದುಕೊಂಡು ಬಂದು ನಿಮ್ಮದು ಇಷ್ಟು ಹಾನಿಯಾಗಿದೆ ಎಂದು ಹೇಳುತ್ತಾರೆ. ಮಾನ್ಯ ಉಪಾಧ್ಯಕ್ಷರೇ, ಉದಾಹರಣೆಗೆ ನನಗೆ ನಮ್ಮ ಗದಗ್ ಜಿಲ್ಲೆಯದು ಒಂದು ಮಾಹಿತಿ ದೊರಕಿದೆ, ಇಲ್ಲಿ ಏನು ಆಗಿದೆ ಎಂಬ ಬಗ್ಗೆ ಉತ್ತರ ಕರ್ನಾಟಕದಲ್ಲಿ ಯಾರಿಗೂ ಗೊತ್ತಿಲ್ಲ, ದಕ್ಷಿಣ ಕರ್ನಾಟಕದಲ್ಲೂ ಯಾರಿಗೂ ಗೊತ್ತಿಲ್ಲ. ಇಲ್ಲಿ ಸುಮ್ಮನೆ ರೈತರ ಕಡೆಯಿಂದ ಹಣ ತುಂಬಿಸಿಕೊಳ್ಳುವುದು, ಆ ರೈತರಿಗೆ ಮೋಸ ಮಾಡುವುದು. ಮಾನ್ಯ ಉಪಾಧ್ಯಕ್ಷರೇ, ನಿಮ್ಮ ತಾಲ್ಲೂಕುಗಳಿಗೂ ಈ ಇನ್‌ಶ್ಯೂರೆನ್ಸ್ ಹಣ ಬರುತ್ತದೆ ನಾನು ಇಲ್ಲಿ ತಮಗೆ ಹೇಳಬೇಕೆಂದರೆ ಗದಗ್ ಜಿಲ್ಲೆಯ ಉಸ್ತುವಾರಿ ಸಚಿವರು ಇವರು ಬಹಳ ಸ್ಟ್ರಾಂಗ್ ಮಂತ್ರಿಗಳಾಗಿದ್ದಾರೆ, ಬಹುಶಃ ಅವರ ಸ್ಟ್ರಾಂಗ್‌ತನದಿಂದ ದೆಹಲಿಗೂ ಹೋಗುವಂತೆ ಮಾಡಿದರು, ಆ ಮಾತು ಬೇರೆ, ಅದನ್ನು ನಾವು ಬೇರೆ ವಿಚಾರ ಬಂದಾಗ ಮಾತನಾಡೋಣ. ನಾನು ಮೊನ್ನೆ ಅವರಿಗೆ ಹೇಳಿದೆ. ಇದರ ಬಗ್ಗೆ ಯಾರು ಏನು ಮಾಡಿದ್ದಾರೆಂಬುದಕ್ಕೆ ಉದಾಹರಣೆಗಾಗಿ ಹೇಳುತ್ತೇನೆ. ನಮ್ಮ ಗದಗ್ ಹೋಬಳಿಯಲ್ಲಿ ಶೇಂಗಾ ಬೆಳೆ ಶೇ. 12ರಷ್ಟು ಆಗಿದೆ, ಇದು ನನಗೆ ತಿಳಿದು ಬಂದ ವಿಚಾರ, ಅದೇ ಬೆಟಗೇರಿ ಹೋಬಳಿಯಲ್ಲಿ ಆಗಿಲ್ಲ, ಇಲ್ಲಿ ಅವರಿಗೆ ಇನ್‌ಶ್ಯೂರೆನ್ಸ್ ಸಿಗುವುದಿಲ್ಲ, ಇಲ್ಲಿ ಜಿಲ್ಲಾಧಿಕಾರಿಗಳನ್ನು ಕೇಳಿ, ನಿಮ್ಮ ಡೆಪ್ಯೂಟಿ ಡೈರೆಕ್ಟರ್‌ರವರನ್ನು ಕೇಳಿ, ಇಲ್ಲಿ ಗದಗ್‌ನಲ್ಲಿ ಶೇ. 12 ರಷ್ಟು ಅಲ್ಲ, ಇನ್ನೂ ಬಹಳ ಆಗಬೇಕಾಗಿತ್ತು. ಇನ್ನು ಬೆಟಗೇರಿ ಹೋಬಳಿಯಲ್ಲಿ ಇನ್ನೂ ಪರಿಸ್ಥಿತಿ ಕೆಟ್ಟದ್ದಾಗಿದೆ. ಅಲ್ಲಿ ಬೆಳೆ ಇಲ್ಲವೇ ಇಲ್ಲ. ಇದಕ್ಕೆ ಇನ್‌ಶ್ಯೂರೆನ್ಸ್ ಹಣ ಸಿಗುವುದೇ ಇಲ್ಲ, ಇದು ಯಾವ ಪದ್ಧತಿ? ಈ ರೀತಿಯಾಗಿ ರಾಜ್ಯದ ತುಂಬಾ ಅನ್ಯಾಯವಾಗಿದೆ, ಇದರ ಬಗ್ಗೆ ನಾವೆಲ್ಲಾ ಶಾಸಕರುಗಳು ಪಕ್ಷಾತೀತವಾಗಿ ಲಕ್ಷ್ಯ ಕೊಡಬೇಕಾಗುತ್ತದೆ, ಇಲ್ಲದಿದ್ದರೆ ರೈತ ರೊಚ್ಚಿಗೇಳುತ್ತಾನೆ. ರೈತರು ಒಮ್ಮಿಂದೊಮ್ಮೆಗೆ ದಂಗೆ ಎದ್ದರೆ ಬಹಳ ಕೆಟ್ಟದಾದೀತು, ಇದರಿಂದ ದೇಶ ಉಳಿಯುವುದಿಲ್ಲ, ರಾಜ್ಯ ಉಳಿಯುವುದಿಲ್ಲವೆನ್ನುವಂತಹ ಎಚ್ಚರಿಕೆಯನ್ನು ಸಹ ನಾನು ಈ ಸಂದರ್ಭದಲ್ಲಿ ಕೊಡುತ್ತೇನೆ. ಇಲ್ಲಿ ಅವರಿಗೆ ಬೆಳೆ ಹಾಳಾದರೂ ಇನ್‌ಶ್ಯೂರೆನ್ಸ್ ಹಣ ಸಿಗುವುದಿಲ್ಲ, ಈ ರೀತಿ ಆದರೆ ಏಕೆ ರೈತರಿಂದ ಇನ್‌ಶ್ಯೂರೆನ್ಸ್ ಹಣವನ್ನು ತುಂಬಿಸಿಕೊಳ್ಳಬೇಕು? ಈ ಬಗ್ಗೆ ನಿಮ್ಮ ಅಧಿಕಾರಿಗಳನ್ನು ಕರೆದು ಕೇಳಿ, ನಿಮ್ಮ ಡೈರೆಕ್ಟರ್‌ಗಳನ್ನು ಕರೆದು ಕೇಳಿ, ಥ್ರೆಶ್‌ಹೋಲ್ಡ್ ಈಲ್ಡ್ ಹೋಬಳಿವಾರು ಎಷ್ಟು ಇದೆಯೆಂದು ಹೇಳುವಂತೆ ಹೇಳಿ. ಈ ಬಗ್ಗೆ ಒಂದು ಮಾಹಿತಿಯನ್ನು ತೆಗೆದುಕೊಂಡು ಬನ್ನಿ ಎಂದು ಇಲಾಖೆಯವರಿಗೆ ಹೇಳುತ್ತೀರಿ, ಆದರೆ ನಿಮ್ಮ ಅಸಿಸ್ಟೆಂಟ್ ಡೈರೆಕ್ಟರಿಗೆ ಗೊತ್ತಿಲ್ಲ, ನಿಮ್ಮ ಡೆಪ್ಯೂಟಿ ಡೈರೆಕ್ಟರಿಗೆ, ನಿಮ್ಮ ರೆವಿನ್ಯೂ ಅಧಿಕಾರಿಗಳಿಗೆ ಗೊತ್ತಿಲ್ಲ, ಥ್ರೆಶ್‌ಹೋಲ್ಡ್ ಈಲ್ಡ್ ಎಷ್ಟಿದೆ ಎಂದು ಯಾರಿಗೂ ಗೊತ್ತಿಲ್ಲ. ಸುಮ್ಮನೆ ಅಂಕಿ ಸಂಖ್ಯೆಗಳನ್ನು ತರಿಸಿಕೊಳ್ಳುತ್ತಾರೆ. ಆ ಇನ್‌ಶ್ಯೂರೆನ್ಸ್ ಕಂಪೆನಿಯವರು ತಮಗೆ ತಿಳಿದದ್ದನ್ನು ಬರೆಯುತ್ತಾರೆ, ಇಷ್ಟು ಆಗಿದೆ ಎಂದು ಸುಮ್ಮನೆ ಹೇಳುತ್ತಾರೆ. ಇದರ ಬಗ್ಗೆ ನಿಜವಾಗಿ ಹೇಳಬೇಕೆಂದರೆ, ಈ ವರ್ಷ 132 ಕೋಟಿ ರೂ.ಗಳು ಎಂದು ಮಾಡಿದ್ದಾರೆ, ಅದು ಸಾವಿರ ಕೋಟಿ ರೂ.ಗಳು ಆಗಬೇಕಾಗಿತ್ತು. ನೀವು ಇದನ್ನು ಪ್ರಾಮಾಣಿಕವಾಗಿ ಲೆಕ್ಕಾಚಾರ ಮಾಡಿದ್ದರೆ ಸಾವಿರ ಕೋಟಿ ರೂಪಾಯಿಗಳು ನಮ್ಮ ರೈತರಿಗೆ ಇನ್‌ಶ್ಯೂರೆನ್ಸ್ ಹಣ ಬರಬೇಕಾಗಿತ್ತು, ಅನ್ಯಾಯ ಮಾಡಿದ್ದಾರೆ. ಇದು ಮೂಲ ಇಲ್ಲದ ಅನ್ಯಾಯ, ಈ ಕಡೆ ನೀವು ರೊಕ್ಕ ತುಂಬಲಿಲ್ಲ, ಮಾಡಲಿಲ್ಲವೆಂದು ಹೇಳುವುದು. ಇದು ಕೇಂದ್ರ ಸರ್ಕಾರದ ತಪ್ಪೋ, ನಿಮ್ಮ ತಪ್ಪೋ ಎನ್ನುವ ಬಗ್ಗೆ ಮುಂದೆ ಹೇಳುತ್ತೇನೆ. ಇಲ್ಲಿ ರೈತರಿಗೆ ಏನು ಅನ್ಯಾಯವಾಗುವುದು ಇದೆ, ಇದನ್ನು ಸರಿಪಡಿಸಿ

ಎಂದು ಹೇಳುತ್ತೇನೆ. ಸುದೈವದಿಂದ ಈ ವಿಚಾರ ನಾಳೆ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರುತ್ತದೆ, ಇದಕ್ಕೆ ಸರಿಯಾದಂತಹ ಉತ್ತರವನ್ನು ತಾವು ನಾಳೆ ಹೇಳಬೇಕಾಗುತ್ತದೆ. ನೀವು ಸರಿಯಾದ ಉತ್ತರವನ್ನು ಹೇಳದಿದ್ದರೆ ಖಂಡಿತವಾಗಿ ನಾನು ಬಿಡುವುದಿಲ್ಲ, ಇಲ್ಲಿ ನಾನು ಎಲ್ಲಾ ಶಾಸಕರಿಗೂ ಹೇಳುತ್ತೇನೆ, ಈ ಅನ್ಯಾಯವನ್ನು ಸರಿಪಡಿಸದಿದ್ದರೆ, ನಾನು ಬಿಡುವುದಿಲ್ಲ. ತಾವು ದಯಮಾಡಿ ರೈತರಿಗೆ ಕೊಡಬೇಕಾದಂತಹ ಹಣವನ್ನು ಅನ್ಯಾಯ ಮಾಡಬೇಡಿ, ಆದುದರಿಂದ ಮಾನ್ಯ ಉಪಾಧ್ಯಕ್ಷರೇ ಎಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸಿ, ರೈತರಿಗೆ ಹಣವನ್ನು ಕೊಡಿ. ತಾವು ದಯಮಾಡಿ ಎಲ್ಲಾ ಕಡೆಯಿಂದ ಲೆಕ್ಕವನ್ನು ತರಿಸಿ, ನಾಳೆ ದಿವಸ ಸದನದಲ್ಲಿ ಉತ್ತರವನ್ನು ಕೊಡಬೇಕಾಗುತ್ತದೆ. ತಾವು ಹೊಸದಾಗಿ ಮಂತ್ರಿಗಳಾಗಿ ಬಂದಿದ್ದೀರಿ, ತಾವು ಬಹಳ ಅನುಭವಸ್ಥರು ಆಗಿದ್ದೀರೀ, ಅಷ್ಟೇ ಅಲ್ಲ, ನೀವು ಈ ಅಗ್ನಿ ಪರೀಕ್ಷೆಗೆ ತಡವಾಗಿ ಬಂದವರು. ಇದೇ ಅನ್ಯಾಯ ಮಾಡಿ ಹಿಂದೆ ಒಬ್ಬ ಮಂತ್ರಿಯವರು ಹೋಗಿ ಬಿಟ್ಟರು, ಇಲ್ಲಿ ರೈತರಿಗೆ ಅನ್ಯಾಯ ಮಾಡಿದವರು ಯಾರೂ ಉಳಿಯುವುದಿಲ್ಲ. ನಾನು ಅವರಿಗೂ ಹೇಳಿದ್ದೇನೆ, ತಾವು ಇದನ್ನು ತಿಳಿದುಕೊಳ್ಳಬೇಕು, ನೀವು ಅಭ್ಯಾಸವನ್ನು ಮಾಡಿ ಉತ್ತರವನ್ನು ಹೇಳಬೇಕೆಂದು ಹೇಳಿದೆವು, ಅವರಿಗೆ ಕೊನೆಗೂ ಉತ್ತರವನ್ನು ಹೇಳುವುದಕ್ಕೆ ಆಗಲಿಲ್ಲ. ತಾವು ದಯಮಾಡಿ ಇದನ್ನು ತಿಳಿದುಕೊಳ್ಳಬೇಕಾಗುತ್ತದೆ, ನಾಳೆ ದಿವಸ ಇದನ್ನು ಸದನದಲ್ಲಿ ಹೇಳಬೇಕಾಗುತ್ತದೆ. ಎಲ್ಲಾ ಹೋಬಳಿಗಳಲ್ಲೂ, ಎಲ್ಲಾ ಪಂಚಾಯತ್‌ಗಳಲ್ಲೂ ಕೂಡ, ಏನಾಗಿದೆ ಎಂಬ ಬಗ್ಗೆ ಲಿಸ್ಟ್ ಕೊಡಬೇಕಾಗುತ್ತದೆ. ಈ ಬೆಳೆಗೆ ಇಷ್ಟು ಥ್ರೆಶ್‌ಹೋಲ್ಡ್ ಈಲ್ಡ್ ಇದೆ, ಎಂಬುದನ್ನು ಹೇಳಬೇಕಾಗುತ್ತದೆ, ಏಕೆಂದರೆ ಇದು ಪಾರದರ್ಶಕ. ತಾವು ಇಲ್ಲಿ ಪಾರದರ್ಶಕತೆಯ ಕಾಯಿದೆಯನ್ನು ತಂದಿದ್ದೀರಿ, ಇಲ್ಲಿ ರೈತರನ್ನು ಕಗ್ಗತ್ತಲಲ್ಲಿ ಇಟ್ಟು ನೀವು ಇನ್‌ಸ್ಯೂರೆನ್ಸ್ ಇಷ್ಟು ಇದೆ ಎಂದು ಹೇಳಿ, ತೆಗೆದುಕೊಂಡು ಹೋಗು ಎಂದು ಹೇಳುತ್ತೀರಿ. ಅವನಿಗೆ ಸಾವಿರ ರೂ.ಗಳು ಬೆಳೆಹಾನಿ ಇದ್ದರೆ, 10 ರೂ.ಗಳನ್ನು ಕೈಗೆ ಕೊಟ್ಟು ಕಳುಹಿಸುತ್ತೀರಿ, ಇದು ಯಾವ ಇನ್‌ಶ್ಯೂರೆನ್ಸ್? ಆದುದರಿಂದ ಇದನ್ನು ದಯವಿಟ್ಟು ಸರಿಮಾಡಬೇಕೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವರು ಇದನ್ನು ತುಂಬುವುದು ಯಾವಾಗ? ರೈತ ಮಾರ್ಚ್ ತಿಂಗಳ ಕೊನೆಗೆ ಸಾಲದ ಹಣವನ್ನು ಕಟ್ಟಬೇಕು, ಇದು ತಮಗೂ ಗೊತ್ತಿದೆ, ಆಮೇಲೆ ಅವನು ಏಪ್ರಿಲ್, ಮೇ ತಿಂಗಳಲ್ಲಿ ಎಲ್ಲವನ್ನು ತಯಾರು ಮಾಡಿಕೊಳ್ಳಬೇಕಾಗುತ್ತದೆ. ರೈತರಿಗೆ ತೊಂದರೆಯಾದಾಗ ಬರ ಬಂದಾಗ ಇನ್‌ಶ್ಯೂರೆನ್ಸ್ ಹಣವನ್ನು ಕೊಡಬೇಕು. ಇದನ್ನು 6 ತಿಂಗಳು, ವರ್ಷದ ನಂತರ ಕೊಟ್ಟರೆ ಅದು ಬಡ್ಡಿಗೆ ಹೋಗುತ್ತದೆ. ನೀವು ಶೇ. 5 ಶೇ.10ರಷ್ಟು ಇನ್‌ಶ್ಯೂರೆನ್ಸ್ ಹಣ ಏನು ಕೊಡುತ್ತೀರಿ. ಇದು ಬಡ್ಡಿಗೆ ಹೋಗುತ್ತದೆ. ಇದು ನಿಜವಾಗಿ ಸಲ್ಲಬೇಕಾದ್ದು ಸಲ್ಲುತ್ತಿಲ್ಲ, ಇದು ಬದಲಾವಣೆಯಾಗಬೇಕು. ಇದು ಯಾವಾಗ ಆಗುತ್ತದೆ, ಬೆಳೆ ಬರುತ್ತದೆ, ಅದನ್ನು ತಕ್ಷಣ ವ್ಯಾಲ್ಯೂಯೇಶನ್ ಮಾಡಿ, ಅದರ ಮೌಲ್ಯಮಾಪನ ಮಾಡಿ ಎಷ್ಟು ಪರ್ಸೆಂಟ್ ಇನ್‌ಶ್ಯೂರೆನ್ಸ್ ಬರುತ್ತದೆ, ಅದು ತಕ್ಷಣ ಆ ರೈತನ ಖಾತೆಗೆ ಜಮಾ ಆಗುವಂತಹ ವ್ಯವಸ್ಥೆಯಾಗಬೇಕು. ಆ ರೀತಿಯಾಗದಿದ್ದರೆ ಇದಕ್ಕೆ ಯಾವ ಅರ್ಥವೂ ಇಲ್ಲ, ಇದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಕೂಡಿ ಮಾಡುವಂತಹ ಕೆಲಸವಾಗಿದೆ, ತಾವು ಇದಕ್ಕೆ ಕೇಂದ್ರ ಸರ್ಕಾರ ಹಣವನ್ನು ರಿಲೀಜ್ ಮಾಡಿದೆಯೋ, ಇಲ್ಲವೋ, ಎಂಬುದನ್ನು ಹೇಳಬೇಕಾಗುತ್ತದೆ. ಇದು ಯಾವಾಗ ಬಂತು ಎಂಬುದನ್ನು ಹೇಳಬೇಕಾಗುತ್ತದೆ, ನೀವು ಎಲ್ಲವನ್ನು ಕೇಂದ್ರ ಸರ್ಕಾರದ

ಮೇಲೆ ಹೇಳಿದರೂ ತಪ್ಪಾಗುತ್ತದೆ, ಒಂದು ವೇಳೆ ಕೇಂದ್ರ ಸರ್ಕಾರದಿಂದ ಹಣ ಬರದಿದ್ದರೆ ಅದು ತಪ್ಪಾಗುತ್ತದೆ. ಇದರ ಬಗ್ಗೆ ನಿಮ್ಮ ಟ್ರೆಜರಿಗೆ ಎಷ್ಟು ಹಣ ಜಮವಾಗಿದೆ, ಯಾವತ್ತು ಜಮಾ ಆಗಿದೆ, ಎಂಬುದನ್ನು ಹೇಳಬೇಕಾಗುತ್ತದೆ. ತಾವು ಇದನ್ನು ಯಾರದ್ದಾದರೂ ಪಗಾರ ಕೊಡುವುದಕ್ಕೆ ಕೊಟ್ಟಿರುತ್ತೀರಿ, ನಿಮ್ಮ ಹತ್ತಿರ ಪಗಾರ ಕೊಡುವುದಕ್ಕೆ ಹಣದ ಗತಿಯಿಲ್ಲ. ಇದು ಎಲ್ಲರಿಗೂ ಗೊತ್ತಿದೆ, ಇದರಲ್ಲಿ ಯಾವುದು ಮುಚ್ಚುಮರೆ ಏನೂ ಇಲ್ಲ, ಪರಿಸ್ಥಿತಿ ಇಷ್ಟು ಕಷ್ಟದಲ್ಲಿದ್ದರೂ 48 ಜನ ಮಂತ್ರಿಗಳನ್ನು ಮಾಡಿದ್ದೀರಿ. ಇವರ ಕಾಲದಲ್ಲಿ ಎಂಥೆಂಥದ್ದು ನಡೆದಿದೆ, ಇಲ್ಲಿ ಒಬ್ಬ ಮಂತ್ರಿ ಇರುತ್ತಾರೆ, ಅವರನ್ನು ಆಗಲೇ ತೆಗೆದು ಚೇರ್ಮನ್ ಮಾಡುತ್ತಾರೆ, ಮಂತ್ರಿ ಪದವಿಯಿಂದ ತೆಗೆದರೆ ಮತ್ತೆ ಏಕೆ ಅವರನ್ನು ಛೇರ್ಮನ್ ಮಾಡುತ್ತೀರಿ? ಈ ರೀತಿಯಾಗಿ ತೆಗೆದು ಮತ್ತೊಂದು ಸ್ಥಾನಕ್ಕೆ ಏಕೆ ಹಾಕುತ್ತೀರಿ? ಇದಕ್ಕೆ ಕಾರಣವೇನು? ಈ ಕಾರಣದಿಂದ ಹೇಳುತ್ತೇನೆ. ಇಲ್ಲಿ ನಿಮ್ಮ ಹಕ್ಕು ಇದ್ದರೂ ಕೂಡ ಇದು ಸರ್ಕಾರದ ದುಡ್ಡು, ಜನರ ದುಡ್ಡು, ಅನ್ಯಾಯವಾಗುತ್ತದೆ. ಇಲ್ಲಿ ಎಷ್ಟು ಜನ ಮಂತ್ರಿಗಳು? ಈಗಾಗಲೇ 48 ಜನ ಮಂತ್ರಿಗಳನ್ನು ಮಾಡಿದ್ದೀರಿ, ಇನ್ನು ಎಷ್ಟು ಜನರನ್ನು ಮಾಡುತ್ತೀರೋ, ಅದು ಅವರಿಗೆ ಗೊತ್ತು. ಸರ್ಕಾರ ಇಷ್ಟೊಂದು ಕಷ್ಟದಲ್ಲಿ ಇದ್ದಾಗ, ನೌಕರರಿಗೆ ಪಗಾರವನ್ನು ಕೊಡುವುದಕ್ಕೆ ಕಷ್ಟವಿರುವಾಗ ಇದಕ್ಕೆ, ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರ ಆಯೋಗವನ್ನು ತಾವು ಮಾಡಿದ್ದೀರಿ, ಅವರು ಇದನ್ನೇ ಹೇಳಿದ್ದಾರೆ.

ಶ್ರೀ ಎಂ. ಮಹದೇವ: ನಿಮ್ಮ ಆಡಳಿತ ಕಾಲದಲ್ಲಿ ಎಷ್ಟು ಜನ ಮಂತ್ರಿಗಳನ್ನು ಮಾಡಿದ್ದೀರಿ?

ಒಬ್ಬ ಮಾನ್ಯ ಸದಸ್ಯರು: ಅದು ಲೆಕ್ಕ ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಅದಕ್ಕೆ ನಾವು ಇಲ್ಲಿ ಬಂದು ಕುಳಿತೆವು, ನೀವು ಇಲ್ಲಿ ಬಂದು ಕುಳಿತು ಕೊಳ್ಳುತ್ತೀರಾ? ತಾವು ದಯವಿಟ್ಟು ಕೇಳಿ, ನಾವು ಮಾಡಿದಂತಹ ತಪ್ಪನ್ನು ನೀವು ಮಾಡಬೇಕೆಂದು ಇಲ್ಲ. ಇಲ್ಲಿ ನೀವು ಕುಳಿತುಕೊಂಡು ಬೈಯ್ದಿದ್ದಿರಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಹಾರ್ನಳ್ಳಿ ರಾಮಸ್ವಾಮಿಯವರು ಎಲ್ಲಾ ಮಂಡಳಿಗಳನ್ನು ರದ್ದು ಮಾಡಿ ಎಂದು ಹೇಳಿದ್ದಾರೆ, ನೀವು ಇಲ್ಲಿ ಪೈಪೋಟಿ ಮಾಡಿ, ನೀವು 40 ಮಾಡಿದ್ದೀರಿ. ನಾವು 48 ಮಾಡುತ್ತೇವೆ, 108 ಮಾಡುತ್ತೇವೆಂದು ಹೇಳಿ. ಎಲ್ಲರೂ ಕೂಡಿ ದೇಶ ಕಾಯಿದೆ, ರಾಜ್ಯ ಕೊಳ್ಳೆ ಹೊಡೆದು ಮನೆಗೆ ಹೋಗೋಣ. ಇದು ದೇಶದ ಪರಿಸ್ಥಿತಿ ಇದು ಯಾರು ಹುಡುಗಾಟಿಕೆಗೆ ಆಡುವ ಮಾತಲ್ಲ? ಆದುದರಿಂದ ನಾನು ಮಂತ್ರಿಗಳಿಗೆ ಹೇಳುವುದೇನೆಂದರೆ ಸಾಧ್ಯವಾದಷ್ಟು ಮಂತ್ರಿಗಳು ರಾಜೀನಾಮೆಯನ್ನು ಕೊಡಿ. ಇಲ್ಲಿ ನಿಮ್ಮನ್ನು ಮಾನ್ಯ ಮುಖ್ಯಮಂತ್ರಿಯವರು ತೆಗೆಯುವುದಕ್ಕಾಗುವುದಿಲ್ಲ. ಈ ಪರಿಸ್ಥಿತಿಯನ್ನು ನಾನು ನೋಡಿದ್ದೇನೆ, ಅವರಿಗೂ ಇದು ಕಷ್ಟದ ಪರಿಸ್ಥಿತಿಯಾಗಿದೆ. ಇಲ್ಲಿ ನೀವೇ ರಾಜೀನಾಮೆಯನ್ನು ಕೊಟ್ಟರೆ, ಜನರು ನಿಮ್ಮನ್ನು ಬಹಳ ಹಾಡಿಹೊಗಳುತ್ತಾರೆ. ಎಂತಹ ಒಳ್ಳೆಯ ಜನರು ಇವರು ಎಂದು ಹೇಳುತ್ತಾರೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ನಿಮ್ಮಿಂದ ರಾಜೀನಾಮೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ಅವರು ಬಹಳ ವೀಕ್ ಆಗಿ ಬಿಟ್ಟಿದ್ದಾರೆ. ಆದ್ದರಿಂದ ನೀವೇ ರಾಜೀನಾಮೆ ಕೊಡಿರಿ.

ಶ್ರೀ ಬಿ.ಆರ್. ಯಾವಗಲ್: ಮಾನ್ಯ ಪಾಟೀಲರವರೇ, ನೀವು ಐದು ವರ್ಷಗಳು ಅದಿಕಾರದಲ್ಲಿ ಇದ್ದೀರಿ, ಆಗ ಯಾವಾಗಲಾದರೂ ನೀವು ರಾಜೀನಾಮೆ ಕೊಡುವ ಬಗ್ಗೆ ವಿಚಾರ ಮಾಡಿದ್ದೀರಾ?

ಶ್ರೀ ಎಸ್. ಎಸ್. ಪಾಟೀಲ್: ನಾವು ಆಗ ವಿಚಾರ ಮಾಡಿದ್ದೇವೆ, ಇದು ತಮಗೂ ಗೊತ್ತಿದೆ ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ ನಾನು ಹಿಂದೆ ಒಮ್ಮೆ ನಮ್ಮ ಪಗಾರ ಏರಿಸುವಾಗ ನಾನು ವಿರೋಧ ಮಾಡಿದೆ, ಬಹಳ ಜನ ನಮ್ಮ ಮಿತ್ರರು ಬೈದ್ದುರು ತೆಗೆದುಕೊಳ್ಳುವುದನ್ನು ಬಿಟ್ಟರೆ ರಾಜ್ಯ ಏನು ಉದ್ದಾರವಾಗುವುದಿಲ್ಲ. ನಾವು ಎಷ್ಟು ಮಹಾ ಪಗಾರ ತೆಗೆದುಕೊಳ್ಳುತ್ತೇವೆ ನಾವು ಶೇ. 70ರಷ್ಟು ಪಗಾರವನ್ನು ನೌಕರರಿಗೆ ಕೊಡುತ್ತೇವೆ, ಇದನ್ನು ಕೇರಳದ ಮುಖ್ಯಮಂತ್ರಿಯವರು ಬಹಳ ಕಟ್ಟುನಿಟ್ಟಾಗಿ ಕಟ್ ಮಾಡಿದ್ದಾರೆ. ಆದರೆ ಇನ್ನೂ ಅವರಿಗೆ ಸುಧಾರಣೆ ಮಾಡುವುದಕ್ಕೆ ಆಗಿಲ್ಲ, ಇಲ್ಲಿ ಇದುವರೆಗೂ ನಮ್ಮ ರೈತರಿಗೆ ಇನ್‌ಶ್ಯೂರೆನ್ಸ್ ಹಣವನ್ನು ತುಂಬಿಲ್ಲ, ಇದಕ್ಕೆ ಹಣವಿಲ್ಲವೆಂದು ಹೇಳುತ್ತೀರಿ. ಇಲ್ಲಿ 48, 50, ಜನ ಎಂದು ಮಂತ್ರಿಗಳನ್ನು ಮಾಡಿ ತಿಂಗಳಾದರೆ ದುಡ್ಡು ತೆಗೆದು ತೆಗೆದು ಕೊಡುತ್ತೀರಿ, ಇದಕ್ಕೆ ಎಲ್ಲಿಂದ ದುಡ್ಡು ಬರುತ್ತದೆ? ಅವರಿಗೆ ಭತ್ಯೆ ಎಲ್ಲವನ್ನು ಕೊಡುತ್ತೀರಿ, ಇದನ್ನು ಕಡಿಮೆ ಮಾಡಿದ್ದರೆ ರೈತರಿಗೆ ಕೊಡುವುದಕ್ಕೆ ಆಗುತ್ತಾ ಇತ್ತು. ಆ ಕಾರಣದಿಂದ, ಮಾನ್ಯ ಕೃಷಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಇಲ್ಲಿ ಏನು ಇನ್‌ಶ್ಯೂರೆನ್ಸ್ ಹಣ ಅನ್ಯಾಯವಾಗಿದೆ ಅದನ್ನು ಮೊದಲು ಸರಿಪಡಿಸಿ. ಇಲ್ಲಿ ಏನು ಇನ್‌ಶ್ಯೂರೆನ್ಸ್ ಹಣ ಅನ್ಯಾಯವಾಗಿದೆ ಅದನ್ನು ಮೊದಲು ಸರಿಪಡಿಸಿ. ಇಲ್ಲಿ ತಾವು ಹೇಳಿದಂತೆ 132 ಕೋಟಿ ರೂಪಾಯಿಗಳೆಂದರೆ ನಾನು ಒಪ್ಪುವುದಿಲ್ಲ, ಇದು ಸರಿಯಾಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರೇ, ಇಲ್ಲಿ ಅನ್ಯಾಯವಾಗಿದೆ, ಕೇಂದ್ರ ಸರ್ಕಾರ ಸಾವಿರ ಕೋಟಿ ರೂಪಾಯಿಗಳಾದರೂ ಕೊಡುವುದಕ್ಕೆ ತಯಾರಿದೆ. ಇಲ್ಲಿ ನಿಮ್ಮ ಇಲಾಖೆಯವರು ಸರಿಯಾಗಿ ವ್ಯಾಲ್ಯುಯೇಷನ್ ಮಾಡದೇ ಅನ್ಯಾಯವಾಗಿದೆ. 132 ಕೋಟಿ ರೂಪಾಯಿಗಳಲ್ಲ ಅದು. ನೀವು ನಿಮ್ಮ ಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಲೆಕ್ಕಮಾಡಿ ನೋಡಿ ನಮ್ಮ ಕ್ಷೇತ್ರದಲ್ಲಿ ಎಷ್ಟಾಗಿದೆ ಎಂದು ಲೆಕ್ಕ ಹಾಕಿದರೆ ಇಲ್ಲಿ ಎರಡು ಪಟ್ಟು, ಮೂರು ಪಟ್ಟುಗಳಷ್ಟು ಹಣ ಕೊಡಬೇಕಾಗುತ್ತದೆ. ಇಲ್ಲೇ ಕುಳಿತುಕೊಂಡು ಲೆಕ್ಕ ಮಾಡಿ ಅಧಿಕಾರಿಗಳು ಅನ್ಯಾಯ ಮಾಡಿದ್ದಾರೆ. ಅವರು ಯಾರ ಎದುರಿಗೂ ಮಾಡಲಿಲ್ಲ, ಯಾವ ಶಾಸಕರನ್ನು ಕರೆಯಲಿಲ್ಲ, ಯಾವ ಪಂಚಾಯತ್ ಚೇರ್ಮನ್‌ಗಳನ್ನು ಕರೆಯಲಿಲ್ಲ, ಹೇಗೋ ಮಾಡಿ ಛೇರ್ಮನ್ನರ ಸಹಿಯನ್ನು ಮಾಡಿಸಿಕೊಂಡು ಬರುತ್ತಾರೆ. ಅವರಿಗೆ ಏನೂ ಗೊತ್ತಿರುವುದಿಲ್ಲ. ಇಲ್ಲಿ ಏನು ಪರಿಸ್ಥಿತಿ ಇದೆಯೆಂಬುದು ಅಲ್ಲಿ ಚೇರ್ಮನ್‌ಗೆ ಗೊತ್ತಿರುವುದಿಲ್ಲ, ಈ ಕಾರಣದಿಂದ ನಾನು ಹೇಳುವಂಥಾದ್ದು ಮೊದಲು ಇದನ್ನು ವ್ಯಾಲ್ಯುಯೇಷನ್ ಮಾಡಿಸಿ. ಇದರಲ್ಲಿ 132ಕೋಟಿ ರೂಪಾಯಿಗಳ ಅನ್ಯಾಯವಾಗಿರುವಂಥಾದ್ದನ್ನು ಸರಿಪಡಿಸಿ, ಇನ್ನು ಎಷ್ಟು ಬರಬೇಕಾಗಿದೆಯೆಂಬುದರ ಬಗ್ಗೆ ವ್ಯಾಲ್ಯುಯೇಷನ್ ಮಾಡಿಸಿ ಇದನ್ನು ತಕ್ಷಣ ತುಂಬಬೇಕು. ರಾಜ್ಯದಲ್ಲಿ, ನಿಮಗೆ ಏನೇ ತೊಂದರೆ ಇದ್ದರೂ, ಈ ರೈತರ ಹಣ ತುಂಬುವುದು ಏನಿದೆ ಅದನ್ನು ತುಂಬಬೇಕು. ಅವರು ಇನ್ನು ಬಿತ್ತಬೇಕು, ಬೆಳೆಯಬೇಕು, ಅವರು ಇನ್ನು ಕೆಲಸ ಮಾಡಬೇಕಾಗುತ್ತದೆ. ಈಗಾಗಲೇ ಅವರು ಬಹಳ ಕಷ್ಟದಲ್ಲಿದ್ದಾರೆಂಬುದು ತಮಗೆಲ್ಲಾ ಗೊತ್ತಿದೆ.

5.00 ಪಿಎಂ

ಸರ್ವಜ್ಞ ಒಂದು ಮಾತನ್ನು ಹೇಳುತ್ತಾನೆ. ಅದೇನೆಂದರೆ, "ಒಕ್ಕಲಿಗನೊಕ್ಕಿದರೆ ಉಕ್ಕುವುದು ಜಗವೆಲ್ಲಾ ಒಕ್ಕಲಿಗನೊಕ್ಕದಿರೆ ಬಿಕ್ಕುವುದು ಜಗವೆಲ್ಲಾ", ಎಂದು ಆ ಒಕ್ಕಲು ಬಿಟ್ಟರೆ ನಾವು ಏನಾಗುತ್ತೇವೆ, ಯಾರಿಗೂ ಪಗಾರವಿಲ್ಲ, ಏನೂ ಇಲ್ಲ ಅಲ್ಲೋಲ ಕಲ್ಲೋಲ ಆಗುತ್ತದೆ, ಈ ಕಾರಣದಿಂದ ನಾವು ಒಕ್ಕಲಿಗನ ಹಿತವನ್ನು ಕಾಪಾಡಬೇಕಾಗುತ್ತದೆ, ಅದಕ್ಕಾಗಿ ನಾವೆಲ್ಲರೂ ತ್ಯಾಗ ಮಾಡಬೇಕಾಗುತ್ತದೆ. ಅದನ್ನು ಮಾಡಲು ಖಂಡಿತವಾಗಿಯೂ ಇಂತಹದ್ದರಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಿ. ಈ 132 ಕೋಟಿ ರೂಪಾಯಿಗಳನ್ನು ತುಂಬುವಲ್ಲಿ ಬಹಳ ಅನ್ಯಾಯವಾಗಿದೆ ಇದಕ್ಕೆ ನನ್ನ ಕ್ಷೇತ್ರದ ಒಂದು ಉದಾಹರಣೆ ಹೇಳಿದೆ ಯಾವ ಹೋಬಳಿ ಇದ್ದುದರಲ್ಲಿ ಚೆನ್ನಾಗಿತ್ತೋ ಅದಕ್ಕೆ ವಿಮೆ ಸಿಕ್ಕಿದೆ, ಯಾವುದು ಅತೀ ಕೆಟ್ಟಿತ್ತೋ ಅದಕ್ಕೆ ವಿಮೆ ಸಿಕ್ಕಿಲ್ಲ. ನನ್ನ ಕ್ಷೇತ್ರದಲ್ಲಿ ಬೆಟಗೇರಿ ಎಂಬ ಹೋಬಳಿ ಬರುತ್ತದೆ, ಅಲ್ಲಿ ಬೆಳೆಯೇ ಬಂದಿಲ್ಲ, ಅವರಿಗೆ ವಿಮೆ ಇಲ್ಲ, ನಾವು ಆ ಹಳ್ಳಿಗಳಲ್ಲಿ ಅಡ್ಡಾಡುವುದಕ್ಕು ತೊಂದರೆಯಾಗಿದೆ, ಇಂತಹ ಸ್ಥಿತಿ ಗದಗ್, ಮುಂಡರಗಿ ಎಂದಲ್ಲ ಇಡೀ ರಾಜ್ಯದಲ್ಲಿ ಇದೆ. ಇಡೀ ರಾಜ್ಯದಲ್ಲಿ ಥ್ರೆಶೋಲ್ಡ್ ಈಲ್ಡ್ ಎಂದು ತೆಗೆದು ವಿಮಾ ಕಂಪನಿಯವರು ಮೌಲ್ಯಮಾಪನ ಮಾಡುತ್ತಾರೆ, ಅದು ಎಷ್ಟು ಎಂಬುದನ್ನು ಅವರು ತಮ್ಮಲ್ಲಿ ಇಟ್ಟುಕೊಂಡು ಕುಳಿತಿದ್ದಾರೆ. ಆ ಮಾಹಿತಿಯನ್ನು ತಾವು ತರಿಸಿ ನೇರವಾಗಿ ಎಲ್ಲಾ ಪಂಚಾಯಿತಿಯಲ್ಲಿ ಮತ್ತು ತಾಲ್ಲೂಕು ಪಂಚಾಯಿತಿ ಕಛೇರಿಗಳಲ್ಲಿ ಪ್ರಕಟಿಸಬೇಕು. ಆಗ ಮಾತ್ರ ಪ್ರಾಮಾಣಿಕವಾದ ವಿಮೆಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬರದ ಬಗ್ಗೆ ಈಗಾಗಲೇ ಸಾಕಷ್ಟು ಹೇಳಿದ್ದಾರೆ ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ಇಲ್ಲಿ ನಿಜವಾಗಿಯೂ ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ ತಾವೂ ಕೂಡ ರೈತರ ಮಕ್ಕಳೇ ನಾವೆಲ್ಲಾ ರೈತರ ಮಕ್ಕಳೇ ಅಲ್ಲಿ ಕಷ್ಟವೇನಿದೆ ಎಂಬುದು ನಮಗೆ ಗೊತ್ತಿದೆ ಆದರ ಕಡೆ ನಮ್ಮ ಲಕ್ಷ್ಯವಿಲ್ಲ, ಹಾಗಾದರೆ ನೀವೆಲ್ಲಾ ಸಚಿವ ಸಂಪುಟದಲ್ಲಿ ಏಕೆ ಸುಮ್ಮನೆ ಕುಳಿತಿರಿ ನೀವು ಅಲ್ಲಿ ಹೇಳಿದ್ದೀರಾ? ರೊಕ್ಕ ತುಂಬಿದ್ದೀರಾ ಎಂದು ನೀವೆಲ್ಲಾ ಕೇಳಿದ್ದೀರಾ? ಹಿಂದಿನ ಕೃಷಿ ಮಂತ್ರಿಗಳು ಪಾಪ ಅವರು ತುಂಬಿಸಿದ್ದಕ್ಕೆ ಹೋಗಿಬಿಟ್ಟರು, ಅವರಿಗೆ ರೈತರ ಶಾಪ ಹತ್ತಿತ್ತೇನೋ ಅನ್ನಿಸುತ್ತದೆ. ಆತ ಒಳ್ಳೆಯ ಮನುಷ್ಯ, ಅವರ ಬಗ್ಗೆ ನಮಗೆ ಗೌರವವಿದೆ, ಅವರು ಪ್ರಯತ್ನ ಮಾಡಿದರು ಇಲ್ಲವೆಂದು ಹೇಳುವುದಿಲ್ಲ, ಅವರಿಗೆ ರೈತರ ಬಗ್ಗೆ ಬಹಳ ಕಳಕಳಿ ಇತ್ತು,ಆದರೂ ರೈತರ ಬಗ್ಗೆ ಏನೂ ಕೆಲಸ ಮಾಡದ್ದಕ್ಕೆ ಅವರ ಮಂತ್ರಿಗಿರಿಯೇ ಹೋಗಿಬಿಟ್ಟಿತ್ತು. ಆದಕಾರಣ ಈಗಾಗಲೇ ತಡವಾಗಿದೆ ದಯವಿಟ್ಟು ಮಾರ್ಚ್‌ನಿಂದ ಇಲ್ಲಿಯವರೆಗೆ ರೈತನಿಗೆ ಎಷ್ಟು ಎಷ್ಟು ವಿಮೆ ಮಂಜೂರಾಗಿರುತ್ತದೆ, ಅದಕ್ಕೆ ಬಡ್ಡಿ ಸಹಿತ ತಾವು ತುಂಬಬೇಕಾಗುತ್ತದೆ. ರೈತರಿಗೆ ಒಮ್ಮೆಯಾದರೂ ಕಾಂಗ್ರೆಸ್‌ನವರು ಬಡ್ಡಿಯನ್ನು ಮನ್ನಾ ಮಾಡಿ. ಹನುಮೇಗೌಡರೆ, ಮೊನ್ನೆ ಏನೋ ಪತ್ರಿಕೆಯಲ್ಲಿ ಓದಿದೆ, ಬಿಜೆಪಿಗೆ ಬೈಯುವುದಕ್ಕೆ ಹೋಗಿ ಇವರ ಬಗ್ಗೆ ಏನೇನೋ ಹೇಳಿಬಿಟ್ಟಿರಿ, ಇವರಿಗೆ ರೈತರ ಬಗ್ಗೆ ಕಾಳಜಿ ಇದೆಯೇ?

ಶ್ರೀ ಕೆ. ಹೆಚ್. ಹನುಮೇಗೌಡ: ರೈತರು ಓಟು ಕೊಟ್ಟಿರುವುದಕ್ಕೆ ನಾವು ಚುನಾಯಿತರಾಗಿದ್ದೇವೆ, ಆ ಬಗ್ಗೆ ನಿಮಗ್ಯಾಕೆ ಅಷ್ಟೊಂದು ಚಿಂತನೆ ನಾವು ನಿಮ್ಮ ಬಗ್ಗೆ

ಮಾತನಾಡುವುದಕ್ಕೆ ಹೋಗುತ್ತೇವೆಯೇ? ರೈತನ ಮಗನಾಗಿ ರೈತರಿಗಾಗಿರುವ ತೊಂದರೆಯನ್ನು ಮಾತನಾಡಿ.

ಶ್ರೀ ಎಸ್.ಎನ್. ಪಾಟೀಲ್: ನಾನೂ ಕೂಡ ನಿಮಗೆ, ಇವರಿಗೆ ರೈತರ ಬಗ್ಗೆ ಏನು ಕಳಕಳಿ ಇದೆ ಎಂದು ಕೇಳುತ್ತಿದ್ದೇನೆ, ರೈತರ ಬಗ್ಗೆ ಭಾರಿ ಕಾಳಜಿ ಇದೆ ಇವರೆಲ್ಲಾ ಸ್ವಲ್ಪ ಹಳ್ಳಿಯವರು, ಅವರೆಲ್ಲಾ ಬಿಜೆಪಿಯವರೆಂದೆಲ್ಲಾ ಹೇಳಿ ಏನೋ ತಾವು ಬೈಯಲು ಹೊರಟಿದ್ದೀರಿ, ಇವರಿಗೆ ರೈತರ ಬಗ್ಗೆ ಕಾಳಜಿ ಇದೆಯಾ, ಕಳಕಳಿ ಇದೆಯಾ, ಇವರು ದುಡ್ಡು ತುಂಬಿದ್ದಾರಾ, ಇನ್ನು ತುಂಬುತ್ತಿದ್ದಾರೆಯೇ, ಯಾವಾಗ ತುಂಬುತ್ತಾರೆ? ಇಂತಹ ದಿವಸ ತುಂಬುತ್ತೇವೆಂದು ದಯವಿಟ್ಟು ಹೇಳಬೇಕು, ಇದುವರೆಗೆ ಒಂದು ದುಡ್ಡು ಕೊಟ್ಟಿಲ್ಲ, ಮೊನ್ನೆ ಏನೋ ಹತ್ತು ಇಪ್ಪತ್ತು ಲಕ್ಷ ರೂಪಾಯಿ ಬಂದಿದೆ ಎಂದು ಮಾತನಾಡುತ್ತಿದ್ದರು, ಅದು ಇನ್ನು ಯಾವ ಬ್ಯಾಂಕಿಗೆ ಬಂದಿದೆ ಎಂದು ಯಾರಿಗೂ ತಿಳಿದಿಲ್ಲ, ಆ ಕಾರಣಕ್ಕೆ ಮೊದಲನೆಯದಾಗಿ, ತಕ್ಷಣವೇ ಬಡ್ಡಿ ಸಹಿತ ಹಣವನ್ನು ತುಂಬಬೇಕು. ಮಾನ್ಯ ಸದಸ್ಯರಾದ ಶ್ರೀ ಯಾವಗಲ್‌ರವರು ಈಗ ಅಲ್ಲಿದ್ದಾರೆ; ಮೊದಲು ಮಂತ್ರಿಯಾಗಿದ್ದವರು, ಬಹಳ ಕಷ್ಟಕಾಲದಲ್ಲಿ ಸರ್ಕಾರ ನಡೆಸಿದವರು, ಅವರಿಗೆ ಒಮ್ಮೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಗೆ ಗೊತ್ತಿಲ್ಲ, ಯಾವಗಲ್‌ರವರೇ ನಿಮಗೆ ಹಿಂದಿನದೆಲ್ಲಾ ಸ್ವಲ್ಪ ಅನುಭವವಿದೆ. ನೀವೇ ಹೇಳಿ ಎಂದು ಹೇಳಿದ್ದೆ. ಕಷ್ಟಕಾಲದಲ್ಲಿ ಸರ್ಕಾರ ನಡೆಸಿದವರು ಅವರಿಗೂ ಗೊತ್ತಿದೆ. ಆ ಕಾಲಕ್ಕೆ ಬಡ್ಡಿ ಮನ್ನಾ ಮಾಡಿದವು, ಪುನಃ ಮತ್ತೊಮ್ಮೆ ಬಂದಾಗ ಬಡ್ಡಿ ಮನ್ನಾ ಮಾಡಿದೆವು, ನಿಮಗೆ ರೈತರ ಬಗ್ಗೆ ಕಾಳಜಿ ಇಲ್ಲ, ರೈತರಿಗೆ ಹಣ ಕೊಡಲು ಇವರಿಗೆ ಕಷ್ಟವಾಗುತ್ತದೆ, ಆ ವೀರೇಶ್ ವರದಿಯ ಬಗ್ಗೆ ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದರು ಏನೋ ಸಿಟ್ಟು ಬಂದು ಮಾತನಾಡಿದರು. ಆ ಮಾತು ಬೇರೆ. ಅವರು ಹಾಗೆ ಮಾತನಾಡುವುದಿಲ್ಲ ಮಾತನಾಡಿದ್ದನ್ನು ವಾಪಸ್ಸು ತೆಗೆದುಕೊಂಡರು. ಅವರು ಅನುಭವಿಸಿದರು. ಆದರೆ ನಿಜವಾಗಿಯೂ ಯಾವ ರೈತನಾದರೂ ಹಣ ಬರುತ್ತದೆಂದು ವಿಷ ಸೇವಿಸಿ ಸಾಯಲಾಗುತ್ತದೆಯೇ? ಸಾಯುವ ಕೊನೆಯ ಗಳಿಗೆಯವರೆಗೆ ಒಬ್ಬ ಮನುಷ್ಯ ಉಳಿದುಕೊಳ್ಳಲು ಪ್ರಯತ್ನ ಮಾಡುತ್ತಾನೆ, ಸಾಯಲು ಯಾರು ಹೋಗುತ್ತಾರೆ ಆದರೆ ನಿಜವಾಗಿಯೂ ಹೇಳುತ್ತೇನೆ, ನಮ್ಮ ಮುಂಡರಗಿ ತಾಲ್ಲೂಕಿನಲ್ಲಿ ಹಿಂದೆಂದೂ ಯಾರೂ ಸತ್ತಿದ್ದಿಲ್ಲ, ಬಹಳ ಕಷ್ಟದಲ್ಲಿ ನಾವು ಬಂದವರು, ನಮಗೆ ಬರ ಎಂದರೆ ಯಾವ ಬರ ಎಂದು ಕೇಳುತ್ತೇವೆ, ನಾವು ಖಾಯಂ ಬರದಲ್ಲಿರುತ್ತೇವೆ ಅಂದಾಗ ಸುಖವೆಂಬುದು ನಮಗೆ ಗೊತ್ತಿಲ್ಲ. ಇಂತಹದ್ದರಲ್ಲಿ ಮುಂಡರಗಿಯಲ್ಲಿ ಯಾರೂ ಸತ್ತಿದ್ದಿಲ್ಲ. ಮೊದಲನೆಯದಾಗಿ ಮೊನ್ನೆ ಒಬ್ಬ ಉರುಳು ಹಾಕಿಕೊಂಡು ಸತ್ತ, ನಾನೇ ಹೋಗಿದ್ದೆ, ಇವತ್ತಿನವರೆಗೆ ಸರ್ಕಾರದವರು ಅವನ ಕುಟುಂಬಕ್ಕೆ ಪರಿಹಾರವಾಗಿ ಒಂದಾಣೆ ದುಡ್ಡು ಕೊಟ್ಟಿಲ್ಲ, ಆತನಿಗೆ ಎರಡು ಎಕರೆ ಜಮೀನಿದೆ. ರೇಷ್ಮೆ ಸಚಿವರಾಗಿ ಹೊಸದಾಗಿ ರೇವಣ್ಣನವರು ಬಂದಿದ್ದಾರೆ. ಆತ ಎರಡು ಎಕರೆ ರೇಷ್ಮೆ ಹಚ್ಚಿದ್ದಾನೆ, ಬಾವಿ ತೆಗೆದಿದ್ದಾನೆ, ಪಂಪ್‌ಸೆಟ್ ಹಾಕಿದ್ದಾನೆ, ಬಾವಿ ಒಣಗಿತು ರೇಷ್ಮೆ ಒಣಗಿತು, ಲ್ಯಾಂಡ್ ಬ್ಯಾಂಕ್, ಸೊಸೈಟಿ, ಬೇರೆಯವರಲ್ಲಿ ಸುಮಾರು 50-60 ಸಾವಿರ ರೂಪಾಯಿಗಳ ಸಾಲ ಮಾಡಿದ್ದಾನೆ, ಎಲ್ಲರೂ ಬಂದು ಅವನ ಮನೆಯ ಮುಂದೆ ನಿಂತಿದ್ದಾರೆ, ಆತ ಏನು ಮಾಡಬೇಕು? ಆತ ಅದೇ ತೋಟದಲ್ಲಿ ನೇಣು ಹಾಕಿಕೊಂಡು ಸತ್ತ, ಒಂದು ಲಕ್ಷ ರೂಪಾಯಿ ಬರುತ್ತದೆಂದು ಸತ್ತನೆ? ಅವನಿಗೆ ಇವತ್ತಿನವರೆಗೆ ದುಡ್ಡು ಕೊಟ್ಟಿಲ್ಲ, ಅವನನ್ನು

ನೋಡಲು ಹೋಗಲಿಲ್ಲ. ಮಾನ್ಯ ಕೃಷಿ ಸಚಿವರೇ ತಕ್ಷಣ ಕ್ರಮ ತೆಗೆದುಕೊಂಡು ಅಲ್ಲಿಗೆ ಹೋಗಿ ಅವನ ಹೆಂಡತಿ ಮಕ್ಕಳು ಬದುಕುವುದೇ ಕಷ್ಟವಾಗಿದೆ, ನಮ್ಮ ಮುಂಡರಗಿ ತಾಲ್ಲೂಕಿನಲ್ಲಿ ಎಷ್ಟು ಕಷ್ಟ ಬಂದರೂ ಯಾರು ಸತ್ತಿದ್ದಿಲ್ಲ. ಅವರಿಗೆ ಸುಖವೆಂಬುದೆ ಗೊತ್ತಿಲ್ಲ, ಕಷ್ಟದಲ್ಲೇ ಇದ್ದವರು ನಾವು, ಅಂತಹವರು ಇವತ್ತು ಸಾಯಬೇಕಾದರೆ ಎಷ್ಟು ಕಷ್ಟದಿಂದ ಸತ್ತಿರಬಹುದೆಂಬುದನ್ನು ನಾವು ಅರ್ಥ ಮಾಡಿಕೊಳ್ಳಿ; ಸರ್ಕಾರ ಅವರಿಗೆ ತಕ್ಷಣ ಪರಿಹಾರವನ್ನು ಕೊಡಬೇಕು. ತಕ್ಷಣ ಆ ಬಡ್ಡಿಯನ್ನು ಮನ್ನಾ ಮಾಡಬೇಕು. ಹನುಮೇಗೌಡರೆ, ಅವರಿಗೆ ರೈತರ ಬಗ್ಗೆ ಏನಾದರೂ ಕಾಳಜಿ ಇದ್ದರೆ ತಕ್ಷಣ ಬಡ್ಡಿಯನ್ನು ಮನ್ನಾ ಮಾಡಬೇಕು; ನೀವು ಬರೀ ವರ್ಣನೆ ಮಾಡಿದರೆ ಹೇಗೆ? ಗಟ್ಟಿಯಾಗಿ ಹೇಳಿ, ನಾನು ನೀವು ಒಂದೇ ಅದಕ್ಕೆ ನಾನು ಮಾತನಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಉಪಾಧ್ಯಕ್ಷರೆ, ಇವರು ಹಳ್ಳಿಯಿಂದ ಬಂದವರು ಹಳ್ಳಿಯ ಕಷ್ಟವನ್ನು ಅರ್ಥಮಾಡಿಕೊಂಡು ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಿ ಎಂದು ಕೇಳಿಕೊಳ್ಳುತ್ತಿದ್ದಾರೆ, ಅಲ್ಲಿರುವವರೆಲ್ಲರೂ ರೈತರಿಂದ ಓಟು ತೆಗೆದುಕೊಂಡಿರುವವರೆ, ಅವರಿಗೂ ಹೇಳಿದ್ದೇವೆ ಅವರಿಗೂ ವಿವೇಕ ಇದೆ, ದೇವರು ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟು ಬಡ್ಡಿ ಮನ್ನಾ ಮಾಡುತ್ತಾರೆ ಸುಮ್ಮನಿರಿ.

ಶ್ರೀ ಎಸ್.ಎಸ್. ಪಾಟೀಲ್: ರೈತರ ಕಷ್ಟವೇನೆಂಬುದು ನಮಗೂ ಗೊತ್ತಿದೆ, ನಾವು ಅವರು ಆಡಳಿತ ಪಕ್ಷದಲ್ಲಿದ್ದವರು ಆಡಳಿತ ಮಾಡಿದವರು, ನಾವು ಮಾತನಾಡಿದಂತೆ ಮಂತ್ರಿಗಳು ಮಾತನಾಡಲು ಬರುವುದಿಲ್ಲ, ಕಷ್ಟವಿರುತ್ತದೆ, ನಾವು ನೀವು ಮಾತನಾಡಬೇಕು, ಅವರನ್ನು ವರ್ಣನೆ ಮಾಡಿಬಿಟ್ಟಿರಿ ಅದಕ್ಕೆ ನಿಮ್ಮ ಮೇಲೆ ನನಗೆ ಸಿಟ್ಟು ಬಂತು, ಅವರನ್ನು ಏತಕ್ಕೆ ವರ್ಣನೆ ಮಾಡಿದಿರಿ? ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಾವು ವರ್ಣನೆ ಮಾಡಬಾರದು.

ಶ್ರೀ ಕೆ.ಹೆಚ್. ಹನುಮೇಗೌಡ: ಅವರು ಒಳ್ಳೆಯ ಕೆಲಸ ಮಾಡಿದರೆ ಹೊಗಳುವುದು ಉಂಟು, ಅವರು ಮಾಡಬಾರದ ಕೆಲಸ ಮಾಡಿದರೆ ತೆಗಳುವುದು ಉಂಟು, ನಮಗೇನು ದಾಕ್ಷಿಣ್ಯ? ನಾವು ರೈತರ ಮನೆಯಿಂದ ಬಂದವರು, ರೈತರ ಕಷ್ಟ ಸುಖಗಳಿಗೆ ಸ್ಪಂದಿಸಬೇಕು, ಸರ್ಕಾರದ ಗಮನಕ್ಕೆ ತಂದು ಹೋರಾಟ ಮಾಡಬೇಕು. ಅದು ನಮ್ಮ ಕರ್ತವ್ಯ ಇದೆ, ಅದನ್ನು ನಾನು ಮಾಡುತ್ತೇನೆ, ನೀವು ಅದನ್ನೇ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ತಕ್ಷಣ ತಾವು ಕೃಷಿ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಒಪ್ಪಿಸಿ ಎಲ್ಲಾ ರೈತರ ಸಾಲದ ಬಡ್ಡಿಯನ್ನು ಮನ್ನ ಮಾಡಬೇಕು, ಆಮೇಲೆ ಕನ್ವರ್ಷನ್ ಮಾಡಿ ಕೊಡಿ ಇಲ್ಲದಿದ್ದರೆ ವಸೂಲ್ಮಾಡಲಾಗುವುದಿಲ್ಲ, ಬ್ಯಾಂಕು ಉಳಿಯುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಶಾರ್ಟ್ ಟರ್ಮ್ ಅನ್ನು ಲಾಂಗ್ ಟರ್ಮ್ ಆಗಿ ಕನ್ವರ್ಷನ್ ಮಾಡಿ. ಇಲ್ಲದಿದ್ದರೆ ಬಹಳ ಸಾವಾಗುತ್ತವೆ ಇಷ್ಟೊಂದು ಕಷ್ಟದ ಬರ ಬಹುಶಃ ಹಿಂದೆಂದೂ ಬಂದಿಲ್ಲ. ಬಹುಶಃ ಇವರೆಲ್ಲಾ ಮಾತನಾಡಿರಬಹುದು, ಜನತಾದಳ ಸರ್ಕಾರ ಬಂದರೆ ರಾಜ್ಯದಲ್ಲಿ ಬರ ಬರುತ್ತದೆಂದು ಮಾತನಾಡಿರಬಹುದು, ಇದೊಂದು ರೂಢಿ ಮಾತಾಗಿತ್ತು, ಇಷ್ಟೊಂದು ಕಡು ಬರ ಹಿದೆಂದೂ ರಾಜ್ಯದಲ್ಲಿ ಬಂದಿರಲಿಲ್ಲ, ನಿಮಗೆ ಆ ಕಷ್ಟದ ಅರಿವಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳಿಲ್ಲ, ಕಂದಾಯ ಮಂತ್ರಿಗಳಿಲ್ಲ, ನೀವು ಹೇಳಿದ್ದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುವ ಸಾಮರ್ಥ್ಯ ಇವರಿಗಿದೆಯಾ? ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವಂತಹ ಈ ಮಂತ್ರಿಗಳಿಗೆ ಸಾಮರ್ಥ್ಯ ಇದೆಯಾ? ಅದನ್ನು ನಾನು ಹೇಳುತ್ತಿದ್ದೇನೆ, ಅವರಿರುವಾಗ ನೀವು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲದಿರುವಾಗ ನಾನು ಅವರ ಬಗ್ಗೆ ಟೀಕೆ ಮಾಡುವುದಿಲ್ಲ... ನಾನು ಹಿಂದೆಯೂ ಹೇಳಿದ್ದೇನೆ, ಇವತ್ತು ಹೇಳುತ್ತೇನೆ. ಅವರು ಇಲ್ಲಿ ಕುಳಿತಿದ್ದಾಗಲೂ ಹೇಳಿದ್ದೇನೆ. ಹಗಲೆಲ್ಲಾ ಹೇಳಿದರೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಚುಚ್ಚಿದ ಹಾಗೆ ಆಗುತ್ತದೆಂದು ಬಿಟ್ಟೆ.

ಹಿಂದೆ ಗುಂಡೂರಾಯರ ಕಾಲದಲ್ಲೂ ನಾವು ನೋಡಿದ್ದೇವೆ, ದೇವರಾಜ ಅರಸೂರವರ ಕಾಲದಲ್ಲೂ ನಾವು ನೋಡಿದ್ದೇವೆ, ತಮಗೂ ಗೊತ್ತಿದೆ, ದಿ. ಶ್ರೀ ದೇವರಾಜ ಅರಸು ಮತ್ತು ದಿ. ಶ್ರೀ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮುಖ್ಯಮಂತ್ರಿಗಳು ಬರುತ್ತಾರೆಂದರೆ ಅಸೆಂಬ್ಲಿ ತುಂಬಿರುತ್ತಿತ್ತು. ಆಡಳಿತ ಪಕ್ಷದ ಸದಸ್ಯರು ಮಾತ್ರವಲ್ಲ, ಎಲ್ಲಾ ಮಂತ್ರಿಗಳೂ ಇಲ್ಲಿ ಕುಳಿತಿರುತ್ತಿದ್ದರು. ಆದರೆ ಇವತ್ತು ಮುಖ್ಯಮಂತ್ರಿಗಳು ಒಬ್ಬರೇ ಕುಳಿತಿರುತ್ತಾರೆ, ಯಾವ ಮಂತ್ರಿಗಳೂ ಇರುವುದಿಲ್ಲ; ಒಬ್ಬರೋ, ಇಬ್ಬರೋ ಮಂತ್ರಿಗಳು ಮಾತ್ರ ಇರುತ್ತಾರೆ. ಶಾಸಕರುಗಳೂ ಇರುವುದಿಲ್ಲ. ಈ ರೀತಿ ಆಗಬಾರದು. ಇದು ಮುಖ್ಯಮಂತ್ರಿಗಳಿಗೆ ಮಾಡತಕ್ಕಂಥ ಅಗೌರವ. ನಿಜವಾಗಿಯೂ ಕೂಡ ಈ ರೀತಿ ಆಗದ ಹಾಗೆ ತಾವು ಕೂಡ ನಡೆದುಕೊಳ್ಳಬೇಕಾಗುತ್ತದೆ. ಇದನ್ನು ಮುಖ್ಯಮಂತ್ರಿಗಳು ಹಗಲೆಲ್ಲಾ (ಪದೇಪದೇ) ಹೇಳಲಾಗುವುದಿಲ್ಲ. ಮುಖ್ಯಮಂತ್ರಿಗಳು ಅಸೆಂಬ್ಲಿಯಲ್ಲಿ ಹಾಜರಿರುವುದರ ಬಗ್ಗೆ ನಾನು ಟೀಕೆ ಮಾಡುವುದಿಲ್ಲ. ಅವರು ಕಂಪಲ್ಸರಿಯಾಗಿ ಇರುತ್ತಾರೆ. ನಮಗಿಂತ ಐದು ನಿಮಿಷ ಮೊದಲೇ ಬಂದು ಇಲ್ಲಿ ಕುಳಿತಿರುತ್ತಾರೆ. ಅದನ್ನು ನಾನು ಇಲ್ಲ ಎನ್ನುವುದಿಲ್ಲ. ಆದರೆ ಕೆಲವು ದಿಟ್ಟ ನಿರ್ಣಯವನ್ನು ತೆಗೆದುಕೊಳ್ಳಲು ಅವರಿಗೆ ಆಗುವುದಿಲ್ಲ. ಇತ್ತೀಚಿಗೆ ಮಂತ್ರಿಮಂಡಲ ರೀಷಫಲ್ ಆದ ಮೇಲೆ ಮುಖ್ಯಮಂತ್ರಿಗಳು ಬಹಳ ವೀಕ್ ಆಗಿಬಿಟ್ಟಿದ್ದಾರೆ. ಅವರು ದಿಲ್ಲಿಗೂ ಒಬ್ಬರನ್ನು ನೇಮಿಸಿದ್ದಾರೆ. ನಾವೂ ದೆಹಲಿಗೆ ಒಬ್ಬರನ್ನು ನೇಮಿಸಿದ್ದೆವು. ಆದರೆ ಒಬ್ಬ ಮಂತ್ರಿಯನ್ನು ತೆಗೆದು ಅಲ್ಲಿಗೆ ಹಾಕಿರಲಿಲ್ಲ. ಎಂಥೆಂಥವು ನಡೆಯುತ್ತಿವೆ ಎನ್ನುವುದಕ್ಕೆ ಉದಾಹರಣೆಗಾಗಿ ಹೇಳುತ್ತೇನೆ. ಶ್ರೀಮತಿ ರಾಣಿ ಸತೀಶ್ ಅವರು ಈಗ ಇಲ್ಲಿ ಇಲ್ಲ. ಅವರು ರಾಜ್ಯ ಸಚಿವರು. ಆದರೆ ಅವರ ಕೈಕೆಳಗಿನ ಇಲಾಖೆಗಳು ಕ್ಯಾಬಿನೆಟ್ ದರ್ಜೆಯವು. ಇದು ಯಾವ ನೀತಿ, ಏನು ಪದ್ಧತಿ? ಏನಾದರೊಂದು ನಿಯಮ ನೀತಿ ಬೇಕಲ್ಲವೇ? ಮಂತ್ರಿಗಳಿಗೆ ಗೌರವ ಇರಬೇಕಲ್ಲಾ. ನಿಜವಾಗಿ ಹೇಳಬೇಕೆಂದರೆ, ಗೌರವವಿದ್ದರೆ ಅವರು ರಾಜೀನಾಮೆ ಕೊಡಬೇಕು. ಮಂತ್ರಿಗಳು ರಾಜ್ಯ ಸಚಿವರು ಅವರ ಕೈಯಲ್ಲಿರತಕ್ಕ ಕ್ಯಾಬಿನೆಟ್ ದರ್ಜೆಯವು ನಮ್ಮ ಗೆಳೆಯರು, ಆತ್ಮೀಯರಾದ ವೀರಕುಮಾರ್ ಪಾಟೀಲ್‌ರವರನ್ನು ಮಂತ್ರಿಗಿರಿಯಿಂದ ತೆಗೆದು ವಿದ್ಯುತ್ ನಿಗಮಕ್ಕೆ ಛೇರ್‌ಮನ್ನರನ್ನಾಗಿ ಮಾಡಿ ಕ್ಯಾಬಿನೆಟ್ ದರ್ಜೆ ಕೊಟ್ಟಿದ್ದಾರೆ. ಆದರೆ ಸಂಬಂಧಿಸಿದ ಇಲಾಖೆಯ ಮಂತ್ರಿಗಳು ರಾಜ್ಯ ಸಚಿವರಂತೆ. ಏನು ನಡೆಯುತ್ತಿದೆ. ಮಂತ್ರಿಗಳಿಗೆ ಘನತೆ ಗೌರವವಿರಬೇಕಲ್ಲವೇ? ನನ್ನ ಅಭಿಪ್ರಾಯದಂತೆ, ಗೌರವವಿದ್ದರೆ ಅವರೆಲ್ಲರೂ ರಾಜೀನಾಮೆ ಕೊಡಬೇಕು. ಇವರ ಕೈಯಲ್ಲಿರತಕ್ಕ ಇಲಾಖೆಗಳನ್ನು

ಚೇರ್ಮನ್ನರಿಗೆ ಕೊಡುವುದು, ಮಂತ್ರಿಗಳಿಗೆ ಸ್ಟೇಟ್ ದರ್ಜೆ ಮಾಡುವುದು. ನಿಜವಾಗಿ ಇದು ಬಹಳ ತಪ್ಪು, ಇದು ಎಲ್ಲಿ ನಡೆದಿದೆ, ಈ ರೀತಿ ಯಾವ ರಾಜ್ಯದಲ್ಲಿ ನಡೆದಿದೆ ಹೇಳಿ ಪಾಟೀಲರೆ, ದಯವಿಟ್ಟು ಇದಕ್ಕೆ ತಾವು ಉತ್ತರ ಕೊಡಬೇಕು.

ಶ್ರೀ ಬಸವರಾಜ ಹೆಚ್. ಪಾಟೀಲ್: ವೀರಕುಮಾರ್ ಪಾಟೀಲರಿಗೆ ಕ್ಯಾಬಿನೆಟ್ ದರ್ಜೆ ಕೊಟ್ಟಿಲ್ಲ. ರಾಜ್ಯ ಸಚಿವರ ದರ್ಜೆಯಲ್ಲೇ ಇದ್ದಾರೆ. ತಮಗೆ ತಪ್ಪು ತಿಳುವಳಿಕೆಯಾಗಿದೆ.

ಶ್ರೀ ಎಸ್.ಎಸ್. ಪಾಟೀಲ್: ಹಾಗಾದರೆ ನೀವು ರಾಜೀನಾಮೆ ಕೊಡಬೇಡಿ, ಉಳಿದುಕೊಳ್ಳಿ, ಶ್ರೀಮತಿ ರಾಣಿ ಸತೀಶ್‌ರವರಂತೂ ಕೊಡಬೇಕು. ಪಾಟೀಲರೇ, ಮುಂದೆ ನಿಮಗೂ ಕ್ಯಾಬಿನೆಟ್ ಕೊಡುತ್ತಾರೆ, ನಮಗೆ ಗೊತ್ತಿದೆ. ಸ್ಟೇಟ್ ದರ್ಜೆಯಿರುವ ಎಲ್ಲರನ್ನೂ ಕ್ಯಾಬಿನೆಟ್ ಮಾಡುತ್ತಾರೆ.

ಉಪಾಧ್ಯಕ್ಷರು: ಪಾಟೀಲರೇ, ಬರಗಾಲದ ಬಗ್ಗೆ ಚರ್ಚೆಯೇ ಇದು?

ಶ್ರೀ ಎಸ್.ಎಸ್. ಪಾಟೀಲ್: ಬರಗಾಲದ ಬಗ್ಗೆಯೇ ಹೇಳುತ್ತಿರುವುದು. ಹೀಗೆ ಮಾಡುತ್ತಿರುವುದರಿಂದ ಹಣ ಪೋಲಾಗಿ ಹೋಗುತ್ತಿದೆ. ಆದ್ದರಿಂದ ಹೇಳುತ್ತಿದ್ದೇನೆ. ಒಂದು ಕಡೆ, ಬರದಲ್ಲಿ ಬಿದ್ದಿರುವ ರೈತರಿಗೆ ಕೊಡಲು ಹಣವಿಲ್ಲವೆಂದು ಹೇಳುತ್ತೀರಿ. ಇನ್ನೊಂದು ಕಡೆ ನೂರು ಜನರನ್ನು ಮಂತ್ರಿಗಳನ್ನಾಗಿ ಮಾಡುತ್ತೀರಿ. ಇದು ಬರದ ಬಗ್ಗೆ ಮಾತನಾಡುವ ಮಾತು. ಮಿತವ್ಯಯ ಸಾಧಿಸಬೇಕು. ನಾವು ಎಲ್ಲವನ್ನೂ ಕಟ್ ಮಾಡಿ ಎಂದು ಹೇಳಿದೆವು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಮಂತ್ರಿಗಳನ್ನು ಮಾಡಲು ಇತಿಮಿತಿ ಇದೆ. ಶ್ರೀ ಕೆ.ಬಿ. ಕೋಳಿವಾಡ್‌ರವರು ಹಿರಿಯರು, ಅವರು ಬಹಳ ದಿವಸ ತಡೆದರು. ಈಗ ಅವರನ್ನು ರಾಜ್ಯ ಸಚಿವರನ್ನಾಗಿ ಮಾಡಿ ನೀರು ಪೂರೈಕೆ ಖಾತೆಯನ್ನು ಕೊಟ್ಟಿದ್ದಾರೆ. ಅವರು ಬರೇ ಕುಡಿಯುವ ನೀರು ಕೊಡುವವರಂತೆ ಇದು ಏಕೆ ಬೇಕು ಹೇಳಿ?

ಶ್ರೀ ಎಂ. ಮಹಾದೇವ: ನೀವು ಎಲ್ಲವನ್ನೂ ವಿಶ್ಲೇಷಣೆ ಮಾಡುತ್ತಿರುವುದನ್ನು ನೋಡಿದರೆ, ನಮ್ಮ ನಮ್ಮಲ್ಲೇ ಭಿನ್ನಾಭಿಪ್ರಾಯ ತರಲು ಪ್ರಯತ್ನ ಮಾಡುತ್ತಿದ್ದೀರಿ ಎಂದು ಕಾಣುತ್ತದೆ.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್: ಭಿನ್ನಾಭಿಪ್ರಾಯ ಈಗ ಇಲ್ಲವೆನ್ನುತ್ತೀರೇನು?

ಶ್ರೀ ಕೆ. ಶ್ರೀನಿವಾಸಗೌಡ: ಕುಡವನಹಳ್ಳಿ ನಾವ್ಯಾರೂ ಅದನ್ನು ಮಾಡಬೇಕಾದುದಿಲ್ಲ, ನೀವೇ ಮಾಡಿಕೊಳ್ಳುತ್ತಿದ್ದೀರಿ. ನಾವು ಏಕೆ ಮಾಡಬೇಕು?

ಶ್ರೀ ಎಸ್.ಎಸ್. ಪಾಟೀಲ್: ಇನ್ನು ಮಲ್ಲಿಕಾರ್ಜುನ ನಾಗಪ್ಪರವರು. ಅವರು ಮೊದಲು ಇಂಡಿಪೆಂಡೆಂಟ್ ಇದ್ದವರು. ಅವರನ್ನು ಈಗ ರಾಜ್ಯ ಸಚಿವರನ್ನಾಗಿ ಮಾಡಿದ್ದಾರೆ. ಇನ್ನು ಕುಮಾರ್ ಬಂಗಾರಪ್ಪನವರು, ಸಣ್ಣ ನೀರಾವರಿ ಇಲಾಖೆಯನ್ನು ಬಹಳ ಚೆನ್ನಾಗಿ ನೋಡಿಕೊಂಡು ಹೋಗುತ್ತಿದ್ದರು. ಖರ್ಗೆಯವರಿಗೆ ಏನು ಕಡಿಮೆಯಾಗಿತ್ತು? ಈಗ ಮತ್ತೊಂದು ಅವರಿಗೆ ಸೇರಿಸಿದ್ದಾರೆ. ಇದು ಏಕೆ ಏನು ನಿಮ್ಮದು?... ಇದು ನಮ್ಮ ಧರ್ಮ!

ಶ್ರೀ ಬಿ. ರಮಾನಾಥ ರೈ: ನಾವು ಏನು ಮಾಡಬೇಕು, ಏನು ಮಾಡಬಾರದು ಎಂದು ಕೇಳಲು ಇವರನ್ನು ನಮ್ಮ ಕನ್ಸಲ್ಟೆಂಟ್ ಆಗಿ ಮಾಡಿಕೊಳ್ಳಬೇಕು.

ಶ್ರೀ ಎಸ್.ಎಸ್. ಪಾಟೀಲ್: ಹೌದು, ನಮ್ಮನ್ನು ಕೇಳಿ ಮಾಡಬೇಕಾಗಿತ್ತು. ಸರ್ಕಾರದ ದುಡ್ಡು ಇದು. ನಿಮ್ಮ ಸ್ವಂತದ್ದು, ನಿಮ್ಮ ಮನೆಯ ದುಡ್ಡಾಗಿದ್ದರೆ ನಾನು ಮಾತನಾಡುತ್ತಿರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಆಗಲೇ ಹೇಳುತ್ತಿದ್ದರು ನಿಮ್ಮ ನಮ್ಮಲ್ಲಿ ಭಿನ್ನಾಭಿಪ್ರಾಯ ಮಾಡುತ್ತಿದ್ದಾರೆ ಎಂದು ಇದೆಲ್ಲ ನಾವು ಹೇಳುತ್ತಿರಲಿಲ್ಲ ಈ ಹಿಂದೆ, ನಾವು ಯಾರಾದರೂ ಮಂತ್ರಿಗಳ ಬಗ್ಗೆ ಮಾತನಾಡಿದರೆ ಎಲ್ಲರೂ ಒಟ್ಟಿಗೆ ಎದ್ದು ನಿಂತುಕೊಳ್ಳುತ್ತಿದ್ದರು. ಈಗ ಎಲ್ಲರೂ ಸುಮ್ಮನಿದ್ದೀರಿ. ಏಕೆಂದರೆ, ನಿಮ್ಮ ಭಿನ್ನಾಭಿಪ್ರಾಯ ಇಲ್ಲೇ ಕಾಣುತ್ತಿದೆ. ಈಗ ಶಾಸಕರೂ ನಿಂತುಕೊಳ್ಳುವುದಿಲ್ಲ, ಮಂತ್ರಿಗಳೂ ನಿಂತು ಕೊಳ್ಳುವುದಿಲ್ಲ.

ಶ್ರೀ ವಿ. ಪಾಪಣ್ಣ: ಪಾಟೀಲರೇ, ನೀವು ಮೇಲೆ ಕುಸ್ತಿ ಮಾಡಬೇಕಾದರೆ ಮೊದಲು ನೀವು ಒಂದಾಗಿ. ಈಗ ಏಕೆ ಮಾತನಾಡುತ್ತೀರಿ? ನಿಮ್ಮದೇ ಇನ್ನೂ ಸರಿಹೋಗಿಲ್ಲ, ಅವರ ಬಗ್ಗೆ ಏಕೆ ಮಾತನಾಡುತ್ತೀರಿ?

ಗೊಂದಲ

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ನಾವು ಬೇಗ ಒಂದಾದಷ್ಟು ಅವರಿಗೆ ಒಳ್ಳೆಯದು ಎಂದು ಅವರು ತಿಳಿದುಕೊಂಡಿರಬಹುದು.

ಶ್ರೀ ಬಿ. ರಮಾನಾಥ ರೈ: ಹಿರಿಯರು ಮಾತನಾಡುವಾಗ ಏಕೆ ಮಧ್ಯೆ ಪ್ರವೇಶ ಮಾಡುವುದು ಎಂದು ನಾವು ಸುಮ್ಮನೆ ಕುಳಿತಿದ್ದೇವೆ. ನಮ್ಮ ಔದಾರ್ಯವನ್ನು ಏಕೆ ತಪ್ಪು ತಿಳಿದುಕೊಳ್ಳುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್: ಇವತ್ತು ನಾನು ಒಂದು ವಿಷಯವನ್ನು ನೋಡಿದೆ. ಮೊಟ್ಟಮೊದಲನೇ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರ ಭಾಷಣವನ್ನು ಅಪ್ರೀಷಿಯೇಟ್ ಮಾಡಿದರು. ಅದು ಏಕೆ ಎನ್ನುವುದು ನನಗೆ ಗೊತ್ತಾಯಿತು. ಡಿಸಿಡೆಂಟ್ಸ್ ಇರುವುದಕ್ಕಿಂತ ಬಿಟ್ಟು ಹೋಗಬೇಕೆಂದು ಅವರು ಹೇಳಿದರು. ಅದಕ್ಕೇ ನಿಮಗೆ ಅಪ್ರೀಸಿಯೇಷನ್ ಬಂದದ್ದು. ಬಹಳ ಚೆನ್ನಾಗಿ ಮಾತನಾಡಿದಿರಿ ಎಂದು ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಹೊಗಳಿ ಹೋದರು. ಇದು ಮೊದಲನೇ ಬಾರಿ ಹೀಗೆ ಹೇಳುತ್ತಿರುವುದು. ಇದು ಏಕೆ ಎನ್ನುವುದು ಸಣ್ಣ ಹುಡುಗರಿಗೂ ತಿಳಿಯುತ್ತದೆ. ನಿಮ್ಮಲ್ಲಿ ಭಿನ್ನಮತ ಇದೆಯೋ, ಇಲ್ಲವೋ, ಒಟ್ಟಾರೆ ನೀವು ಐದು ವರ್ಷಗಳ ಕಾಲ ಸರ್ಕಾರ ನಡೆಸಿ ನಮ್ಮ ತಕರಾರು ಇಲ್ಲ, ಮಧ್ಯದಲ್ಲೇ ಚುನಾವಣೆ ಬರಬಾರದು. ಅದಕ್ಕೆ ನಾನು ಹೇಳುವುದೇನೆಂದರೆ, ಇನ್ನೂ ಎರಡೂವರೆ ವರ್ಷಗಳ ಕಾಲ ನಿಮ್ಮ ಅಧಿಕಾರಾವಧಿ ಇದೆ. ಮುಂಬರುವ ದಿನಗಳಲ್ಲಿ ಮಿತವ್ಯಯ ಸಾಧಿಸಿ. ಮಂತ್ರಿಗಳನ್ನು ಕಡಿಮೆ ಮಾಡಿ. ನಾವು 20 ಸಾವಿರ ಜನ ನೌಕರರನ್ನು ತೆಗೆಯಬೇಕೆಂದು ನಿರ್ಣಯ ಮಾಡಿದ್ದೆವು. ಅದು ತಮಗೂ ಗೊತ್ತಿದೆ. ಡಿವಿಷನಲ್ ಮಟ್ಟದಲ್ಲಿ ತೆಗೆಯಬೇಕು ಎಂದು ಮಾಡಿದ್ದೆವು. ಆದರೆ ಸಹಕಾರ ಇಲಾಖೆಯಲ್ಲಿ 4 ಹುದ್ದೆಗಳಿದ್ದ ಜಂಟಿ ರಿಜಿಸ್ಟ್ರಾರ್‌ರನ್ನು 16 ಮಾಡಿದ್ದಾರೆ. ಕ್ಯಾಬಿನೆಟ್‌ನಲ್ಲಿ ಮುಖ್ಯಮಂತ್ರಿಗಳ ಪರ್ಮಿಷನ್ ತೆಗೆದುಕೊಂಡೇ ಮಾಡಿದ್ದಾರೆ. ಏನು ಸುಧಾರಣೆ ಮಾಡುತ್ತಿದ್ದೀರಿ? ಒಂದು ಇತಿ ಮಿತಿ, ನೀತಿ, ಪದ್ಧತಿ ಏನಾದರೂ ಇರಬೇಕಲ್ಲವೇ? ಈ ಕಾರಣದಿಂದ ಹೇಳುತ್ತಿದ್ದೇನೆ,

ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮೆಲ್ಲರನ್ನು ತೆಗೆಯಲು ಆಗುವುದಿಲ್ಲ. ಏಕೆಂದರೆ ನೀವು ಭಿನ್ನಮತ ಮತ್ತೊಂದನ್ನು ಶುರು ಮಾಡಿ, ಅದಕ್ಕೆ ಅವರು ಅಂಜಿ, ಅಂಜಿ ವೀಕ್ ಆಗಿದ್ದಾರೆ. ಅವರು ಈಗ ಹಿಂದಿನ ಹಾಗೆ ಸ್ಟ್ರಾಂಗ್ ಇಲ್ಲ. ಘೋರ್ಪಡೆಯವರೇ, ಕ್ಯಾಬಿನೆಟ್‌ನಲ್ಲಿ ನೀವು ಹಿರಿಯ ಸಚಿವರು, ನಿಮಗೆ ಮನಸ್ಸು ಬಂದರೆ ಬಿಟ್ಟು ಹೋಗಿ ಬಿಡುತ್ತೀರಿ. ಎಲ್ಲರೂ ಅಂಜುವುದು ನಿಮಗೊಬ್ಬರಿಗೇ, ಏಕೆಂದರೆ, ಆವತ್ತು ಕ್ಯಾಬಿನೆಟ್‌ನಲ್ಲಿ ಎಲ್ಲರೂ ರಾಜೀನಾಮೆ ಕೊಟ್ಟರು, ನೀವೊಬ್ಬರು ಕೊಡಲಿಲ್ಲ. ಹೌದಲ್ಲವೇ, ಆವತ್ತು ನೀವು ಬಂದೇ ಇರಲಿಲ್ಲ. ಎಲ್ಲರ ರಾಜೀನಾಮೆ ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ ಎಂದು ಹೇಳುವ ನೀವು ಎಂದೂ ಅಂಜುವವರು ಅಲ್ಲ. ಆದ್ದರಿಂದ, ನೀವೇ ಮುಂದಾಗಿ, ಇಷ್ಟು ಜನ ಮಂತ್ರಿಗಳಿದ್ದರೆ ರಾಜ್ಯ ಹಾಳಾಗಿ ಹೋಗುತ್ತದೆ, ಆದ್ದರಿಂದ ನಾನು ರಾಜೀನಾಮೆ ಕೊಡುತ್ತೇನೆ ಎಂದು ಮೊದಲು ನೀವೇ ರಾಜೀನಾಮೆ ಕೊಟ್ಟುಬಿಡಿ. ಆಮೇಲೆ ಎಷ್ಟು ಜನರು ರಾಜೀನಾಮೆ ಕೊಡುತ್ತಾರೆ ನೋಡೋಣ ಅವರಿಗೆ ರೈತರ ಕಲ್ಯಾಣದ ಬಗ್ಗೆ ಕಾಳಜಿ ಎಷ್ಟಿದೆ ಎಂದು ನೋಡೋಣ. ರಮಾನಾಥ ರೈರವರೇ, ತಾವು ಬಯಲುಸೀಮೆ ಉದ್ಧಾರ ಮಾಡಿದ ಮೇಲೆ ಸಾರಿಗೆ ಇಲಾಖೆಗೆ ಹೋದವರು. ಬಯಲುಸೀಮೆಗೆ ಇವತ್ತಿಗೂ ಹಣ ಕೊಡಲಿಲ್ಲ. ಮಾನ್ಯ ಸಚಿವರು 50 ಲಕ್ಷ ರೂ ಕೊಡುತ್ತೇನೆ ಎಂದು ಹೇಳಿದರು. ಅದನ್ನು ಕೊಟ್ಟಿರೇನು? ಒಂದು ದುಡ್ಡನ್ನೂ ಕೊಡಲಿಲ್ಲ. ನೀವು ಇದ್ದಾಗ ಏನಾದರೂ ಕೊಡುತ್ತೀರಿ, ಬಹಳ ಕಷ್ಟ ಪಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೆ. ಏನೂ ಮಾಡುವುದ್ದಕೆ ಆಗಲಿಲ್ಲ, ನಿಮ್ಮ ಕೈಯಲ್ಲಿ ಹಾಗೇ ಹೋಗಿಬಿಟ್ಟಿರಿ. ಇಂದಿನ ಬಯಲುಸೀಮೆ ಮಂತ್ರಿಗಳೂ ಹಾಗೇ ಬುಸುಗುಡುತ್ತಾರೆ, ಅದೂ ನಡೆದಿದೆ. ಸನ್ಮಾನ್ಯ ಕೃಷಿ ಸಚಿವರು ತಾವು ಬರೆದುಕೊಂಡು ಉತ್ತರ ಕೊಡಬೇಕು. ಥ್ರೆಷೋಲ್ಡ್ ಯೀಲ್ಡ್ ಎಷ್ಟು ಎನ್ನುವುದನ್ನು ನಾಳೆ ನಿಮ್ಮ ಉತ್ತರದಲ್ಲಿ ಹೇಳಬೇಕು. ಯಾವ ಯಾವ ತಾಲ್ಲೂಕು ಮತ್ತು ಯಾವ ಯಾವ ಹೋಬಳಿಯಲ್ಲಿ ಥ್ರೆಷೋಲ್ಡ್ ಯೀಲ್ಡ್ ಎಷ್ಟು ಇದೆ ಎಷ್ಟೆಷ್ಟು ಬಂತು ಎನ್ನುವುದನ್ನು ನಮಗೆ ಹೇಳಬೇಕು. ಈ 132 ಕೋಟಿ ರೂಪಾಯಿಗಳನ್ನು ಹೇಗೆ ಅಡ್ಜೆಸ್ಟ್‌ಮೆಂಟ್ ಮಾಡಿದರು ಎನ್ನುವುದನ್ನೂ ಕೂಡ ನಮಗೆ ಹೇಳಬೇಕಾಗುತ್ತದೆ. ಅದನ್ನು ಹೇಳಿ, ಅದನ್ನು ಸರಿಪಡಿಸಿ, ಅದು ಸಾವಿರ ಕೋಟಿ ರೂಪಾಯಿ ಬಂದರೂ, ರೈತರಿಗೆ ಅದನ್ನು ತುಂಬುವಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಕೃಷಿ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದನ್ನು ತೀವ್ರವಾಗಿ ಮಾಡಿ. ಅದನ್ನು ತಕ್ಷಣ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ಬಹಳ ಕಷ್ಟ ಇದೆ. ಇಂಥ ಕಷ್ಟದಲ್ಲಿ ಈಗಾಗಲೇ ವಸೂಲಿ ಶುರುವಾಗಿದೆ. ದಯವಿಟ್ಟು ತಾವು ಇದರ ಬಗ್ಗೆ ಮುಖ್ಯಮಂತ್ರಿಗಳೊಡನೆ ಮಾತನಾಡಿ ತಕ್ಷಣವೇ ಬಡ್ಡಿ ಮನ್ನಾ ಮಾಡಬಕು. ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ, ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಮಾಡಿ ರೈತರಿಗೆ ಒಳ್ಳೆಯದು ಮಾಡಬೇಕು. ಆ ಸದ್ಬುದ್ಧಿಯನ್ನು ಪರಮಾತ್ಮ ಎಲ್ಲಾ ಮಂತ್ರಿಮಹೋದಯರಿಗೆ ಕೊಡಲಿ, ಮುಖ್ಯಮಂತ್ರಿಯವರಿಗೆ ಹೇಳುವವಂಥ ಧೈರ್ಯ ದೇಶಪಾಂಡೆಯವರಿಗೆ ಕೊಡಲಿ ಎಂದು ಹೇಳುತ್ತಾ, ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಈ ಕೆಲವು ಸಲಹೆಗಳನ್ನು ಮಾಡಿ, ತಾವು ಈ ರೀತಿ ನಡೆದುಕೊಳ್ಳುತ್ತೀರಿ ಎನ್ನುವ ವಿಶ್ವಾಸವನ್ನಿಟ್ಟು, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತಿದ್ದೇನೆ.

+ ಶ್ರೀ ಎ. ಪಾಪಣ್ಣ (ಹುಣಸೂರು): ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ವರ್ಷಕ್ಕೆ ಸುಮಾರು 180 ದಿವಸಗಳ ಕಾಲ ಮಳೆಗಾಲವಿರುತ್ತಿದ್ದು, ಅದರಲ್ಲಿ ಈಗಾಗಲೇ 100 ದಿವಸಗಳನ್ನು ಕಳೆದಿದ್ದೇವೆ. ರೇವತಿ ಮಳೆಯಿಂದ ಅರಿದ್ರ ಮಳೆಯವರೆಗೆ ಕಂಪ್ಲೀಟ್ ಕಾಲವನ್ನು ನಾವು ಕಳೆದಿದ್ದೇವೆ. ಅಶ್ವಿನಿ, ಭರಣಿ, ರೇವತಿ ಮಳೆಯಲ್ಲಿ ಬಿತ್ತನೆ ಮಾಡುವಂಥ ಎಳ್ಳು, ಜೋಳ, ಕಡ್ಲೆಕಾಯಿ, ಹತ್ತಿ ಬೆಳೆಗಳ ಬಿತ್ತನೆ ಕಾರ್ಯ ನಮ್ಮ ಜಿಲ್ಲೆಯಲ್ಲಿ 100ಕ್ಕೆ 40 ಪರ್ಸೆಂಟೆ ಆಗಿದ್ದು ಅವು ಈಗ ಸರ್ವನಾಶವಾಗಿದೆ. ಮಳೆ ಇಲ್ಲದೆ ಬಿತ್ತಿರುವ ಬೀಜದ ಬೆಳವಣಿಗೆ ಕುಂಠಿತಗೊಂಡು ಸಂಪೂರ್ಣ ನಾಶವಾಗಿದೆ. ಇನ್ನು ಉಳಿದ ಕೇವಲ 80 ದಿನಗಳ ಮಳೆಗಾಲದಲ್ಲಿ ಈ ಕಾಳುಕಡ್ಡಿ, ಹೊಗೆಸೊಪ್ಪು ಮತ್ತು ರಾಗಿಬೆಳೆ ಬೆಳೆಯುವಂಥ ಅವಕಾಶವಿದೆ. ಪ್ರಕೃತಿದತ್ತವಾಗಿ ಒಂದು ವಾಡಿಕೆ ಇರುವುದು ಏನೆಂದರೆ ಒಂದು ವರ್ಷ ಬಿದಿರು ಅಕ್ಕಿ ರಾಗಿ ಉದರಿದರೆ ಆ ವರ್ಷ ಕನಿಷ್ಟ ಮಳೆ ಆಗುತ್ತದೆ ಎನ್ನುವ ವಾಡಿಕೆ ಇದೆ. ಇದನ್ನು ನಮ್ಮಲ್ಲಿ ಹಿಂದಿನ ಪೂರ್ವಜರು ಹೇಳುವಂಥ ಮಾತು. ಈಗ ನಮ್ಮಲ್ಲಿ ಎಲ್ಲಾ ಕಡೆ ಬಿದಿರು ಅಕ್ಕಿ ಅಗಿ ಉದುರುತ್ತಿದೆ. ಆದ್ದರಿಂದ ಈ ವರ್ಷ ಕನಿಷ್ಟ ಮಳೆ ಆಗಿರುವುದಂತೂ ಈಗಾಗಲೇ ನಾವು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಮುಂದಕ್ಕೆ ಕೂಡ ಮಳೆ ಕಡಿಮೆ ಆಗುತ್ತದೆ ಎನ್ನುವುದನ್ನು ಗಮನಿಸುತ್ತಿದ್ದೇವೆ. ವರ್ಷದಲ್ಲಿಯ 180 ದಿವಸಗಳ ಮಳೆಗಾಲದಲ್ಲಿ ಈಗಾಗಲೇ 100 ದಿವಸ ಕಳೆದಿದ್ದು ಉಳಿದ 80 ದಿವಸದ ಮಳೆಯಿಂದ ಏನು ಮಾಡುವುದಕ್ಕೂ ಆಗದೆ ರೈತರಿಗೆ ಬಹಳ ತೊಂದರೆಯಾಗಿದೆ. ಕಳೆದ ಸಾಲಿನಲ್ಲಿ ರೈತರು ಬೆಳೆ ವಿಮೆ ಮಾಡಿಸಿದ್ದು ಏನು ಬೆಳೆ ಕಳೆದುಕೊಂಡಿದ್ದಾರೆ ಅಂಥವರಿಗೆ ಈ ಗಳಿಗೆವರೆಗೆ ವಿಮೆ ಹಣ ಸಿಕ್ಕಿಲ್ಲ. ಇವತ್ತು ರೈತರ ಕೈ ಖಾಲಿಯಾಗಿದ್ದು ಬಹಳ ಸಂಕಷ್ಟಕ್ಕೆ ಈಡಾಗಿದ್ದಾರೆ. ಈ ಬಗ್ಗೆ ಈಗಾಗಲೇ ಮಾತನಾಡಿದಂಥ ಹಿರಿಯ ಸದಸ್ಯರೆಲ್ಲಾ ಹೇಳಿದ್ದಾರೆ. ಈಗ ಸದನದಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದ್ದಾರೆ. ಪ್ರತಿಯೊಂದು ಹಳ್ಳಿಯಲ್ಲೂ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಟ್ಯಾಂಕುಗಳನ್ನು ನಿರ್ಮಿಸಿದ್ದಾರೆ. ಕುಡಿಯುವ ನೀರಿನ ಸೋರ್ಸಸ್ ಏನಿತ್ತು ಅದು ಅಂತರ್‌ಜಲ ಮಟ್ಟ ಕಡಿಮೆಯಾಗಿರುವುದರಿಂದ ಒಂದು ದಿವಸ ಕೂಡ ಗ್ರಾಮದಲ್ಲಿರುವ ಟ್ಯಾಂಕುಗಳು ತುಂಬುತ್ತಿಲ್ಲ. ಇವತ್ತು ಕುಡಿಯುವ ನೀರಿನ ಸೋರ್ಸಸ್‌ನ್ನು ಬದಲಾವಣೆ ಮಾಡಲೇಬೇಕು. ಎಲ್ಲಾದರೂ ದೂರದಿಂದ ಕುಡಿಯುವ ನೀರನ್ನು ತರುವಂಥ ವ್ಯವಸ್ಥೆಯನ್ನು ಮಾಡದೇ ಹೋದರೆ ಕುಡಿಯುವ ನೀರಿಗಾಗಿ ಹಾಹಾಕಾರ ಆಗುವುದಿಲ್ಲ ಸಂಶಯವೇ ಇಲ್ಲ. ಎನ್,ಆರ್,ಡಬ್ಲ್ಯೂ ಎಸ್ ಇರಬಹುದು, ಎಆರ್‌ಡಬ್ಲ್ಯೂಎಸ್ ಇರಬಹುದು, ಎಂಡಬ್ಲ್ಯೂಎಸ್ ಇರಬಹುದು, ಇವೆಲ್ಲ ಕುಡಿಯುವ ನೀರಿನ ಯೋಜನೆಗಳು. ಪ್ರಕೃತಿ ವಿಕೋಪಕ್ಕೆ ಹೋಗುತ್ತಿರುವುದರಿಂದ, ಅಂತರ್‌ಜಲ ಮಟ್ಟ ಕಡಿಮೆ ಆಗುತ್ತಿರುವುದರಿಂದ ಇವತ್ತು ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ದನಕರುಗಳಿಗೆ ಮೇವು ಇಲ್ಲ ಜನರಿಗೆ ದುಡಿಯುವುದಕ್ಕೆ ಕೆಲಸವಿಲ್ಲ. 'ನಮ್ಮ ಹೊಲ ನಮ್ಮ ರಸ್ತೆ' ಎನ್ನುವ ಒಂದು ಕಾರ್ಯಕ್ರಮವನ್ನು ತರುತ್ತೇವೆಂದು, ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಅಧಿವೇಶನದಲ್ಲಿ ಹೇಳಿದ್ದರು. ಇವತ್ತು ನಮ್ಮ ಹೊಲ ನಮ್ಮ ರಸ್ತೆ ಎನ್ನುವ ಕಾರ್ಯಕ್ರಮದ ಜೊತೆಗೆ ಹಳ್ಳಿಗಾಡಿನಲ್ಲಿ 'ಕೂಲಿಗಾಗಿ ಕಾಳು' ಎನ್ನುವ ಯೋಜನೆಯ ಮೂಲಕ ಕೆಲಸವನ್ನು ಕೂಡಲೇ ತೆಗೆದುಕೊಂಡರೆ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ ಇವತ್ತು ಮಳೆ ಇಲ್ಲದೆ ಮರಗಿಡಗಳು ಒಣಗುತ್ತಿವೆ. ನಮ್ಮ ಹುಣಸೂರು ಬಾರ್ಡ್‌ರ್‌ನಲ್ಲಿ ರಾಜೀವಗಾಂಧಿ ರಾಷ್ಟ್ರೀಯ

ಉದ್ಯಾನವನ ಇದ್ದು ಅದರ ಪಕ್ಕದಲ್ಲಿ ನನ್ನ ಕ್ಷೇತ್ರವಿದ್ದು, ಕಾಡುಗಳಲ್ಲಿ ಮಳೆಯಿಲ್ಲದೆ ನೀರು ಇಲ್ಲದಿರುವುದರಿಂದ ಅದರ ಸುತ್ತ ಇರುವಂಥ ಗ್ರಾಮಗಳಿಗೆ ಕಾಡುಪ್ರಾಣಿಗಳು ನುಗ್ಗಿ ರೈತರಿಗೆ ಉಪಟಳ ಕೊಡುತ್ತಿವೆ. ಎಲ್ಲಾ ಕಡೆ ಅರಣ್ಯ ನಾಶವಾಗುತ್ತಿದೆ. ಪಶು ಪಕ್ಷಿಗಳು ನಾಶವಾಗುತ್ತಿವೆ. ಅವು ನಮ್ಮ ಜೀವ ಉಳಿಸಿಕೊಳ್ಳುವುದಕ್ಕೆ ಬೇರೆ ಕಡೆಗೆ ಓಡಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಜಲಚರ ಸಸ್ಯ ರಾಶಿಗಳೆಲ್ಲಾ ನಾಶವಾಗುತ್ತಿದೆ. ಇದಕ್ಕೆ ರಾಜ್ಯ ಸರ್ಕಾರ ಇರಬಹುದು ಅಥವಾ ಕೇಂದ್ರ ಸರ್ಕಾರ ಇರಬಹುದು, ಪರ್ಯಾಯವಾದಂಥ ಕಾರ್ಯಕ್ರಮವನ್ನು ರೂಪಿಸಿಕೊಳ್ಳದೇ ಹೋದರೆ ಪ್ರತೀ ವರ್ಷ ನಾವು ಬರಪರಿಹಾರದ ವಿಚಾರವಾಗಿ ಮಾತನಾಡುತ್ತಲೇ ಇರಬೇಕಾಗುತ್ತದೆ. ನಮ್ಮ ರಾಷ್ಟ್ರದ ಪ್ರಧಾನಮಂತ್ರಿಗಳಾದಂಥ ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಿಪೇಯಿ ಅವರು ಒಂದು ದಿವಸ ಟಿ.ವಿ.ಯಲ್ಲಿ ಮಾತನಾಡುತ್ತಾ- 'ಗ್ರಾಮಸಭೆಯಿಂದ ವಿಧಾನಸಭೆ ಚುನಾವಣೆವರೆಗೆ ನಾವು ಸೋಲುತ್ತಿರುವುದು ನಮ್ಮ ಕಾರ್ಯಕ್ರಮಗಳು ಗ್ರಾಮದ ಹತ್ತಿರ ಹೋಗಲಿಲ್ಲ, ಅದನ್ನು ನಾನು ಗಮನಿಸಿದ್ದೇನೆ, ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ಎಂದು ಹೇಳಿದರು. ಪರವಾಗಿಲ್ಲ, ಈಗಲಾದರೂ ಗ್ರಾಮೀಣ ಪ್ರದೇಶದ ಕಡೆಗೆ ಮಾನ್ಯ ಪ್ರಧಾನ ಮಂತ್ರಿಗಳು ಗಮನ ಕೊಡುವುದಕ್ಕೆ ಇಚ್ಛೆಪಟ್ಟಿದ್ದಾರಲ್ಲಾ ಎಂದು ನಾನು ಬಹಳಷ್ಟು ಸಂತೋಷಪಟ್ಟೆ. ಅದಾದ ಬೆಳಿಗ್ಗೆಯೇ ಈ ರಾಜ್ಯದ, ರಾಷ್ಟ್ರದ ಮುಖ್ಯಮಂತ್ರಿಗಳೆಲ್ಲ ಸೇರಿ ಜಲನೀತಿ ರೂಪಿಸುವುದಕ್ಕೆ ಒಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಹೇಳಿದಂಥ ಮಾತು ಏನೆಂದರೆ- ' ಅಂತರ್‌ಜಲ ಕೃಷಿಗೆ ಸಲ್ಲದು, ಅಂತರ್‌ಜಲವನ್ನು ತೆಗೆದು ಕೃಷಿ ಮಾಡುವುದು ಸಲ್ಲದು, ಅಂತರ್‌ಜಲ ಕೃಷಿಗೆ ವಿದ್ಯುಚ್ಛಕ್ತಿಗೆ ಸಬ್ಸಿಡಿ ಸಲ್ಲದು' ಎಂದು. ಇದು ಎಂಥ ದೌರ್ಭಾಗ್ಯ ಸ್ವಾಮಿ? ಕೃಷಿ ಪ್ರಧಾನವಾದಂಥ ರಾಷ್ಟ್ರದಲ್ಲಿ ಕೃಷಿ ಸಂಪೂರ್ಣವಾಗಿ ಸರ್ವನಾಶವಾಗುವಂಥ ಎರಡು ಪದಗಳನ್ನು ಮಾನ್ಯ ಪ್ರಧಾನ ಮಂತ್ರಿಯವರು ಬಳಸಿದರು. ಇದನ್ನು ಕೇಳಿ ನನಗೆ ಬಹಳ ದಿಗ್ಭ್ರಮೆಯಾಯಿತು. ಕೃಷಿಗೆ ವಿದ್ಯುಚ್ಛಕ್ತಿಗೆ ಸಬ್ಸಿಡಿ ಸಲ್ಲದು, ಅಂತರ್‌ಜಲ ಕೃಷಿಗೆ ಸಲ್ಲದು ಇದರ ಅರ್ಥ ಏನೆಂದರೆ, ಅಂತರ್‌ಜಲ ಕಡಿಮೆಯಾಗಿರುವುದು ನಿಜ, ನೈಸರ್ಗಿಕ ಸಂಪತ್ತು ಕಡಿಮೆಯಾಗಿರುವುದು ನಿಜ, ಪ್ರಕೃತಿ ನಾಶವಾಗಿರುವುದು ನಿಜ. ಆದರೆ ಇದಕ್ಕೆ ಪರ್ಯಾಯ ಯೋಜನೆ ಮಾಡಬೇಕೇ ಹೊರತು ಅಂತರ್‌ಜಲ ಕಡಿಮೆಯಾಯಿತು ಎಂದು ಬೋರನ್ನು ನಿಲ್ಲಿಸಿ ಬಿಡಿ ವ್ಯವಸಾಯ ಮಾಡಬೇಡಿ, ಬೋರ್‌ನಲ್ಲಿ ನೀರು ಕಡಿಮೆಯಾದರೆ ಅದನ್ನು ಮುಚ್ಚಿಬಿಡಿ ನೀರು ಕುಡಿಯಬೇಡಿ, ವಿದ್ಯುಚ್ಛಕ್ತಿ ಹೋಗುತ್ತದೆ ಅದಕ್ಕೆ ಸಬ್ಸಿಡಿ ಕೊಡಬೇಡಿ ಎಂದು ಹೇಳುವುದಿಲ್ಲ. ಇಡೀ ಪ್ರಪಂಚದಲ್ಲಿ ಬಹಳ ಪ್ರಕೃತಿದತ್ತವಾದ ನೈಸರ್ಗಿಕ ಸಂಪತ್ತುವುಳ್ಳ ನಮ್ಮ ರಾಷ್ಟ್ರದಲ್ಲಿ ಪರ್ಯಾಯವಾದ ವ್ಯವಸ್ಥೆ ಮಾಡುವುದಕ್ಕೆ ಅವಕಾಶವಿದೆ 1874ನೇ ಇಸವಿಯಲ್ಲಿ ಗಾಂಗಾ ಕಾವೇರಿ ಸಂಗಮಕ್ಕೆ ಸಂಬಂಧಿಸಿದ ಸುಮಾರು 840 ಕೋಟಿ ರೂಪಾಯಿಗಳ ವೆಚ್ಚದ ಸುಮಾರು 2600 ಕಿ.ಮೀ. ಉದ್ದದಷ್ಟು ಬರುವಂಥ ಒಂದು ಯೋಜನೆಯನ್ನು ತಯಾರು ಮಾಡಿ ಟ್ಟಿದ್ದರು. ಆ ಯೋಜನೆಯನ್ನು ಏಕೆ ಸ್ವಾಮಿ ನೀವು ಮುಟ್ಟುವುದಿಲ್ಲ? ಏನು ತೊಂದರೆ ಇದೆ? ಸುಮಾರು 2600 ಕಿ.ಮೀ. ಬರುವಂಥ ಈ ಯೋಜನೆಯಿಂದ ಸುಮಾರು 8-10 ರಾಜ್ಯಗಳಲ್ಲಿ ಸುಮಾರು 70 ಭಾಗ ಪ್ರದೇಶ ನೀರಾವರಿ ಆಗಬಹುದು. ಈ ಯೋಜನೆಯನ್ನು ಮಾಡಿದರೆ ನೀರಿನ ಬರ ಹೋಗಲಾಡಿಸುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದಂತಾಗುತ್ತದೆ. ಈ ವ್ಯವಸ್ಥೆಯನ್ನು ಮಾಡದಿದ್ದರೆ ನಮ್ಮ ರಾಷ್ಟ್ರಕ್ಕೆ ಉಳಿಗಾಲವಿಲ್ಲವೆಂದು

ಅಂದೇ ತೀರ್ಮಾನ ಮಾಡಿದ್ದರು. ಇದನ್ನು 1874 ರಲ್ಲಿ ಬಂದಂಥ ಬ್ರಿಟಿಷ್ ರಾಣಿ ಪಬ್ಲಿಷ್ ಮಾಡಿದರು. ಇದೇ ವಿಚಾರ 1948ರಲ್ಲಿ ಒಂದು ಸಲ ಬಂತು ಆಗಲೂ ವಜಾ ಮಾಡಿದರು. ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಏಕೆ ಆಗುವುದಿಲ್ಲ? ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕೆಂದು ನಾನು ಹೇಳಬಯಸುತ್ತೇನೆ. ಇಂಥ ಸಂದರ್ಭದಲ್ಲಿ ಗಂಗಾಕಾವೇರಿ ಸಂಗಮ ಮಾಡುವಂಥ ಕಾರ್ಯವನ್ನು ಮಾಡಿದರೆ ಯಾವ ನೀರಿಗೂ ತೊಂದರೆ ಆಗುವುದಿಲ್ಲ. ಎಂಥ ಪ್ರಕೃತಿದತ್ತವಾದ ಗಂಗೆ. ಬೇಸಿಗೆಯಲ್ಲಿ ಗಂಗೋತ್ರಿ, ಹೃಷಿಕೇಷ, ಹರಿದ್ವಾರ ಕಡೆ ಬಿಸಿಲಿನ ಝಳಕ್ಕೆ ಇಡೀ ಹಿಮಕರಗಿ ನೀರು ಬರುತ್ತದೆ. ಮಳೆಗಾಲದಲ್ಲಿ ನೀರು ತುಂಬಿ ಹರಿಯುತ್ತದೆ. ಇಡೀ ಗಂಗಾನದಿಯಿಂದ ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ಈ ಭಾಗದಲ್ಲಿ ಕೇವಲ ಒಂದೂವರೆ ಪರ್ಸೆಂಟ್‌ನಷ್ಟು ನೀರನ್ನು ಮಾತ್ರ ಉಪಯೋಗಿಸುತ್ತಿದ್ದಾರೆ. ಉಳಿದ 98.5 ಪರ್ಸೆಂಟ್ ನೀರು ಸಮುದ್ರಕ್ಕೆ ಹೋಗಿ ಬೀಳುತ್ತಿದೆ. ಒಂದು ಮೆಗಾವ್ಯಾಟ್ ವಿದ್ಯುಚ್ಛಕ್ತಿ ಸಹ ಖರ್ಚು ಇಲ್ಲದೆ ಉತ್ಪಾದನೆಯಾಗುತ್ತಿದೆ ಇವತ್ತು ಹರಿಯಾಣ, ಪಂಜಾಬ್, ಉತ್ತರ ಪ್ರದೇಶ ಈ ಭಾಗದಲ್ಲಿ ಸಂಪೂರ್ಣ ನೀರಾವರಿ ಆಗುತ್ತಿದೆ. ದೆಹಲಿಯಿಂದ ಡೆಹರಾಡೂನ್‌ಗೆ 350-400 ಕಿ.ಮೀ ಮೋರಚ್ ಕಡೆಯಿಂದ ಹೋಗುತ್ತಿರುವಾಗ ಎರಡೂ ಕಡೆ ಕಣ್ಣು ಹಾಯಿಸಿ ನೋಡುತ್ತಿದ್ದರೆ ಪೂರ್ತಿ ನೀರಾವರಿ ಪ್ರದೇಶ ಕಾಣುತ್ತಿರುತ್ತದೆ. ಈ ರೀತಿ ಇರುವಾಗ ಆ ನೀರನ್ನು ಬಳಸಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರದವರು ಏಕೆ ಪ್ರಯತ್ನ ಪಡುತ್ತಿಲ್ಲ? ನಮ್ಮ ರಾಜ್ಯದಲ್ಲಿ ಪ್ರಕೃತಿದತ್ತವಾಗಿ ನೀರು ನಿಲ್ಲುವಂಥ ಕೆರೆಗಳು 33 ಸಾವಿರ ಎಕರೆ ಪ್ರದೇಶದಲ್ಲಿ ಇದೆ. ಇದರಲ್ಲಿ 30 ಸಾವಿರ ಎಕರೆ ಪ್ರದೇಶ ಹೂಳು ತುಂಬಿ ನಿಂತಿದೆ. ಕೇವಲ 3 ಸಾವಿರ ಎಕರೆಯಲ್ಲಿ ಮಾತ್ರ ನೀರು ನಿಲ್ಲುವಂಥ ಪರಿಸ್ಥಿತಿ ಇದೆ. ಈ ಕೆರೆ ಪ್ರದೇಶವನ್ನು ಕೆಲವರೆಲ್ಲಾ ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡು ತೋಟ ಮಾಡಿಕೊಂಡಿದ್ದಾರೆ. ಹೀಗಾಗಿ ನಮಗೆ ಎಲ್ಲಿ ಅಂತರ್‌ಜಲ ಹೆಚ್ಚಾಗುತ್ತದೆ? ಅಂತರ್‌ಜಲ ಹೆಚ್ಚು ಮಾಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ? ಕೆರೆ ಜಾಗವನ್ನು ಒತ್ತುವರಿ ಮಾಡಿ, ಕೆರೆಯಲ್ಲಿ ನೀರು ನಿಲ್ಲದೆ, ಮಳೆ ನೀರು ಸರಿಯಾದ ರೀತಿಯಲ್ಲಿ ಶೇಖರಣೆ ಮಾಡಿಕೊಳ್ಳದೆ, ನೀರು ಬೇಕು ಎಂದರೆ ಹೇಗೆ? ಕೆರೆಯು ನೀರೆಲ್ಲಾ ಕೋಟೆ ಕೊತ್ತಲಗಳಲ್ಲಿ ಬಿದ್ದು ಹೊರಗಡೆ ಹೋಗುತ್ತಿದೆ. ನಮ್ಮ ಕಾವೇರಿ ನೀರು ಸುಮಾರು 60 ರಿಂದ 70 ಟಿ.ಎಂ.ಸಿ.ಯಷ್ಟು ಹೋಗಿ ಸಮುದ್ರಕ್ಕೆ ತಲಪುತ್ತಿದೆ ಎಂದು ಆಗಲೇ ಮಾತನಾಡಿದ ಮಾನ್ಯ ಸದಸ್ಯರೊಬ್ಬರು ಹೇಳಿದರು.

5.30 ಪಿ. ಎಂ

ಈ ನೀರನ್ನು ಸದ್ಬಳಕೆ ಮಾಡಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ. ಪ್ರಕೃತಿಯನ್ನು ನಾಶ ಮಾಡಿದ್ದೇವೆ. ಇವೆಲ್ಲವನ್ನು ಬಳಸಿಕೊಳ್ಳಬೇಕಾದರೆ ಇವುಗಳನ್ನೆಲ್ಲ ಮಾಡಬೇಕಾಗುತ್ತದೆಂದು ಹೇಳಿ, ಈ ಸಂದರ್ಭದಲ್ಲಿ ತಕ್ಷಣವೇ ಸರ್ಕಾರ ಬರಪರಿಹಾರದ ಘೋಷಣೆ ಮಾಡಿ ನನ್ನ ಕ್ಷೇತ್ರದಲ್ಲಿ, ನನ್ನ ಜಿಲ್ಲೆಯಲ್ಲಿ ಕಾಮಗಾರಿಗಳು, ಕುಡಿಯುವ ನೀರಿನ ಯೋಜನೆಗಳು, ಧನಕರುಗಳಿಗೆ ಮೇವಿನ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾನ್ಯ ಅಧ್ಯಕ್ಷರು ಕರೆದಂಥ ಸಭೆಯಲ್ಲಿ ತಾವು ಭಾಗವಹಿಸಿರಲಿಲ್ಲ. ಹಿರಿಯ ಸಚಿವರಾಗಿರತಕ್ಕಂಥ ಮಾನ್ಯ ಖರ್ಗೆಯವರು ಹಾಜರಾತಿಯ ಬಗ್ಗೆ ಮಾತನಾಡಿದರು. ವಿಧಾನ ಸಭೆಯಲ್ಲಿ ಹಾಜರಾತಿ ಇರುವುದಿಲ್ಲವೆಂದು ಹೇಳಿದರು. ನಾನು ಅತ್ಯಂತ ತೀವ್ರವಾದ ಆತಂಕವನ್ನು ವ್ಯಕ್ತಮಾಡಬಯಸುತ್ತೇನೆ. ರಾಜ್ಯದ ಜನ ನಮ್ಮ ಕಡೆ ನೋಡುತ್ತಿದ್ದಾರೆ, ಚುನಾಯಿತ ಪ್ರತಿನಿದಿಗಳ ಬಗ್ಗೆ ಅಪಹಾಸ್ಯಮಾಡುತ್ತಾರೆ, ನಾವು ಬಹಳ ಗಂಭೀರವಾದ ವಿಚಾರವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿರುವಾಗ ಸಚಿವಸಂಪುಟದ 48 ಸದಸ್ಯರ ಪೈಕಿ 20 ಜನರಾದರೂ ಇದ್ದಿದ್ದರೆ ಅವರ ಸರ್ಕಾರಕ್ಕೆ, ಅವರ ನಾಯಕರಿಗೆ ಬಹಳ ತೂಕ, ಗೌರವ ಹೆಚ್ಚುತ್ತಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆ ಹೀಗೆ ಮಾಡುತ್ತಿದ್ದಾರೆ? ಏಕೆ ಈ ಅಸಮಾಧಾನ? ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಇದನ್ನು ನಾನು ಖಂಡಿಸುತ್ತೇನೆ. ನಾನು, ಎಸ್.ಎಸ್. ಪಾಟೀಲರು, ನಾವೆಲ್ಲರೂ ಹಲವಾರು ಸಲ ಧ್ವನಿಗೂಡಿಸಿ ಹೇಳಿ ಕೊನೆಯ ಪಕ್ಷ ಮಂತ್ರಿಗಳಾದರೂ ಇರಬೇಕೆಂದು ಹೇಳಿದರೆ, ವಿಧಾನಸಬೆಯ ಅಧಿವೇಶನ ನಿನ್ನೆ ಪ್ರಾರಂಭವಾಯಿತು. ಮಾನ್ಯ ಜತ್ತಿಯವರು ಸತ್ತರು ಎಂದು ಅವರ ಹೆಸರಿನಲ್ಲಿ ಒಂದು ದಿವಸ ರಜೆಯಾಯಿತು. ವಾಸ್ತವಿಕವಾಗಿ ಇವತ್ತು ಮೊದಲನೆಯ ದಿನ. ರಾಜ್ಯದ ರೈತರ ಗಂಭೀರವಾದ ಸಮಸ್ಯೆಯ ಬಗ್ಗೆ ಚರ್ಚೆ ಮಾಡತಕ್ಕ ಸಂದರ್ಭದಲ್ಲಿ, ಮಾನ್ಯ ಹನುಮೇಗೌಡರ ಭಾಷಣವನ್ನು ಕೇಳಿದ ಮೇಲೆ ಎಂಥವರಿಗೂ ಕರುಳು ಕತ್ತರಿಸುತ್ತದೆ, ಅಂಥ ಮಾತನ್ನು ಅವರು ಹೇಳಿದ್ದಾರೆ, ಇದನ್ನು ನಾನು ಖಂಡಿಸುತ್ತೇನೆ. ಎರಡನೆಯದಾಗಿ ವಿರೋಧ ಪಕ್ಷದ ನಾಯಕರು ಮತ್ತು ನಾವು ಬರಗಾಲದ ಪರಿಸ್ಥಿತಿಯ ಬಗ್ಗೆ ಮತ್ತು ವಿಶೇಷವಾಗಿ ರೈತರಿಗೆ ಬರಬೇಕಾಗಿರತಕ್ಕಂಥ ಬೆಳೆ ವಿಮಾ ಹಣವು ಇನ್ನೂ ಬಿಡುಗಡೆಯಾಗದಿರುವ ಬಗ್ಗೆ ಚರ್ಚೆಯಾಗಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇವೆ. ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳ ಮೊದಲನೆಯ ಪುಟದಿಂದ ಕೊನೆಯ ಪುಟದವರೆಗೆ ಬಹಳಷ್ಟು ಪುಟಗಳಲ್ಲಿ ಮುಖ್ಯಮಂತ್ರಿಗಳ ಭಾವಚಿತ್ರಗಳು ಬರುತ್ತವೆ. ಯಾವುದೇ ದಿನ ಅದು ತಪ್ಪಿದ್ದಿಲ್ಲ. ಎಲ್ಲಾದರಲ್ಲೂ ಚಕ್ಕುಗಳ ವಿತರಣೆ, ಕಾರ್ಯಕ್ರಮದ ಉದ್ಘಾಟನೆ ಎಂದು ಬಹಳ ದೊಡ್ಡ ಪ್ರಮಾಣದಲ್ಲಿ ತುತ್ತೂರಿಯನ್ನು ಬಾರಿಸುತ್ತಿದ್ದಾರೆ, ನಿಮಗೆ ಕರುಣೆ ಇಲ್ಲವೆ? ಅದು ಕೇಂದ್ರ ಸರ್ಕಾರವಾಗಿರಬಹುದು ಅಥವಾ ರಾಜ್ಯ ಸರ್ಕಾರವಾಗಿಸಬಹುದು. 136 ಕೋಟಿ ರೂಪಾಯಿ ರೈತರಿಗೆ ಬರಬೇಕಾಗಿರತಕ್ಕ ಬೆಳೆ ವಿಮಾ ಹಣವನ್ನು ಕೊಟ್ಟಿಲ್ಲವಲ್ಲಾ ಅವರ ಶಾಪಕ್ಕೆ ತಾವು ಒಳಗಾಗುವುದಿಲ್ಲವೆ? ತಮ್ಮ ಟ್ರೆಜರಿಗಳು ವಾರದಲ್ಲಿ ಒಂದು ದಿವಸ ಕೆಲಸ ಮಾಡುತ್ತವೆ. ನಿಮ್ಮ ಟ್ರೆಜರಿಯನ್ನು ಬಂದ್ ಮಾಡಿ. ಏತಕ್ಕೆ ಟ್ರೆಜರಿಯನ್ನಿಟ್ಟುಕೊಂಡಿದ್ದೀರಿ? ನಮೇನು ಗೊತ್ತಾಗುವುದಿಲ್ಲವೆ? ನಾವು ಆಡಳಿತ ನಡೆಸಿಲ್ಲವೆ? ಶುಕ್ರವಾರ ಒಂದು ದಿವಸ ಕೆಲಸ ಮಾಡುತ್ತದೆ. ಅದರಲ್ಲಿ ಹಣವಿಲ್ಲ. ವಾಸ್ತವಾಂಶವನ್ನು ಕೇಳಲು ತಾವು ತಯಾರಿಲ್ಲ. ಎಲ್ಲಿದೆ ಕೃಷಿ ಇಲಾಖೆ? ಕರ್ನಾಟಕದ ತೆಂಗು ಬೆಳೆಗಾರರನ್ನು ಶಾಶ್ವತವಾಗಿ ನೀವು ಹಾಳು ಮಾಡಿದ್ದೀರಿ. ನೀವು ದುಡ್ಡು ಮಾಡುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರಿ ಖಜಾನೆಯಿಂದ ಹಣವನ್ನು ಪಡೆದು ನಾಲ್ಕು ಕೋಟಿ ತೆಂಗಿನ ಮರಗಳನ್ನು ಹಾಳು ಮಾಡಿರುವ ಶಾಪ ನಿಮಗೆ ತಟ್ಟುತ್ತದೆ. ಅದರಲ್ಲೇನೂ ನೀವು ಸಂಶಯವನ್ನಿಟ್ಟುಕೊಳ್ಳಬೇಡಿ. ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದರು. ತೆಂಗಿಗೆ ಬರುತ್ತಿರುವ ನುಸಿಪೀಡೆ, ಬೇರೆ ಬೆಳೆಗಳಿಗೆ ಬರುತ್ತಿರುವ

ರೋಗಗಳ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಅದರಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ನಾವು ಮಾತನಾಡಬೇಕು. ಅವರಿಗೆ ತೆಗೆದುಕೊಂಡು ಹೋಗಿ ಬಡ್ತಿ ಕೊಟ್ಟಿದ್ದೀರಿ, ನಾವೂ ರಾಯರೆಡ್ಡಿಯವರಿಗೆ ಮಾಡಿದ್ದೆವು, ಅವರ ಮಾತನ್ನು ಯಾರು ಕೇಳುತ್ತಾರೆ? ಇಲ್ಲಿ ಸಲ್ಲದವನು ಅಲ್ಲಿ ಕೇಂದ್ರ ಸರ್ಕಾರದಲ್ಲಿ ಸಲ್ಲುತ್ತಾನೆಯೇ? ಅದಕ್ಕೊಂದು ಪೋಸ್ಟ್ ಕ್ರಿಯೇಟ್ ಮಾಡಿಕೊಂಡಿದ್ದೀರಾ? ತಾವು ಅಗ್ರಿಕಲ್ಚರ್ ಇಲಾಖೆಯನ್ನೇ ಕ್ಲೋಸ್ ಮಾಡಿಬಿಡಿ. ಪಾಪ ರಾಜೂಗೌಡರು ನಗುತ್ತಾ ಕುಳಿತಿದ್ದಾರೆ. ಪಾಪ ಅವರಿಗೆ ಕೃಷಿ ಸಂಸ್ಕರಣಾ ಇಲಾಖೆ ಕೊಟ್ಟಿದ್ದೀರಿ. ಅಧಿಕಾರಿಗಳನ್ನು ಕೇಳಿದರೆ ನಿಮಗೂ ನಮಗೂ ಸಂಬಂಧವೇ ಇಲ್ಲವೆಂದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಆಫೀಸರ್ಸ್ ಅವರಿಗೆ ಹೇಳುತ್ತಾರೆ. ನನಗೆ ಬಹಳ ನೋವಾಗುತ್ತದೆ. ಮಾನ್ಯ ರಾಜೂಗೌಡರೆ, ಪ್ರಿನ್ಸಿಪಲ್ ಸೆಕ್ರೆಟರಿ, ಚೀಫ್ ಸೆಕ್ರೆಟರಿ ಎಲ್ಲರೂ ತಾವು ಹೇಳಿದಂತೆ ಕೇಳಬೇಕು ನೀವು ಕರೆದಾಗ ಅವರುಗಳು ಬರಬೇಕು. ತಾವು ಲೆಜಿಸ್ಲೇಚರ್ಸ್ ಹೋಮ್‌ಗೆ ಕರೆದರೂ ಅವರುಗಳು ಬರಬೇಕಾಗುತ್ತದೆ. ಯಾಕೆ ಬರುವುದಿಲ್ಲ? ಅವರುಗಳು ಸಂಬಳ ತೆಗೆದುಕೊಳ್ಳುವುದಿಲ್ಲವೆ? ಅವರಿಗೆ ಖಜಾನೆಯ ಬ್ಯಾನ್ ಮಾಡಿದ್ದೀರಾ? ಖಜಾನೆಯ ಬ್ಯಾನ್ ಮಾಡಿರುವುದು ಬೇರೆಯವರಿಗೆ ರೈತರಿಗೆ ನೀವು ಟ್ರಜರಿ ಬ್ಯಾನ್ ಮಾಡಿರುವುದು. ಸಚಿವಸಂಪುಟವೆಂದು ಮಾಡಿದ್ದಾರೆ, ಅದರ ಬಗ್ಗೆ ಮಾನ್ಯ ಎಸ್.ಎಸ್. ಪಾಟೀಲರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಸೂಕ್ಷ್ಮವಾಗಿ ಮಾತನಾಡಿದ್ದಾರೆ. ಅದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡುತ್ತೇವೆ. ಅದರ ಬಗ್ಗೆ ಈಗ ಮಾತನಾಡಲು ಹೋಗುವುದಿಲ್ಲ, ಏಕೆಂದರೆ ಬಹಳ ಸಮಯ ತೆಗೆದುಕೊಳ್ಳುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಧರ್ಮಯುದ್ಧದ ಬಗ್ಗೆ ಮಾತನಾಡಿದರು ಧರ್ಮಯುದ್ಧದ ಮೇಲೆ ಭೀಮನ ಗದೆಯನ್ನು ಬಾರಿಸುತ್ತೇವೆಂದು ಹೇಳಿದ್ದರು. ಆ ಗದೆ ಟೊಳ್ಳಾಯಿತೋ ಧರ್ಮಯುದ್ಧವೇನಾಯಿತು ಅವೆಲ್ಲದರ ಬಗ್ಗೆ ಅನಂತರ ಕೇಳೋಣ. ಆದರೆ ಪ್ರಸ್ತುತ ತಮ್ಮ ಕೃಷಿ ಇಲಾಖೆಯನ್ನು ಮುಚ್ಚಿಬಿಡುವುದು ಒಳ್ಳೆಯದು ಮಾನ್ಯ ಕೌಜಲಗಿಯವರೆ. ತಾವು ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಆ ಇಲಾಖೆಯ ಸಚಿವರಾಗಿ ಬಂದಿದ್ದೀರಿ. ತಾವು ಆ ಪಕ್ಷಕ್ಕೆ ಸೀನಿಯರ್ ಲೀಡರ್, ತಮಗೆ ಕೃಷಿ ಇಲಾಖೆ ಬಹಳ ಕಷ್ಟಕಾಲದಲ್ಲಿ ಸಿಕ್ಕಿದೆ. ನನಗನ್ನಿಸುತ್ತದೆ, ಇದನ್ನು ಮುಚ್ಚಿಬಿಡುವುದು ಒಳ್ಳೆಯದು. ಮೂರು ತಿಂಗಳುಗಳಾಯಿತು, ಎಳ್ಳು, ಶೇಂಗಾ ಬಿತ್ತುವುದು, ಬಯಲು ಸೀಮೆಯಲ್ಲಿ ಇದುವರೆಗೆ ಭೂಮಿಯನ್ನು ಸಲ ಸಹ ಉಳುಮೆ ಮಾಡಲು ಆಗಿಲ್ಲ. ಮೂಡಿಗೆರೆಯಿಂದ ನಮ್ಮ ರೈತ ಕಾರ್ಮಿಕರು ನಿನ್ನೆ ಬಂದಿದ್ದರು. ಪ್ರತಿವರ್ಷ ಇಷ್ಟೊತ್ತಿಗೆ 60 ಇಂಚು ಮಳೆಯಾಗಬೇಕಿತ್ತು. ಅಲ್ಲಿ ಇನ್ನೂ 25 ಇಂಚು ಸಹ ಮಳೆಯಾಗಿಲ್ಲ. ಶಿವಮೊಗ್ಗದಲ್ಲಿ ಬರಗಾಲ. ಏನೋ ಕಾರವಾರದಲ್ಲಿ ಸ್ವಲ್ಪ ಮಳೆಬಂದಾಂತಾಯಿತು. ಹೋದ ವರ್ಷ ಕಾರವಾರದಲ್ಲಿ ಬರಗಾಲ. ಮಾನ್ಯ ದೇಶ್‌ಪಾಂಡೆಯವರು ನನಗೆ ದೀರ್ಘವಾದ ಉತ್ತರವುಳ್ಳ ಪತ್ರವೊಂದನ್ನು ಬರೆದಿದ್ದಾರೆ. ನಾನು ಕುಮಟಾದಲ್ಲಿ ಹೋಗಿ ಭಾಷಣ ಮಾಡಿದಾಗ ನಿಮ್ಮ ಸರ್ಕಾರ ಕಳೆದ ವರ್ಷ ಬರಗಾಲದ ಪರಿಸ್ಥಿತಿಯಲ್ಲಿ ಏನೂ ಕೆಲಸ ಮಾಡಲಿಲ್ಲ, ಬರೀ ಬೋಗಸ್ ಭಾಷಣಗಳು ಎಂದು ನಾನು ಹೇಳಿದ್ದೆ. ಅದಕ್ಕೆ ಉತ್ತರವಾಗಿ ಇವರ ಹಳಿಯಾಳ ಕ್ಷೇತ್ರಕ್ಕೆ ನಾಲ್ಕೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡಿರುವುದಾಗಿ ಹೇಳಿ ಉತ್ತರವನ್ನು ಬರೆದರು, ಸೌಜನ್ಯ ತೋರಿಸಿದರು ನನಗೆ ಬಹಳ ಸಂತೋಷವಾಯಿತು. ನಾನು ಕುಮಟಾಕ್ಕೆ ಹೋಗಿದ್ದಾಗ, ಕಾರವಾರ ಜಿಲ್ಲೆಯಲ್ಲಿ ಕಳೆದ

ವರ್ಷ ಬರಗಾಲ ಆಗಿದ್ದಾಗ ಮಾನ್ಯ ಜಿಲ್ಲಾಮಂತ್ರಿಗಳು ಅವರ ಕ್ಷೇತ್ರಕ್ಕೆ ಏನು ಕೆಲಸ ಮಾಡಿದ್ದಾರೆ ಎಂದು ಕೇಳಿದ್ದೆ, ಅದಕ್ಕೆ ಉತ್ತರವಾಗಿ ನಾಲ್ಕೂವರೆ ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ಹೇಳಿದರು. ತಮ್ಮ ಸೌಜನ್ಯತೆ ಸುಸಂಸ್ಕೃತಿ, ವಿದ್ವತ್ತು ಇವೆಲ್ಲವನ್ನು ನಾನು ಅಭಿನಂದಿಸುತ್ತೇನೆ. ಅದಕ್ಕೊಂದು ಪ್ರಶ್ನೆಯನ್ನು ಬಾಲಂಗೋಚಿಯಾಗಿ ನನಗೆ ಕೇಳಿದ್ದಾರೆ. ನಿಮ್ಮ ಕ್ಷೇತ್ರದಲ್ಲಿ ಏನು ಮಾಡಿದ್ದೀರಿ ಎಂದು. ನಾನು ಇದಕ್ಕೊಂದು ಉತ್ತರ ಬರೆದು ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ, ಅವರು ಆ ಸಂದರ್ಭದಲ್ಲಿ ಅಮೇರಿಕಾದ ಪ್ರವಾಸಕ್ಕೆ ಕೈಗಾರಿಕೋದ್ಯಮಗಳ ಅನ್ವೇಷಣೆಯ ಸಲುವಾಗಿ ಹೋಗಿದ್ದರು. ಆ ಸಂದರ್ಭದಲ್ಲಿ ನಾನು ಹೇಳಿದ್ದೆ, ನಾನು ಮುಖ್ಯಮಂತ್ರಿಗಳಿಗೆ ಬಹಳ ಹತ್ತಿರದಲ್ಲಿಲ್ಲ, ಕನಕಪುರ ಕ್ಷೇತ್ರದಲ್ಲಿ ಬರಗಾಲವಿತ್ತು ನನಗೆ ಬಿಡುಗಡೆಯಾಗಿದ್ದು, ಅದೂ ಎಸ್.ವಿ. ರಂಗನಾಥ್‌ರವರಿಗೆ ನೂರೈವತ್ತು ಫೋನ್ ಮಾಡಿದ ಮೇಲೆ, ಅದ್ಯಾರೋ ರೆವಿನ್ಯೂ ಸೆಕ್ರೆಟರಿಯಂತೆ ನಾಚಿಕೆಯಾಗಬೇಕು ಕನಕಪುರದಲ್ಲಿ ಬರಗಾಲವಿದೆ ಹತ್ತು ಬೋರ್‌ವೆಲ್ ಹಾಕಬೇಕೆಂದು ಹೇಳಿದರೆ, like a beggar, I have to go before him. What is this? what the government doing? ಏನು ಸರ್ಕಾರ ಮಾಡುತ್ತಿರತಕ್ಕದ್ದು? ಅಧಿಕಾರಿಗಳ ಮೇಲೆ ಸಂಪೂರ್ಣವಾದ ಆಡಳಿತ, ತಮಗೆ ಅದರ ಮೇಲೆ ಹಿಡತವೇ ಹೊರಟುಹೋಗಿದೆ. ಹತ್ತು ಬೋರ್‌ವೆಲ್ ಹಾಕಿಸುವ ಯೋಗ್ಯತೆ ನನಗೆ ಬರಿಲ್ಲ ದೇಶಪಾಂಡೆಯವರೇ ಕಣ್ಣಲ್ಲಿ ನೀರು ಬರುವುದಿಲ್ಲ ರಕ್ತ ಬರುತ್ತದೆ. ತಮ್ಮ ಕ್ಷೇತ್ರಕ್ಕೆ ತಾವು ಪ್ರಭಾವಿಗಳು ಐದೂವರೆ ಕೋಟಿ ರೂ ಬಿಡುಗಡೆ ಮಾಡಿದ್ದೀರಿ. ನಾನು ಹೋಗಿ ಇವತ್ತು ಮುಖ್ಯಮಂತ್ರಿಯವರಿಗೆ ಹಾಗೂ ಖರ್ಗೆ ಸಾಹೇಬರಿಗೆ ಅಭಿನಂದನೆಗಳನ್ನು ಸಲ್ಲಿಸಿದೆ. ಕಾರಣವೇನೆಂದರೆ, ನಾನು ಶಾಸಕನಾಗಿ ಎರಡೂವರೆ ವರ್ಷಗಳಾದ ಮೇಲೆ ಅವರಿಗೆ ಮೂರು ಪತ್ರಗಳನ್ನು ಬರೆದಿದ್ದೆ, ಒಂದೂವರೆ ವರ್ಷದ ನಂತರ ಒಂದಕ್ಕೆ ಉತ್ತರ ಬಂತು. ಇದು ಹೈಟೆಕ್ ಸರ್ಕಾರದ ಉತ್ತರ. ಒಂದೂವರೆ ವರ್ಷದ ನಂತರ ಬಂದಿರುವ ಉತ್ತರವನ್ನು ತೋರಿಸುತ್ತೇನೆ. ನಾನು ಏಕೆ ಮುಖ್ಯಮಂತ್ರಿಯವರಿಗೆ ಥ್ಯಾಂಕ್ಸ್ ಕೇಳುವುದಕ್ಕೆ ಹೋಗಿದ್ದೆ ಎಂದರೆ, ನಮ್ಮಲ್ಲಿ ಜನರು ಕಷ್ಟದಲ್ಲಿದ್ದಾರೆ ಏನೋ 25 ಲಕ್ಷ ರೂ. ಬಿಡುಗಡೆ ಮಾಡಿ ಎಂದು ಕೇಳಿಕೊಂಡಾಗ 25 ಲಕ್ಷ ರೂ ಬಿಡುಗಡೆ ಮಾಡಿದರು, ಫೈನಾನ್ಸ್ ಸೆಕ್ರೆಟರಿಯವರು ಅದನ್ನು ತುರ್ತಾಗಿ ರಿಲೀಸ್ ಮಾಡಿಬಿಟ್ಟರು, ಅದಕ್ಕೆ ಥ್ಯಾಂಕ್ಸ್ ಕೇಳಬೇಕಲ್ಲವೆ? ಆದ್ದರಿಂದ ಹೋಗಿ ಥ್ಯಾಂಕ್ಸ್ ಹೇಳಿಬಂದೆ, ಇಷ್ಟೇ ನಾನು ಮಾಡಿಸಿಕೊಂಡಿರತಕ್ಕ ಕೆಲಸ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬರಗಾಲದಲ್ಲಿ ಬಾಯಿ ಇದ್ದವನು ಬದುಕಿನ ಅಂದ ಹಾಗೆ ದೇಶಪಾಂಡೆಯವರು ಬದುಕಿದರು, ನೀವು ಬದುಕಿದಿರಿ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಈ ಸರ್ಕಾರ ಕಳೆದ ವರ್ಷ ಬರಗಾಲದ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಸನ್ಮಾನ್ಯ ಶ್ರೀಕಂಠಯ್ಯನವರು ಸ್ವಲ್ಪ ಹಣ ಬಿಡುಗಡೆ ಮಾಡಿದ್ದರಿಂದ ಕೆಲಸ ಪ್ರಾರಂಭವಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಸಿಂಧ್ಯಾರವರು ಒಂದು ನಿಮಿಷ ಯೀಲ್ಡ್ ಆಗಬೇಕೆಂದು ಕೇಳಿಕೊಳ್ಳುತ್ತೇನೆ.

Sri P.G.R. Sindhiya: You have worked as Leader of the Opposition I never expected your intervention please corperate.

ಶ್ರೀ ಆರ್. ವಿ. ದೇಶಪಾಂಡೆ: ನಾನು ನಿಮಗೆ ಸಹಾಯ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನನಗೆ ಇವರು ಸಹಾಯ ಮಾಡುತ್ತಿಲ್ಲ. ಇವರಿಗೆ ನಾನು ಸಹಾಯ ಮಾಡಿದ್ದೇನೆ. ಲೀಡರ್ ಆಗಿದ್ದಂಥ ಸಂದರ್ಭದಲ್ಲಿ ಇವರನ್ನು ಹೊತ್ತುಕೊಂಡು ತಿರುಗಾಡಿರತಕ್ಕಂಥದ್ದೇ ಸಾಕು. ಇವರ ಸಹಾಯ ನನಗೆ ಬೇಕಾಗಿಲ್ಲ I don't need his advice.

ಶ್ರೀ ಆರ್.ವಿ. ದೇಶಪಾಂಡೆ: ನಿಮಗೆ ಅಡ್ವೈಸ್ ಮಾಡಬೇಕಾಗಿದೆ.

Sri P.G.R. Sindhiya:I don't need his advice. ಅವರ ಅಡ್ವೈಜ್ ನನಗೆ ಬೇಕಾಗಿಲ್ಲ. ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ, ನಾನು ಮಾತನಾಡುತ್ತಿದ್ದೇನೆ. ಇನ್ನು ಯಾವ ಕಾರಣಕ್ಕೂ ನಾನು ಯೀಲ್ಡ್ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಆರ್. ನೀಲಕಂಠಪ್ಪ: ಯಾರಾದರೊಬ್ಬರು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ನೀಲಕಂಠಪ್ಪನವರು ಮಾತನಾಡುವುದಾದರೆ, ನಾನು ಯೀಲ್ಡ್ ಆಗುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ: ಟೀಕೆ ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ಇದರ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಸರ್ಕಾರ ಖರ್ಚು ಮಾಡಿರತಕ್ಕಂಥದ್ದರ ಬಗ್ಗೆಯೂ ಕೂಡ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಇವತ್ತಿನ ದಿವಸ ಯಾವ್ಯಾವ ಸರ್ಕಾರ ಎಷ್ಟೆಷ್ಟು ಹಣ ಖರ್ಚು ಮಾಡಿದೆ ಎನ್ನತಕ್ಕಂಥದರ ಬಗ್ಗೆ ರೆಕಾರ್ಡ್ಸ್ ಇದೆ. ಅದರ ಪ್ರಕಾರವಾದರೂ ಮಾತನಾಡಿ. ನಾನು ಈಗಾಗಲೇ ಹೇಳಿದಂತೆ, ಟೀಕೆ ಟಿಪ್ಪಣಿ ಮಾಡುವುದಕ್ಕೆ ಅವರಿಗೆ ಹಕ್ಕಿದೆ. ಅದರ ಬಗ್ಗೆ ನಾನು ಮಾತನಾಡುತ್ತಿಲ್ಲ. I have no right It is his right. ಟೀಕೆಮಾಡತಕ್ಕಂಥದ್ದು ಅವರ ಕರ್ತವ್ಯ. ಆದ್ದರಿಂದ ಅವರು ಟೀಕೆ ಮಾಡುತ್ತಿದ್ದಾರೆ. ಆದರೆ, ಪ್ರಶ್ನೆ ಏನೆಂದರೆ, ಕೆಲಸ ಆಗಿರತಕ್ಕಂಥದ್ದಕ್ಕೆ ಮೆಚ್ಚಿಗೆ ವ್ಯಕ್ತಪಡಿಸತಕ್ಕಂಥ ಜವಾಬ್ದಾರಿ ಕೂಡ ಅವರಿಗೆ ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಏನು ಮಾಡಿದ್ದಾರೆ ಎನ್ನತಕ್ಕಂಥದ್ದರ ಬಗ್ಗೆ ನನಗೆ ರಿಪ್ಲೈ ಕೊಡಬೇಕೆಂದು ಅವರೇ ಸ್ವತಃ ಪತ್ರಿಕೆಯಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದರಿಂದ ನಾನು ಅವರಿಗೆ ರಿಪ್ಲೈ ಕಳುಹಿಸಿಕೊಟ್ಟಿದ್ದೇನೆ. ಒಂದು ವೇಳೆ ಅವರು ಕೇಳದೆ ಇದ್ದರೆ ನಾನು ರಿಪ್ಲೈ ಕಳುಹಿಸಿಕೊಡತಕ್ಕಂಥ ಅವಶ್ಯಕತೆ ಇರಲಿಲ್ಲ. ಅಲ್ಲಿ ಕೆಲಸ ಆಗಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಸದನದ ಸಮಿತಿ ಮಾಡಿ. ಸದರಿ ಸಮಿತಿಯನ್ನು ಉತ್ತರ ಕನ್ನಡ ಜಿಲ್ಲೆಗೆ ನಾನು ಕರೆದುಕೊಂಡು ಹೋಗುತ್ತೇನೆ. ಅಲ್ಲಿ ರಸ್ತೆ ಮತ್ತು ಕೆರೆ ಕೆಲಸಗಳು ಹಾಗೂ ಇತರೇ ಕೆಲಸಗಳು ಯಾವ ರೀತಿಯಾದ

ಗುಣಮಟ್ಟದಿಂದ ಕೂಡಿದೆ ಎನ್ನತಕ್ಕಂಥದ್ದನ್ನು ಹಾಗು ಯಾವ ರೀತಿಯಾಗಿ ಮಾನಿಟರಿಂಗ್ ಮಾಡಿದ್ದೇವೆ ಎಂಬುದನ್ನು ಖುದ್ದಾಗಿ ನೋಡಿದ ಮೇಲಾದರೂ ನಾವು ಮಾಡಿರತಕ್ಕಂಥ ಕೆಲಸಕ್ಕೆ ಮೆಚ್ಚಿಗೆ ವ್ಯಕ್ತಪಡಿಸುತ್ತೀರಿ ಎನ್ನತಕ್ಕಂಥದನ್ನು ನಾನು ವಿನಯದಿಂದ ಹೇಳುತ್ತೇನೆ. ಅಲ್ಲಿಗೆ ದೊಡ್ಡ ಪ್ರಮಾಣದಲ್ಲಿ ಸರ್ಕಾರ ಹಣ ಬಿಡುಗಡೆ ಮಾಡಿದೆ. ಹಾಗೆಯೇ ಸಾಕಷ್ಟು ಜನರಿಗೆ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಇದನ್ನೆಲ್ಲಾ ವೀಕ್ಷಣೆ ಮಾಡುವುದಕ್ಕೆ ಮಾನ್ಯ ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ನಾವು ಯಾವ ರೀತಿಯಾಗಿ ಕೆಲಸ ಮಾಡಿದ್ದೇವೆ ಎನ್ನತಕ್ಕಂಥದನ್ನು ನೋಡಿ. ನಾನು ಈಗಾಗಲೇ ಹೇಳಿದಂತೆ ಟೀಕೆ ಮಾಡತಕ್ಕಂಥ ಅಧಿಕಾರ ಇದೆ. ಆದರೆ, ಒಳ್ಳೆಯ ಕೆಲಸ ಮಾಡಿದ್ದಕ್ಕೆ ಮೆಚ್ಚತಕ್ಕಂಥ ಜವಾಬ್ದಾರಿ ತಮಗೆ ಇದೆ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲಾ ಮಂತ್ರಿಗಳು ನಮ್ಮ ಜಿಲ್ಲೆಯ ಕೆಲಸ ಕಾಮಗಾರಿಗಳ ಬಗ್ಗೆ ಸಾಕಷ್ಟು ಶ್ರಮ ವಹಿಸುತ್ತಿದ್ದಾರೆ. ಆದರೆ, ಕೆಲಸ ಕಾಮಗಾರಿಗಳೆಲ್ಲವೂ ಹಳಿಯಾಳ ಕ್ಷೇತ್ರಕ್ಕೆ ಮಾತ್ರ ಆಗುತ್ತಿರುವುದರಿಂದ ನಮಗೆ ಸ್ವಲ್ಪ ಆತಂಕ ಉಂಟಾಗಿದೆ. ಅಷ್ಟೇ ಅಲ್ಲದೆ, ಮಾನ್ಯ ಮಂತ್ರಿಯವರು ಸಾರ್ವಜನಿಕವಾಗಿ ಭಾಷಣ ಮಾಡುವಾಗ ಗುಣಮಟ್ಟದ ಕೆಲಸದ ಬಗ್ಗೆ ನೋ ಕಾಂಪ್ರೋಮೈಜ್ ಎಂದು ಖಡಾಖಂಡಿತವಾಗಿ ಹೇಳುತ್ತಾರೆ. ಆದರೆ, ಇವರು ಹೇಳಿ ಬಂದಮೇಲೆ ಅಲ್ಲಿ ಆಗತಕ್ಕಂಥ ಕೆಲಸ ಮಾತ್ರ ಮತ್ತೆ ಕಳಪೆಯದ್ದೇ ಆಗಿರುತ್ತದೆ. ಇದನ್ನು ಮಾನ್ಯ ಸಚಿವರೂ ಸಹ ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಅವರಿಗೂ ಸಹ ಇದರ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಅಲ್ಲಿ ಆಗಿರತಕ್ಕಂಥ ಕಳಪೆ ಗುಣಮಟ್ಟದ ಕೆಲಸದ ಬಗ್ಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಮಾನ್ಯ ಸಚಿವರಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಯಾವ ರೀತಿಯ ತಾರತಮ್ಯ ಆಗುತ್ತಿದೆ ಎನ್ನತಕ್ಕಂಥದ್ದು ನಮಗೆಲ್ಲಾ ಗೊತ್ತಿದೆ. ಆದರೆ, ಗುಣಮಟ್ಟದ ಕೆಲಸದ ಬಗ್ಗೆ ವಿಶೇಷ ವಾದಂಥ ಗಮನ ಹರಿಸಬೇಕಾಗಿರತಕ್ಕಂಥ ಅಗತ್ಯತೆ ಇದೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪ ಮಾಡಿರುವ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಮಾನ್ಯ ಸಿಂಧ್ಯರವರು ಬರಗಾಲದ ಪರಿಸ್ಥಿತಿ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರಿಗೆ ಕೇಳುವುದೇನೆಂದರೆ, ತಾವು ಶಾಸಕರಾಗಿ ವಿರೋಧ ಪಕ್ಷದಲ್ಲಿದ್ದರೂ ಸಹ ತಾವು ತೆಗೆದುಕೊಂಡು ಬಂದಂಥ ಅಭಿವೃದ್ಧಿ ಕೆಲಸಗಳಿಗೆ ನಾನು ಹಣ ಮಂಜೂರಾತಿ ಮಾಡಿದ್ದೇನೆಯೇ ಅಥವಾ ಇಲ್ಲವೇ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳಬೇಕು. ಬರಗಾಲದ ಸಂದರ್ಭದಲ್ಲಿ ನಿಮ್ಮ ಕ್ಷೇತ್ರಕ್ಕೆ ಬಹಳಷ್ಟು ಕೆಲಸಗಳಿಗೆ ಮಂಜೂರಾತಿ ಮಾಡಿದ್ದೇನೆ. ಆದರೆ, ನಿಮ್ಮಲ್ಲಿ ಅಷ್ಟೊಂದು ಹಣ ಖರ್ಚು ಮಾಡುವುದಕ್ಕೆ ಆಗಿಲ್ಲ. ಆ ಸಂದರ್ಭದಲ್ಲಿ ನೀಡದಂಥ ಅಕ್ಕಿ ಮತ್ತು ಹಣವನ್ನು ವಾಪಸ್ಸು ಮಾಡಿದ್ದೀರಿ. It you want, I will produce records. I will produce the records and the file. ಏಕೆಂದರೆ, ತಾವು ಅನಾವಶ್ಯಕವಾಗಿ ಏನನ್ನು ಹೇಳುವುದಕ್ಕೆ ಹೋಗಬೇಡಿ.Facts are facts.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಅಧಿಕಾರಿಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಅಧಿಕಾರಿಗಳ ಬಗ್ಗೆ ಮೂರು ಸಾರಿ ಸಭೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್‌ನ ಜನ ಪ್ರತಿನಿಧಿಗಳು ನಮ್ಮವರು ಯಾರೂ ಇರಲಿಲ್ಲ. ಅಲ್ಲಿ ಆಡಳಿತ ಪಕ್ಷದವರೇ ಇದ್ದರು. ಹಾಗೆಯೇ, ತಾಲ್ಲೂಕು ಪಂಚಾಯಿತಿಯಲ್ಲಿಯೂ ಕೂಡ ಆಡಳಿತ ಪಕ್ಷದವರೇ ಇದ್ದರು. ಅಧಿಕಾರಿಗಳು ನಿಮ್ಮ ಮಾತನ್ನು ಸಹ ಕೇಳಲಿಲ್ಲ. ಅವರು ಹಣವನ್ನು ವಾಪಸ್ಸು ಕಳುಹಿಸಿದರು. ಆ ಹಣವನ್ನು ಬೇರೆ ಕಡೆಗೆ ಡೈವರ್ಟ್ ಮಾಡಿಕೊಂಡಿದ್ದಾರೆ. ಆದರೆ, ಅಧಿಕಾರಿಗಳು ಸರ್ಕಾರದ ಹಿಡಿತದಲ್ಲಿ ಇಲ್ಲ ಎನ್ನತಕ್ಕಂಥದನ್ನು ನಾನು ಮತ್ತೊಮ್ಮೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಟೀಕೆ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಟೀಕೆ ಮಾಡತಕ್ಕಂಥದನ್ನು ಸಹ ಬಹಳ ಜವಾಬ್ದಾರಿಯಿಂದ ಮಾಡಬೇಕು. ತಾವು ತಮ್ಮ ಕರ್ತವ್ಯವನ್ನು ಮಾಡುತ್ತಿದ್ದೀರಿ. ನೀವೇನು ನಿಮ್ಮ ಮನೆ ಕೆಲಸ ಮಾಡಿ ಎಂದು ಕೇಳಿಲ್ಲ. ನೀವು ನನ್ನ ಹತ್ತಿರ ಬಂದಾಗ ನಾನು ಗೌರವದಿಂದ ಸ್ಪಾಟ್‌ನಲ್ಲಿಯೇ ಕೆಲಸಕ್ಕೆ ಹಣವನ್ನು ಮಂಜೂರು ಮಾಡಿದ್ದೇನೆ. ಹಾಗೆಯೇ ಬರಗಾಲ ಪರಿಸ್ಥಿತಿ ಬಂದಾಗ ಸ್ಪಾಟ್‌ನಲ್ಲಿಯೇ ಹಣವನ್ನು ಬಿಡುಗಡೆ ಮಾಡಿದ್ದೇನೆ. ಹಾಗೆಯೇ ಶಾಲಾ ಕಟ್ಟಡವು ಬಿದ್ದಾಗ, ಮತ್ತೆ ಅದನ್ನು ನಿರ್ಮಾಣ ಮಾಡಲು ಸ್ಪಾಟ್‌ನಲ್ಲಿಯೇ ಹಣ ರಿಲೀಸ್ ಮಾಡಿದ್ದೇನೆ ಯಾವ ಸರ್ಕಾರ ಈ ರೀತಿ ಮಾಡಿದೆ ಎನ್ನತಕ್ಕಂಥದನ್ನು ತಾವೇ ಹೇಳಿ? ನಾವು ಏನೇನು ಮಾಡಿದೇದವೆ ಎನ್ನತಕ್ಕಂಥದನ್ನು ತಾವು ಮೆಚ್ಚಬೇಕು. ನಿಮ್ಮ ತಾಲ್ಲೂಕಿನಲ್ಲಿ ಬರಗಾಲ ಪರಿಸ್ಥಿತಿ ಬಂದಂಥ ಸಂದರ್ಭದಲ್ಲಿ ಹಣ ಮತ್ತು ಅಕ್ಕಿ ಬಿಡುಗಡೆ ಮಾಡಲಾಗಿತ್ತು. ಆದರೆ ಸಾಕಷ್ಟು ದಿನ ಇದನ್ನು ಖರ್ಚು ಮಾಡುತ್ತೇವೆಂದು ಕಾಯಿದೆ, ಅನಂತರ ಸ್ವತಃ ನಾನೇ ರಿವ್ಯೂ ಮಾಡಿದೆ. ಆ ಸಂದರ್ಭದಲ್ಲಿ ಕೆಲಸ ಆಗಿಲ್ಲವೆಂದು ತಾವು ಹೇಳಿದ್ದೀರಿ. ಕೆಲಸ ಆಗಲಿಲ್ಲವೆಂದು ನೀವು ಅಧಿಕಾರಿಗಳು ಹಣವನ್ನು ಸರೆಂಡರ್ ಮಾಡಿದ್ದಾರೆ. ಆ ಸಂದರ್ಭದಲ್ಲಿ, ಕೆಲಸಕ್ಕೆ ಕೂಲಿ ಕಾರ್ಮಿಕರು ಯಾರೂ ಬರಲಿಲ್ಲವೆಂದು ದಾಖಲೆಯಲ್ಲಿ ಇದೆ. Is it not on record? I am prepared to produce the records here. ತಾವು ದಯವಿಟ್ಟು ಬಹಳ ಜವಾಬ್ದಾರಿಯಿಂದ ಟೀಕೆ ಮಾಡಿ. ಟೀಕೆ ಮಾಡುವುದಕ್ಕೆ ನಿಮಗೆ ಹಕ್ಕಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. Please do it with responsibility Records are there.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಹೇಳುವುದನ್ನು ನೋಡಿದರೆ ತಮಗೆ ಹೊಟ್ಟೆ ಉರಿಯುತ್ತದೆ. ತಮಗೂ ಹೊಟ್ಟೆ ಉರಿಯುತ್ತಿರಬಹುದು ಉಪಾಧ್ಯಕ್ಷರೆ ನಮ್ಮ ಜಿಲ್ಲೆಗೆ ದುಡ್ಡೇ ಇಲ್ಲ. ಹಣ ಕೊಡಿ ಎಂದು ಕೇಳಿದರೂ ಹಣ ಕೊಡುತ್ತಿಲ್ಲ. ಆದರೆ, ಮತ್ತೆ ಅವರಿಗೆ ಕೊಡುತ್ತೇವೆಂದು ಹೇಳುತ್ತಾರೆ. ಇದು ಯಾವ ರೀತಿ ಇರಬಹುದು ನೀವೇ ಹೇಳಿ?

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲರು ಮಾನ್ಯ ಶ್ರೀನಿವಾಸಗೌಡರು ಮತ್ತು ನಾನು ಹೇಳುತ್ತಿರತಕ್ಕಂಥದ್ದು ಒಂದೇ ವಿಚಾರವಾಗಿದೆ. ಇದು ವಿಷಯಾಂತರ ಆಗುತ್ತದೆ. ಎಂದೇ ನಾನು ಮಾನ್ಯ ದೇಶಪಾಂಡೆಯವರಿಗೆ ಯೀಲ್ಡ್ ಆಗುವುದಿಲ್ಲವೆಂದು ಹೇಳಿದೆ. ಇದು ಪಾರ್ಲಿಮೆಂಟರಿ ಸಂಸ್ಕೃತಿ ಅಲ್ಲವೆಂದು ತಾವು ತಪ್ಪು ಅರ್ಥ ಕಲ್ಪನೆ

ಮಾಡಿಕೊಳ್ಳುವುದಕ್ಕೆ ದಯವಿಟ್ಟು ಹೋಗಬೇಡಿ. ನೀವು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಇರತಕ್ಕಂಥವರು ಮತ್ತು ಬಹಳ ಸಮರ್ಥರು ಹಾಗೂ ಪ್ರಭಾವಿ ಶಾಲಿಗಳು ಎಂದು ನಾನು ಹೇಳಿದೆಯಷ್ಟೆ. ಇವತ್ತಿನ ದಿವಸ ಉತ್ತರ ಕರ್ನಾಟಕದ ಗದಗ್‌ನ ಹುಲಿ ಇದ್ದಂಥ ಜಾಗದಲ್ಲಿ ಮಳೆ ಇಲ್ಲ, ಬೆಳೆ ಇಲ್ಲ ಮತ್ತು ವಿಮೆಗೆ ದುಡ್ಡು ಇಲ್ಲ. ಇವತ್ತಿನ ದಿವಸ ಮುಂಡರಗಿ ತಾಲ್ಲೂಕಿನ ರೈತರು ಸಾಯುತ್ತಿದ್ದಾರೆ. ಆದರೂ ಸಹ ಅವರಿಗೆ ಸಹಾಯ ಮಾಡಲಿಲ್ಲವೆಂದು ಹೇಳಿದೆ. ಆದರೆ, ಅವರು ಹಣ ಬಿಡುಗಡೆ ಮಾಡಿಸಿಕೊಳ್ಳುವಲ್ಲಿ ಯಶಸ್ವಿ ಆಗಿಲ್ಲ. ನಾನು ಎಂಎಲ್‌ಎ ಆಗಿ ಎರಡೂವರೆ ವರ್ಷವಾಗಿದ್ದು, 25 ಲಕ್ಷ ರೂಪಾಯಿ ಹಣ ಬಿಡುಗಡೆ ಮಾಡಿಸಿಕೊಳ್ಳುವಲ್ಲಿ ಈಗ ನಾನು ಯಶಸ್ವಿಯಾಗಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇಯೇ ಹೊರತು, ತಮ್ಮ ಸಾಮರ್ಥ್ಯದ ಬಗ್ಗೆ ಪ್ರಶಂಸೆ ವ್ಯಕ್ತ ಮಾಡುತ್ತಿದ್ದರೆ ತಾವು ಸಿಟ್ಟು ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಇವರ ಹತ್ತಿರ ಹಣ ಇಲ್ಲ. ಮಾನ್ಯ ಹನುಮೇಗೌಡರಿಗೂ ಸಹ ವಾಸ್ತವ ಅಂಶ ಏನು ಎಂಬುದು ಗೊತ್ತಿದೆ. ಸನ್ಮಾನ್ಯ ಅಧ್ಯಕ್ಷರು ನನ್ನನ್ನು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಅವರ ಛೇಂಬರಿಗೆ ಕರೆಸಿದ್ದರು. ಆ ಸಂದರ್ಭದಲ್ಲಿ ತಾವು ಮಾಡಿರತಕ್ಕಂಥ ಭಾಷಣವನ್ನು ನಾನು ಕೇಳುವುದಕ್ಕೆ ಆಗಲಿಲ್ಲ. ಕಾವೇರಿ ವಿಚಾರದಲ್ಲಿ ತಾವು ಹೇಳಿರತಕ್ಕಂಥದ್ದರಲ್ಲಿ ಸತ್ಯಾಂಶ ಇದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಸನ್ಮಾನ್ಯ ವಾಜಪೇಯಿ ಅವರು ಅಷ್ಟೇ ಅಲ್ಲದೇ ಸನ್ಮಾನ್ಯ ನರಸಿಂಹರಾಯರು ಸಹ ಇದೇ ರೀತಿಯ ಆದೇಶವನ್ನು ಕೊಟ್ಟಿದ್ದರು. ನಮ್ಮ ದುರ್ದೈವ ಇದು ಹಾಗೆಯೇ ಸನ್ಮಾನ್ಯ ವಿ.ಪಿ. ಸಿಂಗ್‌ರವರು ಪ್ರಧಾನಿಯಾಗಿದ್ದಂಥ ಸಂದರ್ಭದಲ್ಲಿ ಟ್ರಿಬ್ಯುನಲ್ ಆಯಿತು. ಒಟ್ಟಿನಲ್ಲಿ ಇದೆಲ್ಲಾ ನಮ್ಮ ದುರ್ದೈವ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದ ಲಾಬಿಯನ್ನು ನಾವು ಅಷ್ಟರ ಮಟ್ಟಿಗೆ ದೆಹಲಿಯಲ್ಲಿ ಇಟ್ಟುಕೊಂಡಿದ್ದೇವೆ. ಎಲ್ಲಾ ಪಕ್ಷದವರಿಗೂ ಈ ಖಾಯಿಲೆ ಅಂಟಿಕೊಂಡಿದೆ. ಇದು ತಮಗೂ ಸಹ ಗೊತ್ತಿದೆ. ಏಕೆಂದರೆ, ನನಗಿಂತ ತಾವು ಅನುಭವಸ್ಥರು. ಸರ್ಕಾರದಲ್ಲಿ ದುಡ್ಡು ಇಲ್ಲದೇ ಇರುವುದರಿಂದ ಟ್ರೆಜರಿ ಕೆಲಸ ಮಾಡುತ್ತಿಲ್ಲ. ಸರ್ಕಾರದಲ್ಲಿ ದುಡ್ಡಿಲ್ಲ. ಸನ್ಮಾನ್ಯ ಉಪಾಧ್ಯಕ್ಷರು 1979ರಲ್ಲಿ ಮಾನ್ಯ ದೇವರಾಜ ಅರಸುರವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಶಾಸಕರಾಗಿ ಬಂದವರು. ಸುಮಾರು 25 ವರ್ಷದ ರಾಜಕೀಯ ಅನುಭವ ತಮಗೆ ಇದೆ. ನಾನು ಈ ಸಂದರ್ಭದಲ್ಲಿ ಏನನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ ಎಂದರೆ, ಹಿಂದೆ ಗುತ್ತಿಗೆದಾರರು ನಮ್ಮ ಮುಂದೆ ಕೈ ಕಟ್ಟಿಕೊಂಡು ಬಂದು ನಿಂತುಕೊಳ್ಳುತ್ತಿದ್ದರು. ಆದರೆ, ಇವತ್ತಿನ ದಿವಸ ಸುಮಾರು 12 ಸಾವಿರ ಗುತ್ತಿಗೆದಾರರು ಕೇವಲ 1200 ಕೋಟಿ ರೂಪಾಯಿ ಬಾಕಿ ಯಾವಾಗ ಕೊಡುತ್ತೀರೆಂದು ಕೇಳುವುದಕ್ಕೆ ನಾಡಿದ್ದು ಬೀದಿಗೆ ಇಳಿದು ಮೆರವಣಿಗೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಸರ್ಕಾರದ ಎರಡೂವರೆ ವರ್ಷಗಳ ಸಾಧನೆಯ ಕೀರ್ತಿಯನ್ನು ದೆಹಲಿಗೆ ಮತ್ತು ವಿಶ್ವಕ್ಕೆ ತಲುಪಿಸುವುದಕ್ಕೆ ಬರುತ್ತಿದ್ದಾರೆ. "ಗಂಡ ಹೆಂಡತಿಯ ಜಗಳದಲ್ಲಿ ಕೂಸು ಬಡವಾಯಿತು" ಎನ್ನುವ ರೀತಿಯಲ್ಲಿ ಕೇಂದ್ರ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ ಮತ್ತು ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಮಾನ್ಯ ಕೌಜಲಗಿಯವರೆ, ಬೆಳೆ ವಿಮೆ ಎನ್ನತಕ್ಕಂಥದ್ದು It is a fraud ಎಂಬುದು ನಮಗೆ ಗೊತ್ತಿದೆ. ಇನ್ನು ವಿಮಾ ಇಲಾಖೆಯವರು ಒಂದಷ್ಟು ಹೊಡೆದುಕೊಳ್ಳುತ್ತಾರೆ. ಹಾಗೆಯೇ, ಕೃಷಿ ಇಲಾಖೆಯ ಕೆಳ ಮಟ್ಟದಲ್ಲಿ ಅದೇ ಕಸಬು ಅವರದ್ದು ಅದನ್ನು ನಿಲ್ಲಿಸಿಬಿಡಿ.

ಡ್ರೈ ಲ್ಯಾಂಡ್ ಪ್ರದೇಶದ ರೈತರಿಗೆ ಏನಾದರೂ ಸಹಾಯ ಮಾಡಬೇಕೆಂದು ತಮಗೆ ಅನ್ನಿಸಿದರೆ, ಪರ್ಮನೆಂಟ್ ಬೇಸೆಸ್ ಮೇಲೆ ಕ್ರಾಪ್ ಪ್ಯಾಟರ್ನ್ ಚೇಂಜ್ ಮಾಡಿ, ಅವರ ಉತ್ಪನ್ನಗಳಿಗೆ ಏನಾದರೊಂದು ವ್ಯಾಲ್ಯೂ ತೆಗೆದುಕೊಂಡು ಒಂದು ವಿಮಾ ಯೋಜನೆಯನ್ನು ಜಾರಿಗೆ ತಂದರೆ ಮಾತ್ರ ಸಾಧ್ಯ ಇಲ್ಲದಿದ್ದರೆ It is just impossible. ಈ ದೃಷ್ಟಿಯಿಂದ ನೀವಿಬ್ಬರು ಸಮರ್ಥರಿದ್ದೀರಿ, ಆದ್ದರಿಂದ ಇದರ ಬಗ್ಗೆ ಪ್ರಯತ್ನ ಮಾಡಿ. ನಿಮಗೇನು ದುಡ್ಡು ಇಲ್ಲದಿದ್ದರೆ ಕೃಷಿ ಇಲಾಖೆಯನ್ನು ಮುಚ್ಚಿಸುವುದು ಒಳ್ಳೆಯದೆಂದು ಅಭಿಪ್ರಾಯವಾಗಿದೆ. ಈಗ ಬಿತ್ತನೆ ಬೀಜಗಳನ್ನು ಒದಗಿಸುವುದಕ್ಕೆ ತತ್‌ಕ್ಷಣ ತಯಾರು ನಡೆಸಬೇಕು. ಸನ್ಮಾನ್ಯ ಅಧ್ಯಕ್ಷರು ಹೇಳಿದ ಹಾಗೆ ನಾವೆಲ್ಲರೂ ಕೂಡ ದೇವರಲ್ಲಿ ಹೇಳಿಕೊಳ್ಳುವುದು ಮಳೆ ಬರಲಿ ಎಂದು ಬರದಿದ್ದರೆ ನಾವು ಕೈ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಇದಕ್ಕೆ ಸರ್ಕಾರ ಸಿದ್ಧತೆ ಮಾಡಿಕೊಂಡಿದೆಯೇ? ಈಗಾಗಲೇ ಜುಲೈ 9ನೇ ತಾರೀಖು ಮಳೆ ಆಗಿದೆ. ಆದರೆ, ಇದುವರೆಗೂ ಬಯಲು ಸೀಮೆಯ ಏಳೆಂಟು ಜಿಲ್ಲೆಯಲ್ಲಿ ಮತ್ತು ಉತ್ತರ ಕರ್ನಾಟಕ ಐದಾರು ಜಿಲ್ಲೆಯಲ್ಲಿ ಮಳೆ ಆಗದೇ ಇರುವುದರಿಂದ ಇನ್ನು ಯಾವ ಬೆಳೆಯನ್ನು ಹಾಕುವುದಕ್ಕೆ ಆಗಿಲ್ಲ. ಮುಂಗಾರು ಮಳೆ ಇಲ್ಲದೇ ಇರುವುದರಿಂದ ಬಿತ್ತನೆ ಮಾಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿಗೆ ನಾವು ಹೋಗಿದ್ದೇವೆ. ಇದರ ತೀವ್ರತೆಯನ್ನು ಸರ್ಕಾರ ಮನಗಂಡಿದೆಯೇ ಎನ್ನತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ.

ಇದರ ತೀವ್ರತೆ ನಿಮಗೆ ಇಲ್ಲ, ಒಂದು ಕಡೆ ಜನರಲ್ ಟ್ರಾನ್ಸ್‌ಫರ್, ಲಿಸ್ಟ್ ಎಲ್ಲಾ ಆಯಿತು ಕಾರ್ಯದರ್ಶಿಗಳ ಬದಲಾವಣೆ ಆಯಿತು, ಇದೆಲ್ಲವೂ ಆದ ನಂತರ ಮಂತ್ರಿಗಳ ಬದಲಾವಣೆಯಾಯಿತು. ಇದರ ಕಡೆಗೆ ನಿಮ್ಮ ಗಮನ ಹೋಗಿದೆಯೇ ಹೊರತು, ನಿಮ್ಮ ಗಮನವು ರೈತರ ಕಡೆಗೆ ಹೋಗಲಿಲ್ಲವಲ್ಲಾ ಎಂಬ ದುಃಖ ಇವತ್ತು ನಮಗೆ ಇದೆ. ಬರಗಾಲದ ಪರಿಸ್ಥಿತಿಯಲ್ಲಿ ಜನರು ಕುಡಿಯುವ ನೀರಿಗಾಗಿ ಒದ್ದಾಡುತ್ತಿರುವಂತಹ ಪರಿಸ್ಥಿತಿಯಲ್ಲಿ ನೀವು ಕ್ಯಾಬಿನೆಟ್ ಎಕ್ಸಪ್ಯಾನ್‌ಷನ್ ಮಾಡಿಕೊಂಡು ಪೋರ್ಟ್ ಪೋಲಿಯೋಗಳನ್ನು ಹಂಚಿಕೊಳ್ಳುವುದರಲ್ಲಿ, ಅದೂ ಸಾಲುವುದಿಲ್ಲವೆಂದುಕೊಂಡು ನೀವು ಈ ರೀತಿಯಾಗಿ ಮಾಡಿಕೊಂಡು ಕುಳಿತುಕೊಂಡರೆ ಸರ್ಕಾರದ ಪರಿಸ್ಥಿತಿ ಮತ್ತು ಜನಗಳ ಪರಿಸ್ಥಿತಿ ಏನಿದೆ ಎಂಬುದನ್ನು ಮುಂದುಗಡೆ ಸಾಲಿನಲ್ಲಿ ಕುಳಿತುಕೊಂಡಿರತಕ್ಕ ಮಾನ್ಯ ನಾಯಕರುಗಳು ಇದರ ಬಗ್ಗೆ ಯೋಚನೆಯನ್ನು ಮಾಡುವುದು ಬಹಳ ಒಳ್ಳೆಯದೆಂಬುದು ನನ್ನ ಅಭಿಪ್ರಾಯವಾಗಿದೆ, ಇದು ಮೊದಲನೆಯದು. ಇನ್ನು ಎರಡನೆಯದಾಗಿ ಹೇಳುವುದಾದರೆ, ಮಾನ್ಯ ಕೃಷಿ ಸಚಿವರಿಗೆ ನನ್ನದೊಂದು ಸಲಹೆ, ತಾವು ದಯಮಾಡಿ ಶಾರ್ಟ್‌ಟರ್ಮ್ ಕ್ರಾಫ್ಸ್ ಯಾವುದು ಸಾಧ್ಯವಾಗುತ್ತದೆ ಅದರ ಬಗ್ಗೆ ತುರ್ತಾಗಿ ಯೋಚನೆ ಮಾಡಿಸಿ. ಅದಕ್ಕೆ ಬೇಕಾಗಿರತಕ್ಕಂತಹ ಬೀಜಗಳನ್ನು ಗೊಬ್ಬರಗಳನ್ನು ಗುಣಮಟ್ಟದಲ್ಲಿ ಕೊಡುವುದಕ್ಕೆ ತುರ್ತಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಯೋಚನೆ ಮಾಡಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ. ಇನ್ನು 'ಮೇವುಗಳ ಬ್ಯಾಂಕ್‌ಗಳ' ಬಗ್ಗೆ ಹೇಳುರುದಾದರೆ, ಕಳೆದ ಸಾರಿಯು ಮಳೆಯಾಗದೆ ಮೇವುಗಳಿಗೆ ಬಹಳ ತೊಂದರೆಯಿದೆ, ಈ ವರ್ಷ ಮೇವುಗಳಿಗೆ ಬಹಳ ತೊಂದರೆಯಾಗುತ್ತದೆ. ಆ ಮೇವುಗಳ ಬ್ಯಾಂಕುಗಳನ್ನು ಮಾಡುವುದಕ್ಕೆ ನಾವು ನಮ್ಮ ಸರ್ಕಾರವು ಅಧಿಕಾರದಲ್ಲಿದ್ದಾಗ ಮಾಡಿದ್ದೇವೆ. ನಮ್ಮ ಸಾರ್ಕರವು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಒಂದಲ್ಲ ಈ ತರಹ

ಮೂರು ಸಲ ಬರಗಾಲವು ಬಂದಿತ್ತು. ಇದರ ಬಗ್ಗೆ ರೆವಿನ್ಯೂ ಇಲಾಖೆಯಲ್ಲಿ ರೇಕಾರ್ಡ್ಸ್‌ಗಳು ಇರುತ್ತದೆ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಸರಿಯಾಗಿ ಕೆಲಸವನ್ನು ಮಾಡಿದರೆ ರೆಕಾರ್ಡ್ಸ್‌ನ್ನು ತೆಗೆದು ನೋಡಿದರೆ ಇದರ ಬಗ್ಗೆ ಗೊತ್ತಾಗುತ್ತದೆ ಇದರ ಬಗ್ಗೆ ರೆಕಾರ್ಡ್ ತೆಗೆಸಿ ನೋಡಿ ಎಂದು ಹೇಳುವುದಕ್ಕೆ ಮಾನ್ಯ ರೆವಿನ್ಯೂ ಮಂತ್ರಿಗಳು ಸದನದಲ್ಲಿ ಇಲ್ಲವೇ ಇಲ್ಲ. ಅದರ ಬಗ್ಗೆ ಕುಳಿತುಕೊಂಡು ನೋಡಿದರೆ ಅದು ಸಾಧ್ಯವಾಗುತ್ತದೆ, ಆ ಬ್ಯಾಂಕುಗಳನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡಿ ಎಂದು ನಾನು ಇನ್ನೊಂದು ಸಲಹೆಯನ್ನು ಕೊಡುತ್ತೇನೆ. ಪಿಎಲ್‌ಡಿ ಬ್ಯಾಂಕ್, ಸೊಸೈಟಿಗಳು, ಡಿಸಿಸಿ ಬ್ಯಾಂಕುಗಳು 5 ಲಕ್ಷ ಮತ್ತು 10 ಲಕ್ಷ ರೂ ಟ್ರಾಕ್ಟರುಗಳು ಮತ್ತು ದುಡ್ಡಿರುವವರ ಹತ್ತಿರ ಬಡ್ಡಿಯ ವಸೂಲಾತಿಯನ್ನು ಮಾಡಿಕೊಂಡರೆ ನಮ್ಮದೇನೂ ತಕರಾರು ಇಲ್ಲ. ಆದರೆ ಇವತ್ತು ರೈತರು ಬಹಳ ಸಂಕಷ್ಟದಲ್ಲಿದ್ದಾರೆ, ಅವರಿಂದ ಬಡ್ಡಿ ವಸೂಲಾಯಿತನ್ನು ಸಂಪೂರ್ಣವಾಗಿ ರದ್ದು ಮಾಡಬೇಕು. ನೀವು ವಿದ್ಯುತ್‌ನ್ನು ಸಹ ಕೊಡುವುದಿಲ್ಲ, ಕುಡಿಯುವುದಕ್ಕೆ ನೀರೂ ಸಹ ಕೊಡುವುದಿಲ್ಲ, ವಸೂಲಾತಿಯನ್ನು ಮಾಡುವುದಕ್ಕೆ ಹೋದರೆ ಬಹುಶಃ ಆಡಳಿತ ಪಕ್ಷದ ಶಾಸಕರುಗಳು ಅಷ್ಟೇ ಅಲ್ಲ, ವಿರೋಧಪಕ್ಷದವರು ಸಹ ಜನಗಳನ್ನು ಎದುರಿಸತಕ್ಕಂತಹದ್ದು ಬಹಳ ಕಷ್ಟವಾಗುತ್ತದೆ. ಈ ವಿಚಾರವನ್ನು ಸರ್ಕಾರವು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಎಚ್ಚರಿಕೆಯ ಮಾತನ್ನು ಹೇಳುತ್ತೇನೆ. ವಿದ್ಯುತ್ ಸರಬರಾಜಿನ ವಿಚಾರದಲ್ಲಿ ಮಾನ್ಯ ಉಪಾಧ್ಯಕ್ಷರೆ, ಮಳೆ ಬರುವ ಹಾಗೆ ನಾವು ಮಾಡುವುದಕ್ಕೆ ಆಗುವುದಿಲ್ಲ, ನೀವು ಮಾಡುವುದಕ್ಕೆ ಆಗುವುದಿಲ್ಲ. ಶರಾವತಿ ಜಲಾಶಯಕ್ಕೆ ದುರ್ದೈವದಿಂದ ನೀರು ಬರುತ್ತಿಲ್ಲ, ವರಾಹಿಯಲ್ಲೂ ಸಹ ನೀರು ಬರುತ್ತಿಲ್ಲ. ಇದರಿಂದಾಗಿ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ನಾವು ಅರ್ಥಮಾಡಿಕೊಂಡಿದ್ದೇವೆ, ಹಾಗಾದರೆ ಕೊನೆಯ ಪಕ್ಷ ಜನಗಳನ್ನಾದರೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ನಾವು ಹೇಳಬೇಕಲ್ಲಾ. ಅದರ ಬಗ್ಗೆ ತಾವು ಜನಗಳಿಗೆ ಹೇಳಬೇಕು, ಅದರ ಬಗ್ಗೆ ತಾವು ಜನಗಳಿಗೆ ಹೇಳಿದರೆ, ಜನರು ಸ್ವಲ್ಪವಾದರೂ ತಾಳ್ಮೆಯಿಂದ ಕೇಳುತ್ತಾರೆ. 2 ಗಂಟೆ 3 ಗಂಟೆ ವಿದ್ಯುತ್ ಬರುವುದಿಲ್ಲ; ಪರಿಸ್ಥಿತಿ ಮತ್ತೆ ಎಂಭತ್ತರ ಸ್ಥಿತಿಗೆ ಹೊರಟುಹೋಗಿದೆ. 1980ನೇ ಇಸವಿಯಲ್ಲಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು ಹಗ್ಗವನ್ನು ಎತ್ತಿಕೊಂಡು ಬಾವಿಗಳಿಗೆ ಹೋಗಿ ನೀರನ್ನು ತೆಗೆದುಕೊಂಡು ಬಂದು, ಕುಂಟೆಗಳಿಗೆ ಹೋಗಿ ನೀರನ್ನು ತೆಗೆದುಕೊಂಡು ಬಂದು, ಕೆರೆಗಳಿಗೆ ಹೋಗಿ ನೀರನ್ನು ತೆಗೆದುಕೊಂಡು ಬರುವಂತಹ ಪರಿಸ್ಥಿತಿ ಇತ್ತು. ಈಗ ಸಾವಿರ ಮೀಟರ್ ಹೋದರೂ ಸಹಿತ ನೀರು ಸಿಗುತ್ತಿಲ್ಲ, ಸಾವಿರ ಅಡಿ ಆಳ ಬಾವಿ ತೋಡಿದರೂ ಸಹ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ನೀವು ಜಲಸಂವರ್ಧನೆ ಮಾಡುತ್ತೇವೆಂದು ಹೇಳಿದಿರಿ, ನಿಮ್ಮ ಅಧಿಕಾರದ ಅವಧಿಯು ಮುಗಿಯುತ್ತಾ ಬಂದಿದೆ, ಅದೇನೂ ಸಂವರ್ಧನೆಯನ್ನು ಮಾಡಿಕೊಂಡಿದ್ದೀರೋ ಅದು ದೇವರಿಗೆ ಗೊತ್ತಾಗಬೇಕು. ಇದರ ಬಗ್ಗೆ ನಮಗಂತೂ ಸಹ ಅರ್ಥವಾಗುತ್ತಿಲ್ಲ, ಏನೇನೋ ದೊಡ್ಡದಾಗಿ ವಿಧಾನಸೌಧದ ಮುಂದೆ ಲಾರಿಗಳಲ್ಲಿ ಕಾರ್ಯಕರ್ತರನ್ನು ಕರೆದುಕೊಂಡು ಬಂದು ನೀರಿನ ಸೊಸೈಟಿಗಳನ್ನು ಹಾಲಿನ ಸೊಸೈಟಿಗಳನ್ನಾಗಿ ಮಾಡಿದ ಹಾಗೆ ಮಾಡಿಬಿಟ್ಟರು. ಆ ಹಣವು ಎಲ್ಲಿಗೆ ಹೋಯಿತು, ಅದು ಯಾವುದು ವರ್ಲ್ಡ್ ಬ್ಯಾಂಕೋ, ಅದೆಷ್ಟು ಹಣ ಬಂತೋ, ಅದರ ಬಗ್ಗೆ ಅಂಕಿಅಂಶಗಳನ್ನು ಕೇಳಿದರೆ ನಿಮಗೆ ಬಹಳ ಸಿಟ್ಟು ಬರುತ್ತದೆ. ಅದನ್ನು ನಾವು ಕೇಳೋಣ ಅದನ್ನು ಬಿಡುವುದಕ್ಕೆ ಆಗುವುದಿಲ್ಲ. ನಮಗೆ ಕೇಳುವ ಕಾಲ ಬಂದಿದೆ, ಅದನ್ನು ನಾವು ಕೇಳುತ್ತೇವೆ. ಮುಖ್ಯವಾಗಿ, ಕೃಷಿ ಇಲಾಖೆಯವರು ಇದರ ಕಡೆಗೆ ಗಮನವನ್ನು ಕೊಡಬೇಕು, ಈ ಬೆಳೆ ವಿಮಾ ಯೋಜನೆ ಇದೆ, 85 ಕೋಟಿ ರೂಪಾಯಿಗಳನ್ನು

ಬಿಡುಗಡೆ ಮಾಡತಕ್ಕಂತಹ ಹಣ ಏನಿದೆ ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ. ನಿಮ್ಮ ಸರ್ಕಾರವಿದ್ದಾಗ ನೀವು ಬಹಳ ರೆಕಾರ್ಡ್ಸ್‌ನ್ನು ಮಾಡಿದ್ದೀರಿ ಎಂದು ಮಾನ್ಯ ದೇಶಪಾಂಡೆಯವರು ಅನೇಕ ಕಡೆಗಳಲ್ಲಿ ಭಾಷಣವನ್ನು ಮಾಡಿದ್ದಾರೆ. ನಮ್ಮ ಚಂದ್ರೇಗೌಡರೂ ಸಹ ಭಾಷಣವನ್ನು ಮಾಡಿದ್ದಾರೆ, ಕಲ್ಕತ್ತಾದ ಫಿಯರ್‌ಲೆಸ್ ಕಂಪನಿಯಿಂದ ಕೆಂಬಿಯವರ ಹೆಸರಿನಲ್ಲಿ ಹಣ ತೆಗೆದುಕೊಂಡು ಬಂದು ಬೇರೆಯವರಿಗೆ ಸಂಬಳವನ್ನು ಕೊಟ್ಟುಬಿಟ್ಟರೆಂದು ಭಾಷಣ ಮಾಡಿರುವುದು ನಿಮಗೆ ಜ್ಞಾಪನ ಇರಬೇಕು. ನೀವು ಸಾಲವನ್ನು ಮಾಡುವುದರಲ್ಲಿ ಶೂರರರಾಗಿದ್ದೀರಿ, ಅದರ ಬಗ್ಗೆ ಸಂಶಯವೇನೂ ಇಲ್ಲ. ಸಾಲವನ್ನಾದರೂ ಮಾಡಿ ಪಾಪ, ರೈತರಿಗೆ ಕ್ರಾಪ್ ಇನ್ಸೂರೆನ್ಸ್ ಹಣವನ್ನು ಕೊಡುವ ಕೃಪೆಯನ್ನಾದರೂ ಮಾಡಿಸ ಬೇಕು. ಅದಕ್ಕಾಗಿ ಟ್ರಜರಿ ಬ್ಯಾನ್ ಇದ್ದರೂ ಸಹ, ವಿಶೇಷವಾಗಿ ನೀವು ಟ್ರಜರಿ ಬ್ಯಾನ್‌ನ್ನು ತೆಗೆಯುವುದಕ್ಕೆ ಆಗುವುದಿಲ್ಲ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ನಿಮಗೆ ಏನೂ ಕಿಮ್ಮತ್ತು ಕೊಡುವುದಿಲ್ಲ. ಅದರಿಂದಾಗಿ ಬೆಳೆ ವಿಮಾ ಹಣವನ್ನು ತಕ್ಷಣ ರಿಲೀಸ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ನಾನು ರಚನಾತ್ಮಕವಾಗಿ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ, ನಮ್ಮ ಶ್ರೀಮಾನ್ ಬಿ. ಸೋಮಶೇಖರ್‌ರವರು ರೆವಿನ್ಯೂ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಒಂದು ಸಲಹೆಯನ್ನು ಇಟ್ಟಿದ್ದರು. ಬರಗಾಲದ ಆವರ್ತನಿಧಿಯನ್ನು ಮಾಡಲಿಕ್ಕೆ ರಾಜ್ಯದಲ್ಲಿ ಸಾಧ್ಯವಿದೆ, ಏಕೆಂದರೆ, ರಾಜಾಸ್ಥಾನದಿಂದ ಕರ್ನಾಟಕದವರೆಗೂ ಸಹ ಈ ಬರಗಾಲದ ಛಾಯೆಗಳು ಆಗಾಗ್ಗೆ ಬರುತ್ತಿರತಕ್ಕಂತಹದ್ದು ಏನಿದೆ ಇದು ಭೌಗೋಳಿಕವಾಗಿ, ವೈಜ್ಞಾನಿಕವಾಗಿ, ಭೂವಿಜ್ಞಾನಿಗಳು ಹೇಳಿರತಕ್ಕಂತಹ ವಿಚಾರವಾಗಿದೆ, ಅದನ್ನು ಮಾಡುವುದಕ್ಕೆ ಒಂದು ಆವರ್ತನಿಧಿಯನ್ನು ಸೃಷ್ಟಿ ಮಾಡುವುದಕ್ಕೆ ಶಾಶ್ವತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಶಾಶ್ವತವಾದ ನಿಧಿಯನ್ನು ಮಾಡಿದರೆ ಅನುಕೂಲವಾಗುತ್ತದೆ. ಈ ಪ್ರೇದಶಗಳನ್ನು ಗುರುತು ಮಾಡಿ ಅಲ್ಲಿ ಇವೆಲ್ಲವು ಆಗಬೇಕು. ನನಗೆ ಕಾರ್ಮಿಕ ಮಂತ್ರಿಗಳು ಯಾರು ಎಂಬುದು ಗೊತ್ತಿಲ್ಲ, ನಮ್ಮ ಪಾರ್ಟಿಯ ಅಧ್ಯಕ್ಷರಾದ ಶ್ರೀ ಬೈರೇಗೌಡರು, ನಮ್ಮ ಸೆಕ್ರೆಟರಿಯವರನ್ನು ನಾವು ಕೇಳಿದೆವು. ಈ ಮಂತ್ರಿಗಳು ಯಾರ್ಯಾರು, ಅವರಿಗೆ ಯಾವಯಾವ ಇಲಾಖೆಗಳಿವೆ, ಅದರ ಪಟ್ಟಿ ಏನೂ ಎಂಬುದನ್ನು ದಯವಿಟ್ಟು ನಮಗೆ ಕೊಡಿ ಎಂದು ಕೇಳಿದೆ. ನಮ್ಮ ದುರ್‌ದೈವಕ್ಕೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೂ ಹಾಗೂ ಮಾನ್ಯ ಹೆಚ್.ಕೆ. ಪಾಟೀಲ್‌ರೂ ಸಹ ಇಲ್ಲ. ಏನು ನಮ್ಮ ಕಾಲದಲ್ಲಿ ನಮಗೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲರು 44 ಜನ ಸಚಿವರನ್ನು ಕೊಟ್ಟಂತಹ ಪುಣ್ಯಾತ್ಮರು ಸ್ವರ್ಗದಲ್ಲಿದ್ದಾರೆ. ಮಾನ್ಯ ಜೆ.ಹೆಚ್. ಪಟೇಲರು ಮಾಡಿದ್ದಕ್ಕೆ ಬಾಯಿಗೆ ಬಂದಂತೆ ಮಾತನಾಡಿಬಿಟ್ಟರು. ಈಗ 48 ಜನ ಸಚಿವರಾದರೂ ಯಾರೂ ಕೇಳುವ ಹಾಗೆ ಇಲ್ಲ, ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು 74 ಜನ ಸಚಿವರಾಗುತ್ತಾರೆಂದು ಹೇಳಿದರು. ಅದು 100 ಜನರಿಗೆ ಹೋಗುತ್ತದೆಂದು ಇನ್ನೊಬ್ಬರು ಹೇಳಿದ್ದಾರೆ. ಮತ್ತೆ ಇನ್ನೊಂದು ಸಾರಿ ಎಕ್ಸ್‌ಪ್ಯಾನ್‌ಷನ್ ಆಗುತ್ತದೆಂದು ಹೇಳಿದ್ದಾರೆ, ಕೆಲವರೆಲ್ಲರೂ ನಡೆಸಿದ್ದಾರೆ. ಐ. ವಿಶ್ ದೆಮ್ ಆಲ್ ದಿ ಬೆಸ್ಟ್. ಅದೇನೂ ತೊಂದರೆ ಎಂದು ನಾನು ಹೇಳುವುದಿಲ್ಲ. ನಾನು ಹೇಳುವುದೆಂದರೆ,

ಶ್ರೀ ಬಿ.ಆರ್. ನೀಲಕಂಠಪ್ಪ: ಮಾನ್ಯ ಸಿಂಧ್ಯಾರವರೆ, ತಾವು ಈ ಕಡೆ ಬನ್ನಿ ನಿಮ್ಮನ್ನು ಸಹ ನಾವು ಸೇರಿಸಿಕೊಳ್ಳುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ಮಾನ್ಯ ನೀಲಕಂಠಪ್ಪನವರೆ, ಆಯಿತು, ನಾವು ನೀವು ಏತಕ್ಕಾಗಿ ಜಗಳ ಆಡಿಕೊಳ್ಳುವುದು, ನೀವು ನಮ್ಮವರು, ನಾವು ಅಲ್ಲಿಗೆ ಕಳುಹಿಸಿದ್ದೇವೆ, ತಾವು ವಾಪಸ್ಸು ಇಲ್ಲಿಗೆ ಬರುತ್ತೀರಿ, ಅದರ ಬಗ್ಗೆ ಏತಕ್ಕಾಗಿ ಚಿಂತನೆಯನ್ನು ಮಾಡುವುದು? ನೀವು ಹೋಗಿ ಬರುವವು ನೀವೆಲ್ಲಾ ಏತಕ್ಕಾಗಿ ಚಿಂತನೆಯನ್ನು ಮಾಡುತ್ತೀರಾ? ನೀವೆಲ್ಲರೂ ಬರುವವರೆ ಅದು ನಮಗೆ ಗೊತ್ತಿಲ್ಲವೇ? ಯಾರು ಬರುವುದಿಲ್ಲ, ಯಾರು ಹೋಗುತ್ತಾರೆಂಬುದು ನಮಗೆ ಗೊತ್ತಿದೆ. ಅದು ನಾನು ತಪ್ಪು ಎಂದು ಹೇಳುವುದಿಲ್ಲ. ನಾನು ನಿಮ್ಮ ವಿಚಾರದಲ್ಲಿ ತಪ್ಪೆಂದು ಹೇಳುವುದಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ: ಮಾನ್ಯ ಸಿಂಧ್ಯಾರವರು ಎಲ್ಲಾ ಪಾರ್ಟಿಗಳಿಗೂ ಅಡ್ಡಾಡಿದವರು ಯೋಚನೆಯಾಗುತ್ತದೆ. ಹಿಂದೆ ಶ್ರೀ ಶರದ್‌ಪವಾರ್‌ರವರ ಕಾಲದಲ್ಲಿ ಮಾತನಾಡಿರುವುದು ನಮಗೆ ಗೊತ್ತಿದೆ. ಯಾರು ಯಾವಾಗ ಎಲ್ಲೆಲ್ಲಿಗೆ ಹೋಗುತ್ತಾರೆಂಬುದು ಅವರಿಗೂ ಗೊತ್ತು ನಮಗೂ ಸಹ ಗೊತ್ತಿದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ: ನಾನು ಮಾನ್ಯ ನೀಲಕಂಠಪ್ಪನವರ ವಿಚಾರದಲ್ಲಿ ಹೇಳುವುದಿಲ್ಲ, ನಮ್ಮ ಬಾಗಿಲು ನಿಮಗೆ ಯಾವಾಗಲೂ ತೆರೆದಿರುತ್ತದೆ. ನೀವು ಅದರ ಬಗ್ಗೆ ಚಿಂತನೆ ಮಾಡಬೇಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ: ಮಾನ್ಯ ಉಪ ಅಧ್ಯಕ್ಷರೆ, ಬರಗಾಲ ಬಂದರೂ ಎಂಥೆಂಥವರೋ ಮಂತ್ರಿಗಳಾದರೂ ಮಾನ್ಯ ನೀಲಕಂಠಪ್ಪನವರು ಏತಕ್ಕಾಗಿ ಮಂತ್ರಿಗಳಾಗಲಿಲ್ಲ?

ಶ್ರೀ ಪಿ.ಜಿ. ಆರ್. ಸಿಂಧ್ಯ: ಕಾರ್ಮಿಕ ಮಂತ್ರಿಗಳ್ಯಾರು ಎಂಬುದು ನನಗೆ ಗೊತ್ತಾಗಲಿಲ್ಲ,

ಶ್ರೀ ಎಸ್. ಸುರೇಶ್‌ಕುಮಾರ್: ಶ್ರೀ ಖಮರುಲ್ಲಾ ಇಸ್ಲಾಂ ಅವರು.

ಶ್ರೀ ಪಿ.ಜಿ. ಆರ್. ಸಿಂಧ್ಯ: ಶ್ರೀಖಮರುಲ್ಲಾ ಇಸ್ಲಾಂರವರು ನಾಪತ್ತೆಯಾಗಿದ್ದಾರೆ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಹಳ್ಳಿಗಳಲ್ಲಿ ಆ್ಯಕ್ಚುಯಲ್ ಆಗಿ ನಾವು ಹಸಿರು ಕಾರ್ಡ್‌ನ್ನು ಕೊಟ್ಟಿದ್ದೆವು. ಮಾನ್ಯ ಸಚಿವರಾದ ಶ್ರೀ ಇನಾಂದಾರ್‌ರವರೂ ಸಹ ನಾಪತ್ತೆಯಾಗಿದ್ದಾರೆ. ಈಗ ಆಹಾರ ಮಂತ್ರಿಗಳಾಗಿ ಶ್ರೀ ರಾಮಲಿಂಗಾರೆಡ್ಡಿಯವರು ಇರಬೇಕು, ಅವರು ಸಮರ್ಥರಾಗಿದ್ದಾರೆ, ಅವರು ಇರುವುದರಲ್ಲಿ ಕೆಲಸ ಮಾಡುತ್ತಾರೆ, ಪರವಾಗಿಲ್ಲ. ನಮ್ಮ ಕಾಲದಲ್ಲಿ 67 ಲಕ್ಷ ಹಸಿರು ಕಾರ್ಡ್‌ನ್ನು ಕೊಟ್ಟೆವು ಎಂದು ಹೇಳಿ, ಇವರ ಹೆಸರನ್ನು ಹಾಕಿಕೊಳ್ಳಬೇಕೆಂದು ಕಾರ್ಡ್‌ನ ಕಲರ್‌ನ್ನು ಚೇಂಜ್ ಮಾಡಿದರು. ಆ ಕಾರ್ಡುಗಳ ವಿತರಣೆಯೂ ಸರಿಯಾಗಿ ಆಗಿಲ್ಲ. ಈಗ ನಿಮ್ಮ ಕೈಯಲ್ಲಿ ಮಾಡುವ ಶಕ್ತಿಯಿಲ್ಲ, ನೀವು ಮಾಡುವುದರಲ್ಲಿ ಹಾಗೆಯೇ ಉದುರಿಹೋಗುತ್ತಿದ್ದೀರಿ ಅದರ ಬಗ್ಗೆ ನಾನು ಏನು ಸಜೆಸ್ಟ್ ಮಾಡುತ್ತಿದ್ದೇನೆಂದರೆ, ಹೇಗೂ ಬೇಕಾದಷ್ಟು ಫುಡ್‌ಗ್ರೈನ್ಸ್ ಇದೆ. ಗೌರ್ನಮೆಂಟ್ ಆಫ್ ಇಂಡಿಯಾದವರು ನಿಮಗೆ ಹೆಲ್ಪ್ ಮಾಡುವುದಕ್ಕೂ ಸಹ ತಯಾರಾಗಿದ್ದಾರೆ, 67 ಲಕ್ಷ ಹಸಿರುಕಾರ್ಡುಗಳು ಏನಿವೆ, ಅವೆಲ್ಲವನ್ನೂ ಕೊಟ್ಟಿರತಕ್ಕಂತಹದ್ದು ಕೂಲಿ ಮಾಡತಕ್ಕಂತಹ ಜನಗಳಿಗೆ ಈಗ ತೊಂದರೆ ಬಂದಿರುವುದು ಬರಗಾಲದಿಂದ ಕುಡಿಯುವ ನೀರಿಗೊಂದು, ಇನ್ನೊಂದು ಕಾಳುಗಳಿಗೆ, ಮತ್ತು ಕೂಲಿ ಮಾಡುವವರಿಗೆ ಆ ಕೂಲಿ ಮಾಡುವವರಿಗೆ 67 ಲಕ್ಷ ಹಸಿರು ಕಾರ್ಡುಗಳನ್ನೇನು ವಿತರಣೆ ಮಾಡಿದ್ದಾರೆ, ಆ ಎಲ್ಲಾ ಕಾರ್ಡುದಾರರಿಗೆ ಸಹಿತ

10 ಕೆಜಿ ಅಕ್ಕಿಯನ್ನು, ಒಂದಿಷ್ಟು ಗೋಧಿಯನ್ನು ಪ್ರತಿ ತಿಂಗಳು ಬರುವ ಹಾಗೆ ಮಾಡಬೇಕೆಂಬ ಬಗ್ಗೆ ನನ್ನ ಒತ್ತಾಯವಿದೆ. ನಾನು ಕಾರ್ಮಿಕ ಮಂತ್ರಿಗಳನ್ನು ಏತಕ್ಕಾಗಿ ಹುಡುಕುತ್ತಿದ್ದೇನೆಂದರೆ, ಈಗ ಹಳ್ಳಿಗಳಲ್ಲಿ ಸರಿಯಾಗಿ ಅಗ್ರಿಕಲ್ಚರ್ ಲೇಬರ್ಸ್ ಲಿಸ್ಟ್‌ನ್ನು ಯಾರ ಕಾಲದಲ್ಲೂ ಸಹ ಸರಿಯಾಗಿ ಮಾಡುವುದಕ್ಕಾಗಲಿಲ್ಲ. ಅದು ಸರಿಯಾಗಿ ಆಗಬೇಕಾಗುತ್ತದೆ, 1-2 ಎಕರೆ ಜಮೀನು ಇರುವವರೂ ಸಹ 3 ತಿಂಗಳು ವ್ಯವಸಾಯವನ್ನು ಮಾಡಿಕೊಂಡು ಆಮೇಲೆ ಕೂಲಿಯನ್ನು ಮಾಡುತ್ತಾರೆ. ಕೂಲಿ ಮಾಡತಕ್ಕಂತಹವರು ಎಲ್ಲಾ ಜಾತಿಗಳಲ್ಲೂ ಸಹ ಇದ್ದಾರೆ. ಆ ಕೂಲಿ ಮಾಡತಕ್ಕಂತಹವರ ಪಟ್ಟಿ ಸರಿಯಾಗಿಲ್ಲ, ಈಗ ಕಾಫಿ ಪ್ಲಾಂಟರ್ಸ್‌ದ್ದು, ಕೂಲಿ ಮಾಡತಕ್ಕಂತಹವರು ಯಾರು ಎನ್ನತಕ್ಕಂತಹದ್ದರ ಬಗ್ಗೆ ಒಂದು ಪಟ್ಟಿ ಇದೆ. ಆದರೆ ಬೇರೆ ಅಗ್ರಿಕಲ್ಚರ್ ಲೇಬರ್ಸ್ ಯಾರು ಇದ್ದಾರೆ ಅವರದ್ದು ಇಲ್ಲ, ಅವರ ಬಗ್ಗೆ ಒಂದು ಪಟ್ಟಿಯನ್ನು ಮಾಡಿ, ಹಸಿರು ಕಾರ್ಡುಗಳಿಗೆ ಒಂದಿಷ್ಟು ಕಾಳುಗಳನ್ನು ಕೊಡುವ ಹಾಗೆ ಮಾಡಿದರೆ ನಿಮಗೆ ಬಹಳ ದೊಡ್ಡ ಪುಣ್ಯ ಬರುತ್ತದೆ. ನೀವು ಇರುವ ಅಧಿಕಾರದ ಅವಧಿಯಲ್ಲಿ ಕೊನೆಯಪಕ್ಷ ಹೋಗುವಾಗಲಾದರೂ ಒಳ್ಳೆಯ ಕೆಲಸವನ್ನು ಮಾಡಿದರೂ ಎಂದು ಜನರು ಹೇಳಬಹುದೆಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ಈ ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸಬೇಕು. ಈಗ ಪೊಲೀಸ್‌ನವರ ಗತಿ ಝಳಕಿಯಲ್ಲಿ ಏನಾಯಿತೆಂದು ನಾಳೆ ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡುತ್ತೇನೆ. ಏತಕ್ಕಾಗಿ ಪೊಲೀಸ್‌ನವರು ನೇಣು ಹಾಕಿಕೊಂಡರು, ಯಾರು ನೇಣು ಹಾಕಿದರು ಅದಕ್ಕೆ ಕಾರಣವೇನು? ಇವೆಲ್ಲವನ್ನು ಹುಡುಕೋಣ, ಪೊಲೀಸ್‌ನವರ ಮೂಲಕ ನಾವು ಜಪ್ತಿ ಮಾಡಿಸುತ್ತೇವೆಂದರೆ, ಪೊಲೀಸ್‌ನವರಿಗೂ ಸಹ ಕಷ್ಟವಾಗುತ್ತದೆ, ಅವರು ಒಪ್ಪುವುದಿಲ್ಲ ನಿಮ್ಮ ಆರ್ಡರ್ಸ್‌ನ್ನು ಅವರು ಒಪ್ಪುವುದಿಲ್ಲ ಒಬೇ ಮಾಡುವುದಿಲ್ಲ. ವಿದ್ಯುಚ್ಛಕ್ತಿ ಇಲಾಖೆಯೂ ಸಹಿತ ಬಹಳ ಪದಗೆಟ್ಟು ಹೋಗಿದೆ. ಯಾವ ಕಾಲದಲ್ಲಿಯೂ ಸಹ ಇಷ್ಟೊಂದು ಹದಗೆಟ್ಟಿರಲಿಲ್ಲ. ದಿನದಲ್ಲಿ 4-5 ಗಂಟೆಯಾದರೂ ವಿದ್ಯುಚ್ಛಕ್ತಿಯನ್ನು ಕೊಡುವಂತಾಗಬೇಕು. ದೇವರ ಹೆಸರನ್ನು ಬೇಕಾದರೂ ಹೇಳಬಹುದು, ದೇವರು ವರವನ್ನು ಕೊಟ್ಟುಬಿಡುತ್ತಾರೆ ತಿರುಪತಿ ವೆಂಕಟರಮಣಸ್ವಾಮಿ ವರ ಕೊಡುತ್ತಾರೆ, ಆದರೆ ವಿದ್ಯುಚ್ಛಕ್ತಿ ಇಲಾಖೆಯವರು ಕೊಡುವುದಿಲ್ಲ 5-6 ಗಂಟೆಯಾದರೂ ಕನಿಷ್ಠಪಕ್ಷ ವಿದ್ಯುತ್ತನ್ನು ಕೊಡುವ ಹಾಗೆ ಮಾಡಬೇಕು, ಮಾನ್ಯ ಕೌಜಲಗಿಯವರೇ, ನೀವು ತತ್‌ಕ್ಷಣ ನೀವು ಟ್ರಜರಿ ಬ್ಯಾನ್‌ನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಮಾನ್ಯ ದೇಶಪಾಂಡೆಯವರು ಹೇಳಿದರೂ ಮಾನ್ಯ ಮುಖ್ಯಮಂತ್ರಿಗಳು ತೆಗೆಯುವ ಸ್ಥಾನದಲ್ಲಿಲ್ಲ, ಮಾನ್ಯ ಶಿವಕುಮಾರ್‌ರವರು ಹೇಳಿದರೂ ಸಹ ಟ್ರಜರಿ ಬ್ಯಾನ್‌ನ್ನು ತೆಗೆಸುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಯಾರಿಲ್ಲ ಅವರಿಗೆ ತೊಂದರೆ ಇದೆ. ಇದರ ಬಗ್ಗೆ ನಾನು ಏನು ಸಲಹೆಯನ್ನು ಮಾಡುತ್ತೇನೆಂದರೆ, ಸುಮಾರು 70-80 ಕೋಟಿ ರೂಪಾಯಿಗಳನ್ನು ಯಾರ ಕಡೆಯಿಂದಲಾದರೂ ಸಾಲವನ್ನು ತೆಗೆದುಕೊಂಡು ಬಂದು, ಪಾಪ ಆ ಬೆಳೆ ವಿಮೆ ಬರುತ್ತದೆಂದು ರೈತರು ಜಾತಕ ಪಕ್ಷಿಗಳ ಹಾಗೆ ಕಾದಿದ್ದಾರಲ್ಲಾ ಅವರಿಗೆ ಸಹಾಯವನ್ನು ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಮಾನ್ಯಉಪಾಧ್ಯಕ್ಷರು ನಮ್ಮ ಮೇಲೆ ಕರುಣೆಯನ್ನಿಟ್ಟು ಬೆಲ್ ಹೊಡೆಯದೆ ಇಷ್ಟೊಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು: ಈಗ ಮಾನ್ಯ ಬಿ.ಆರ್. ಯಾವಗಲ್‌ರವರು ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಈಗಾಗಲೇ 6 ಗಂಟೆಯಾಗಿದೆ ನಾಳೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಬಿ.ಆರ್. ಯಾವಗಲ್ (ನರಗುಂದ): ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಭಾಷಣವನ್ನು ಪ್ರಾರಂಭ ಮಾಡುತ್ತೇನೆ, ನಾಳೆ ಮುಂದುವರೆಸುತ್ತೇನೆ.

ಉಪಾಧ್ಯಕ್ಷರು: ತಾವು ಬೇಗನೆ ಮುಗಿಸುತ್ತೀರಿ, ಈಗ ಮಾತನಾಡಿ.

ಶ್ರೀ ಬಿ.ಆರ್. ಯಾವಗಲ್: ಈಗ ನಾನು ಪ್ರಾರಂಭ ಮಾಡುತ್ತೇನೆ, ನಾಳೆ ದಿವಸ ಮುಗಿಸುತ್ತೇನೆ. ಪೂರ್ಣ ಮಾಡುವುದು ಬೇಡ.

ಉಪಾಧ್ಯಕ್ಷರು: ಮಾನ್ಯ ಯಾವಗಲ್‌ರವರೆ ನಾಳೆ ನೀವು ಭಾಷಣ ಪ್ರಾರಂಭ ಮಾಡುತ್ತೀರಾ? ಹಾಗದರೆ ಈಗ ಸದನವನ್ನು ನಾಳೆ ಬೆಳಿಗ್ಗೆ 11-00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು
ಪುನಃ ದಿನಾಂಕ: 10ನೇ ಜುಲೈ 2002ರ ಬುಧವಾರದಂದು
ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು)

10. ಅನುಬಂಧ I

ಶೇಂದಿಗೆ ಲೀಟರ್ ಫೀ ಮನ್ನಾ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಮೂಲಕ ನೀಡಲಾದ ಉತ್ತರಗಳು.

ಶೇಂದಿಗೆ ಲೀಟರ್ ಫೀ ಮನ್ನಾ

1(56) - ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಂದಿ ಬಗ್ಗೆ ಲೀಟರ್ ಫೀ ಮನ್ನಾ ಮಾಡುವಂತೆ ಆದೇಶಿಸುವುದಾಗಿ ಹಿಂದಿನ ಅಧಿವೇಶನದಲ್ಲಿ ತಿಳಿಸಿರುವಿರಿ; ಆದರೆ ಈ ತನಕ ಸರ್ಕಾರ ಯಾವುದೇ ಆದೇಶ ನೀಡಿಲ್ಲ ವಿಳಂಬಕ್ಕೆ ಕಾರಣವೇನು?

ಆ) ಈ ಲೀಟರ್ ಫೀ ಅಡಚಣೆಯಿಂದಾಗಿ ಹಲವಾರು ಮೂರ್ತೆದಾರರ ಸಹಕಾರಿ ಸಂಘಗಳು ತಮ್ಮ ವ್ಯವಹಾರ ನಡೆಸಲಾಗದ ಪರಿಸ್ಥಿತಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ಸಚಿವರು)

ಅ) ಈ ಬಗ್ಗೆ ಸಧ್ಯದಲ್ಲೇ ಆದೇಶ ಹೊರಡಿಸಲಾಗುವುದು.